

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 14 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 149 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಸಿಎಂ ಸಿದ್ದರಾಮಯ್ಯ ಪತ್ನಿ ಕೋರಿದ್ದು 13! ಮುಡಾ ನೀಡಿದ್ದು 14 ನಿವೇಶನ!!

ಸಿಎಂ ಆಪ್ತ ಸಹಾಯಕನ ಅರ್ಜಿ ಆಧರಿಸಿ ಒಂದೇ ದಿನದಲ್ಲಿ ಕಂದಾಯ ಪತ್ರ ರೆಡಿ!



ಮುಡಾ ಕಚೇರಿ

ಎಸ್.ಟಿ.ರವಿಕುಮಾರ್

ಮೈಸೂರು, ಸೆ. 13– ಸಾಮಾನ್ಯ ನಾಗರಿಕ ತನ್ನ ಕಾನೂನುಬದ್ಧ ಸ್ವತ್ತುಗಳ ನೋಂದಣಿ, ಖಾತಾ, ಕಂದಾಯ, ಮತ್ತಿತರ ಅಧಿಕೃತ ದಾಖಲೆ ಕೋರಿ ಅರ್ಜಿ ಸಲ್ಲಿಸಿದರೂ, ತಿಂಗಳು, ವರ್ಷಗಟ್ಟಲೇ ಸತಾಯಿಸುವ ಮುಡಾ ಅಧಿಕಾರಿಗಳು, ಅಧಿಕಾರಸ್ಥ ಪ್ರಭಾವಿಗಳಿಗೆ ಅವರ ಪರವಾಗಿ ಬೇರೆಯವರು ಸಲ್ಲಿಸಿದ ಅರ್ಜಿ ಮೇರೆಗೆ ಕೋಟ್ಯಾಂತರ ರೂ. ಬೆಲೆ ಬಾಳುವ ನಿವೇಶನಗಳ ಖಾತಾ ನೋಂದಾವಣೆ ಮಾಡಿ, ಒಂದೇ ದಿನದಲ್ಲಿ ಕಂದಾಯ ಪತ್ರವನ್ನೂ ನೀಡಿರುವುದು ಬೆಳಕಿಗೆ ಬಂದಿದೆ.

ಮೈಸೂರು ತಾಲೂಕು ಕೆಸರೆ ಗ್ರಾಮದ ಸರ್ವೆ ನಂಬರ್ 464ರಲ್ಲಿ 23.16 ಎಕರೆ ಭೂಮಿಯನ್ನು ದೇವನೂರು 3ನೇ ಹಂತದ ವಸತಿ ಬಡಾವಣೆಗಾಗಿ ಮುಡಾ ಸ್ವಾಧೀನ ಪ್ರಕ್ರಿಯೆಗೊಳಪಡಿಸದೇ ಬಳಸಿಕೊಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಬಿ.ಎಂ. ಪಾರ್ವತಿ ಕೋರಿದ ಹಿನ್ನೆಲೆಯಲ್ಲಿ ಪ್ರಾಧಿಕಾರವು ಶೇ. 50:50ರ ಅನುಪಾತದಡಿ ವಿಜಯನಗರ 3 ಮತ್ತು 4ನೇ ಹಂತದಲ್ಲಿ ಅಭಿವೃದ್ಧಿಪಡಿಸಿರುವ 50x80 ಅಡಿ ಅಳತೆಯ 14 ನಿವೇಶನಗಳನ್ನು ಮಂಜೂರು ಮಾಡಿರುವ ಪ್ರಕರಣ ಸಂಬಂಧ ರಾಜ್ಯಪಾಲರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಆದೇಶ ನೀಡಿದ್ದು, ಅದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆದು ಈಗ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.



ಡಾ.ಡಿ.ಬಿ.ನಟೇಶ್

ಆಪ್ತನೇ ಸಹಿ ಮಾಡಿ ಅರ್ಜಿ: ಸಿದ್ದರಾಮಯ್ಯರ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ಮಂಜೂರಾಗಿರುವ ವಿಜಯನಗರ 3ನೇ ಹಂತ ಸಿ, ಡಿ, ಇ ಮತ್ತು ಜಿ ಬ್ಲಾಕ್‌ನ ನಿವೇಶನ ಸಂಖ್ಯೆ 25, 331, 332, 213, 214, 215, 05, 4ನೇ ಹಂತ, 2ನೇ ಘಟ್ಟದ ನಿವೇಶನ ಸಂಖ್ಯೆ 5108, 5085, 11189, 10855, 12065 ಮತ್ತು 12068ಗೆ 2022ರ ಜ.13 ರಂದು ಕ್ರಯಪತ್ರ ನೋಂದಣಿ ಮಾಡಿರುವುದರಿಂದ ಸದರಿ ನಿವೇಶನಗಳಿಗೆ ಖಾತಾ ನೋಂದಣಿ ಮಾಡಿ, ಕಂದಾಯ ಪತ್ರ ಕೊಡಿಸಿಕೊಡಬೇಕೆಂದು ಕೋರಿ ಸಿದ್ದರಾಮಯ್ಯ ಅವರ ಖಾಸಗಿ ಆಪ್ತ ಸಹಾಯಕ ಎಸ್.ಜಿ. ದಿನೇಶ್‌ಕುಮಾರ್ ಉರೂಫ್ ಸಿ.ಟಿ.ಕುಮಾರ್ 2022ರ ಜನವರಿ 14ರಂದು ಮುಡಾ ಆಯುಕ್ತರಿಗೆ ಅರ್ಜಿ ಸಲ್ಲಿದ್ದಾರೆ.

ಕೋರಿದ್ದು 13ಕ್ಕೆ, ನೀಡಿದ್ದು 14 ನಿವೇಶನಗಳಿಗೆ: ಕುಮಾರ್ ■ 6ನೇ ಪುಟಕ್ಕೆ

ಕೃಷಿ ಭೂಮಿಯನ್ನು ಮಾಲೀಕರಿಂದ ನೇರವಾಗಿ ಹಸ್ತಾಂತರಿಸಿಕೊಳ್ಳಬಾರದು

2020ರಲ್ಲೇ ಸ್ಥಳೀಯ ಸಂಸ್ಥೆಗಳಿಗೆ ಸುತ್ತೋಲೆ ಮೂಲಕ ಸರ್ಕಾರದ ಸೂಚನೆ

ಮೈಸೂರು, ಸೆ. 13(ಆರ್‌ಕೆ)– ಕೃಷಿ ಜಮೀನನ್ನು ಭೂ ಮಾಲೀಕರಿಂದ ನೇರವಾಗಿ ಹಸ್ತಾಂತರಿಸಿಕೊಳ್ಳಬಾರದೆಂದು 2020ರ ಸೆಪ್ಟೆಂಬರ್ 30ರಂದೇ ಸರ್ಕಾರ ಸುತ್ತೋಲೆ ಹೊರಡಿಸಿ ಸ್ಥಳೀಯ ಸಂಸ್ಥೆಗಳಿಗೆ ಖಡಕ್ ಸೂಚನೆ ನೀಡಿದೆ.

ಕೃಷಿ ಜಮೀನನ್ನು ಭೂ ಪರಿವರ್ತಿಸಿ ವಿನ್ಯಾಸ ಅನುಮೋದನೆ ಪಡೆಯದೇ ನೇರವಾಗಿ ಸ್ಥಳೀಯ ಸಂಸ್ಥೆಗಳು ರಸ್ತೆಗಾಗಿ ಭೂ ಮಾಲೀಕರಿಂದ ಹಸ್ತಾಂತರಿಸಿಕೊಳ್ಳುವುದು, ಯೋಜನಾ ದೃಷ್ಟಿಯಿಂದ ಸೂಕ್ತವಲ್ಲ ಎಂದು ನಗರಾಭಿವೃದ್ಧಿ ಇಲಾಖೆಯ ಅಂದಿನ ಅಧೀನ ಕಾರ್ಯದರ್ಶಿ ಸಿ.ಎಸ್. ಶಿವಕುಮಾರಸ್ವಾಮಿ ಸುತ್ತೋಲೆಯಲ್ಲಿ ತಿಳಿಸಿದ್ದಾರೆ. ಅನಿವಾರ್ಯ ಸಂದರ್ಭಗಳಲ್ಲಿ ಜಿಲ್ಲಾಧಿಕಾರಿಗಳು ಕಂದಾಯ ಕಾಯ್ದೆಯಡಿ ಅಧಿಸೂಚನೆ ಹೊರಡಿಸಿದ ನಂತರ ಸ್ಥಳೀಯ ■ 6ನೇ ಪುಟಕ್ಕೆ

ಬಿಜೆಪಿ ಆಡಳಿತ ಅವಧಿಯ ಹಗರಣಗಳ ಸಂಬಂಧ ನಾಲ್ಕು ವಾರದೊಳಗೆ

ಚಾರ್ಜ್‌ಶೀಟ್ ಸಲ್ಲಿಸಿ

ಸಂಬಂಧಪಟ್ಟ ತನಿಖಾಧಿಕಾರಿಗಳಿಗೆ ಡಾ.ಪರಮೇಶ್ವರ್ ನೇತೃತ್ವದ ಸಚಿವರ ಸಮಿತಿ ಸೂಚನೆ



ಬೆಂಗಳೂರು, ಸೆ.13 (ಕೆಎಂಶಿ)– ಬಿಜೆಪಿ ಆಡಳಿತದಲ್ಲಿ ನಡೆದಿರುವ ಹಗರಣಗಳ ತನಿಖೆ ಪೂರ್ಣಗೊಳಿಸಿ ಎರಡರಿಂದ ನಾಲ್ಕು ವಾರದೊಳಗೆ ಆರೋಪ ಪಟ್ಟಿ ಸಲ್ಲಿಸುವಂತೆ ಪೊಲೀಸ್ ಹಾಗೂ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಸರ್ಕಾರ ಆದೇಶ ಮಾಡಿದೆ.

ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅಧಿಕಾರಾವಧಿಯಲ್ಲಿ ನಡೆದಿರುವ 21 ಹಗರಣಗಳಿಗೆ ಸಂಬಂಧಿಸಿದಂತೆ ಸರ್ಕಾರ ಮತ್ತು ತನಿಖಾ ಸಂಸ್ಥೆಗಳ ಹಂತದಲ್ಲಿ ಚಾಲ್ತಿಯಲ್ಲಿರುವ ತನಿಖಾ ಪ್ರಗತಿ ಪರಿಶೀಲಿಸಿದ ಗೃಹ ಸಚಿವ ಡಾ.ಜಿ. ಪರಮೇಶ್ವರ್ ನೇತೃತ್ವದ ಸಚಿವರ ಸಮಿತಿ ಈ ಸೂಚನೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ಎರಡು ದಿನಗಳ ಹಿಂದಷ್ಟೇ ಹಗರಣಗಳ ತನಿಖಾ ಪ್ರಗತಿ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲನೆಗೆ ನೇಮಕಗೊಂಡಿದ್ದ ಸಚಿವರ ಸಮಿತಿ ಸಭೆ ಸೇರಿ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ತನಿಖಾ ಸಂಸ್ಥೆಗಳ ಮುಖ್ಯಸ್ಥರು ಮತ್ತು ಅಧಿಕಾರಿಗಳಿಂದ ಮಾಹಿತಿ ಪಡೆಯಿತು. ಕೆಲವು ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ಪೂರ್ಣಗೊಂಡಿದ್ದರೂ ಇದುವರೆಗೆ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣ ಪಡೆಯಲಾಯಿತು.

ಮುಖ್ಯಮಂತ್ರಿಗಳು ಈಗಾಗಲೇ ಹೇಳಿರುವಂತೆ 21 ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ ನಿಮ್ಮಲ್ಲಿ ದಾಖಲೆಗಳಿರುತ್ತವೆ, ಇಷ್ಟಿದ್ದರೂ ಯಾರ ವಿರುದ್ಧವೂ ಇನ್ನೂ ಏಕೆ ಕ್ರಮ ಕೈಗೊಂಡಿಲ್ಲ.

ಕೆಲವು ವಿಷಯಗಳಲ್ಲಿ ತನಿಖೆ ಮುಗಿದಿದ್ದರೆ ನೀವೇ ಸಂಬಂಧಪಟ್ಟವರ ವಿರುದ್ಧ ಎಫ್‌ಐಆರ್ ದಾಖಲಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಿ. ಕೆಲವು ಹಗರಣಗಳ ವಿಷಯದಲ್ಲಿ ಸರ್ಕಾರದ ಅನುಮತಿ ಬೇಕಿದ್ದರೆ, ಸಂಪುಟದ ಮುಂದಿಡಿ, ಇನ್ನು ವಿಳಂಬ ಮಾಡಬೇಡಿ ಎಂದು ಸೂಚಿಸಿದ್ದಾರೆ. ಮುಖ್ಯಮಂತ್ರಿ ಅವರು ನಮ್ಮ ಸಮಿತಿಗೆ ಎರಡು ತಿಂಗಳ ಗಡುವು ನೀಡಿದ್ದಾರೆ, ನಾವು ನಿಮಗೆ ಎರಡರಿಂದ ನಾಲ್ಕು ವಾರಗಳಲ್ಲಿ ಕೆಲವು ಹಗರಣಗಳಿಗೆ ಮೋಕ್ಷ ದೊರಕಿಸಲು ಸಮಯಾವಕಾಶ ನೀಡುತ್ತೇವೆ. ಯಾರು ಎಷ್ಟೇ ದೊಡ್ಡವರಿರಲಿ, ತಪ್ಪು ಮಾಡಿದ್ದರೆ ಅವರನ್ನು ಕಾನೂನು ಚೌಕಟ್ಟಿಗೆ ತನ್ನಿ ಮುಂದೆ ■ 6ನೇ ಪುಟಕ್ಕೆ

ಸಹಜ ಸ್ಥಿತಿಯತ್ತ ನಾಗಮಂಗಲ; ಸರ್ಕಲ್ ಇನ್ಸ್‌ಪೆಕ್ಟರ್ ಅಮಾನತು

ಪಟ್ಟಣದ ಶಾಲಾ–ಕಾಲೇಜು ಪುನರಾರಂಭ

● ಮಾವನ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಆರೋಪಿಗೆ ಅವಕಾಶ ● ಪಟ್ಟಣದಲ್ಲಿ ಪೊಲೀಸ್ ಸರ್ಪಗಾವಲು



ನಾಗಮಂಗಲ ಪಟ್ಟಣ ಸಹಜ ಸ್ಥಿತಿಗೆ ಮರಳುತ್ತಿರುವುದು.



ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್

ನಾಗಮಂಗಲ, ಸೆ.13–ಕೋಮು ದಳ್ಳುರಿಗೆ ನಲುಗಿರುವ ನಾಗಮಂಗಲ ಪಟ್ಟಣ ಸಹಜ ಸ್ಥಿತಿಗೆ ಮರಳುತ್ತಿದೆ. ಎರಡು ದಿನದ ಹಿಂದೆ ದುಷ್ಕರ್ಮಿಗಳು ಹಚ್ಚಿದ್ದ ಬೆಂಕಿ ಇನ್ನೂ ಆರಿಲ್ಲ ಅಗ್ನಿಶಾಮಕ ದಳ ಸಿಬ್ಬಂದಿ ಇಂದೂ ಕೂಡ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದರು. ಈ ನಡುವೆ ನಾಗಮಂಗಲ ಪೊಲೀಸ್ ಇನ್ಸ್‌ಪೆಕ್ಟರ್ ಅಶೋಕ್‌ಕುಮಾರ್ ಅವರನ್ನು ಅಮಾನತುಪಡಿಸಲಾಗಿದೆ. ಶಾಲಾ–ಕಾಲೇಜುಗಳು ಪುನರಾರಂಭವಾಗಿವೆ. ಮತ್ತೊಂದೆಡೆ ಜೈಲು ಸೇರಿರುವ ಆರೋಪಿಯೊಬ್ಬನ ಮಾವ ಮೃತಪಟ್ಟಿದ್ದು, ನ್ಯಾಯಾಲಯದ ಅನುಮತಿ ಮೇರೆಗೆ ಆತ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದ. ಗಣೇಶೋತ್ಸವ ■ 6ನೇ ಪುಟಕ್ಕೆ





ಮೈಸೂರು ಮಿತ್ರ ಶನಿವಾರ 14 ಸೆಪ್ಟೆಂಬರ್ 2024

ನೂತನ ಹುಂಡೈ ಅಲ್ಕಜರ್ ಮಾರುಕಟ್ಟೆಗೆ



ಮೈಸೂರಿನ ಅದ್ವೈತ್ ಹುಂಡೈ ಶೋರೂಂನಲ್ಲಿ ಇಂಟಲಿಜೆಂಟ್, ವರ್ಸ್‌ಟೈಲ್, ಇಂಟೆನ್-6 ಹಾಗೂ 7 ಸೀಟರ್ ಎಕ್ಸ್‌ಯುವಿ ನೂತನ ವಾಹನ 'ಅಲ್ಕಜರ್' ಗುರುವಾರ ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು. ಈ ವೇಳೆ ಮ್ಯಾನೇಜರ್ ಹರೀಶ್ವರ್, ಮೋಹನ್, ಸೇಲ್ಸ್ ಮ್ಯಾನೇಜರ್ ಬಿ.ಚಂದನ್, ಜನರಲ್ ಮ್ಯಾನೇಜರ್ (ಸರ್ವಿಸ್) ದಿವಾಕರ್ ಬಾಬು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜನರಲ್ ಮ್ಯಾನೇಜರ್ (ಸೇಲ್ಸ್) ಕೆ.ಸಿ.ಪ್ರಮೋದ್, ಸರ್ವಿಸ್ ಮ್ಯಾನೇಜರ್ ಕೆ.ಎಸ್.ಕುಮಾರ್ ಉಪಸ್ಥಿತರಿದ್ದರು.

ದಸರಾದಲ್ಲಿ ಅರ್ಜುನನ ಸ್ಮರಿಸುವ ಸೂಕ್ತ ವೇದಿಕೆಗೆ ಮನವಿ



ದಸರಾ ಅಂಬಾರಿ ಆನೆ ಅರ್ಜುನ ಪ್ರತಿಕೃತಿ ರಚಿಸಿ, ಅರ್ಜುನನ ಗ್ಯಾಲರಿ ಸ್ಥಾಪಿಸುವಂತೆ ಕೆಎಂಪಿಕೆ ಟ್ರಸ್ಟ್ ವತಿಯಿಂದ ಅಪರ ಜಿಲ್ಲಾಧಿಕಾರಿ ಶಿವರಾಜು ಅವರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು: ಮೈಸೂರು ದಸರಾ ಅಂಬಾರಿ ಆನೆಯಾಗಿ ಇತಿಹಾಸ ಬರೆದ ಅರ್ಜುನನ ಪ್ರತಿಕೃತಿ ರಚಿಸಿ ಗೌರವ ಸಲ್ಲಿಸುವುದು, ಜೊತೆಗೆ ಅರ್ಜುನನ ಗ್ಯಾಲರಿ ಸ್ಥಾಪಿಸುವಂತೆ ಕೆಎಂಪಿಕೆ ಟ್ರಸ್ಟ್ ವತಿಯಿಂದ ಅಪರ ಜಿಲ್ಲಾಧಿಕಾರಿ ಶಿವರಾಜು ಮೂಲಕ ಮನವಿ ಸಲ್ಲಿಸಲಾಯಿತು.

ಸತತ 9 ಬಾರಿ ಮೈಸೂರು ದಸರಾ ಮಹೋತ್ಸವದಲ್ಲಿ ಚಿನ್ನದ ಅಂಬಾರಿ ಹೊತ್ತು ಸಾಗಿದ್ದ ಅರ್ಜುನ ಆನೆ ಕಳೆದ ವರ್ಷ ಸಕಲೇಶಪುರ ಸಮೀಪ ಕಾಡಾನೆ ಸೆರೆ ಹಿಡಿಯುವ ಕಾರ್ಯಾಚರಣೆಯ ವೇಳೆ ಸಾವನ್ನಪ್ಪಿತ್ತು. 2019ರಲ್ಲಿ ದಸರಾದಿಂದ ನಿವೃತ್ತಿ ಹೊಂದಿ ಅರ್ಜುನ ಕಳೆದ ವರ್ಷದ ದಸರಾದಲ್ಲಿ ನಿಶಾನೆ ಆನೆಯಾಗಿ ಗಜಪಡೆಯನ್ನು ಮುನ್ನಡೆಸಿದ್ದ. ರಾಜ್ಯ ಸರ್ಕಾರ ಸಕಲೇಶಪುರದ ಅರಣ್ಯ ಪ್ರದೇಶದ ಅರ್ಜುನನ ಸಮಾಧಿ ಸ್ಥಳ ಹಾಗೂ ಆತನ ವಾಸಸ್ಥಳವಾಗಿದ್ದ ಎಚ್.ಡಿ. ಕೋಟೆಯ ಬಳ್ಳೆ ಆನೆ ಶಿಬಿರದಲ್ಲಿ ಸ್ಮಾರಕ ನಿರ್ಮಿಸುವುದಾಗಿ ಹೇಳಿತ್ತು. ಆದರೆ ಈವರೆಗೂ ಸ್ಮಾರಕ ನಿರ್ಮಾಣದ ಕಾಮಗಾರಿಯೇ ಪ್ರಾರಂಭವಾಗಿಲ್ಲ ಎಂದು ವಿಷಾದಿಸಿದರು.

90 ದಿನ ನಡೆಯುವ ಮೈಸೂರು ದಸರಾ ವಸ್ತುಪ್ರದರ್ಶನ ಆವರಣದ ಸರ್ಕಾರಿ ಮಳಿಗೆ ವಿಭಾಗ ಅರಣ್ಯ ಇಲಾಖೆಯ ವತಿಯಿಂದ ಅರ್ಜುನನ ಸೇವೆ, ಭಾವಚಿತ್ರ ಮಾಹಿತಿಯುಳ್ಳ ನಮ್ಮ ಅರ್ಜುನ ಗ್ಯಾಲರಿ ವಲಯ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ಮನವಿಯಲ್ಲಿ ಕೋರಲಾಗಿದೆ.


ಈ ಸಂದರ್ಭದಲ್ಲಿ ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಮಯೂರ ಕನ್ನಡ ಯುವಕರ ಬಳಗದ ಅಧ್ಯಕ್ಷ ಜಿ ರಾಘವೇಂದ್ರ, ಸಾಮಾಜಿಕ ಹೋರಾಟಗಾರ ನಜರ್‌ಬಾದ್ ಚರಣ್‌ರಾಜ್, ಬೈರತಿ ಲಿಂಗರಾಜು, ಸುಚೇಂದ್ರ, ಚಕ್ರಪಾಣಿ, ಮೋಹನ್‌ಕುಮಾರ್, ದುರ್ಗಾ ಪ್ರಸಾದ್, ಜೈ ಭೀಮ್ ಜನಸ್ಪಂದನ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜು ಹಾಗೂ ಇನ್ನಿತರರು ಹಾಜರಿದ್ದರು.

ಜಿಲ್ಲಾ ಮಟ್ಟಕ್ಕೆ ಆಯ್ಕೆ



ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಕಬಡ್ಡಿಯಲ್ಲಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ತರೀಪುರ ವಿನಾಯಕ ಪ್ರೌಢಶಾಲೆ ಪ್ರಥಮ ಬಹುಮಾನ ಪಡೆಯುವುದರೊಂದಿಗೆ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದೆ.

ನಿಧನ



ಪಿ.ಶಿವಲಿಂಗಪ್ಪ

ಮೈಸೂರು, ಸೆ. 13–ಮೈಸೂರಿನ ಕುವೆಂಪುನಗರ 4ನೇ ಹಂತದ ಪಡುವಣ ರಸ್ತೆ ನಿವಾಸಿ, ಅಂಚೆ ಇಲಾಖೆಯ ರೈಲ್ವೆ ಮೇಲ್ ಸರ್ವಿಸ್‌ನ ನಿವೃತ್ತ ಅಧಿಕಾರಿ ಪಿ.ಶಿವಲಿಂಗಪ್ಪ(88) ಸೆ.12ರಂದು ನಿಧನರಾದರು. ಮೃತರು ಪತ್ನಿ ಪಿ.ಧನಲಕ್ಷ್ಮಿ, ಮೂವರು ಪುತ್ರರು, ಪುತ್ರಿ, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಸೆ.14) ಬೆಳಗ್ಗೆ 11ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರೆ.ಫಾ.ಜೋಸೆಫ್ ರೋಡ್ರಿಗಸ್



ಮೈಸೂರು, ಸೆ.13–ಡಯೋಸಿಸ್ ಆಫ್ ಮೈಸೂರ್‌ನ ಧರ್ಮಗುರು ರೆವರೆಂಡ್ ಫಾದರ್ ಜೋಸೆಫ್ ರೋಡ್ರಿಗಸ್(77) ಅವರು ಇಂದು ಮೈಸೂರಿನ ಗಾಂಧಿ ನಗರದಲ್ಲಿನ ಹೋಂ ಫಾರ್ ದಿ ಏಜ್ಡ್‌ನಲ್ಲಿ ನಿಧನರಾದರು. ನಾಳೆ (ಶನಿವಾರ) ಬೆಳಿಗ್ಗೆ 8.30ರವರೆಗೆ ಇವರ ಪಾರ್ಥಿವ ಶರೀರವನ್ನು ಇಲ್ಲೇ ಇರಿಸಿದ್ದು, ನಂತರ 9 ಗಂಟೆಗೆ ಸಂತ ಜೋಸೆಫ್ ಕ್ಯಾಥಡ್ರಲ್‌ನಲ್ಲಿರಿಸಿ, ಪ್ರಾರ್ಥನೆ ಸಲ್ಲಿಕೆ ಬಳಿಕ ಗಾಂಧಿನಗರದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.



ಯಜಮಾನ್ ಚಿಕ್ಕನಿಂಗಯ್ಯ (ಪಾಪಣ್ಣ)

ಮೈಸೂರು, ಸೆ. 13– ಮೈಸೂರಿನ ಕೆಜಿ ಕೊಪ್ಪಲಿನ ಬಿಸಿಲು ಮಾರಮ್ಮ ದೇವಸ್ಥಾನದ ಗುಡ್ಡಪ್ಪನವರಾದ ಯಜಮಾನ್ ಚಿಕ್ಕನಿಂಗಯ್ಯ (ಪಾಪಣ್ಣ) ಅವರು ಇಂದು (ಸೆ. 13) ರಾತ್ರಿ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಬೋರಮ್ಮ, ಪುತ್ರ ವಾಣಿವಿಲಾಸ ವಾಟರ್ ವರ್ಕ್ಸ್ ಸ್ಟೋರ್ ಸೂಪರಿಂಟೆಂಡೆಂಟ್ ಸಿ. ಮಹದೇವು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಸೆ. 14) ಮಧ್ಯಾಹ್ನ 1 ಗಂಟೆಗೆ ಕೆಜಿ ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಶಾಸಕ ಕೆ. ಹರೀಶ್‌ಗೌಡ, ಮಾಜಿ ಶಾಸಕ ಎಲ್. ನಾಗೇಂದ್ರ, ವಾಣಿವಿಲಾಸ ವಾಟರ್ ವರ್ಕ್ಸ್ ನೌಕರರ ಸಂಘ ಸಂತಾಪ ಸೂಚಿಸಿದೆ.

ಹಿಂದೂ ಸಂಘಟನೆಗಳ ವತಿಯಿಂದ ಮೈಸೂರಲ್ಲಿ ಸಾರ್ವಜನಿಕ ಗಣೇಶ ವಿಸರ್ಜನೆ

ಅದ್ಧೂರಿ ಮೆರವಣಿಗೆ ಮೂಲಕ ಸಾಗಿ ಶ್ರೀರಂಗಪಟ್ಟಣದಲ್ಲಿ ವಿಸರ್ಜನೆ ಕಾರ್ಯ

ಮೈಸೂರು, ಸೆ.13(ಎಂಕೆ)– ವಿವಿಧ ಹಿಂದೂ ಸಂಘಟನೆಗಳ ವತಿಯಿಂದ ಮೈಸೂರಲ್ಲಿ ಸಾರ್ವಜನಿಕ ಗಣೇಶ ವಿಸರ್ಜನಾ ಮಹೋತ್ಸವ ಅದ್ಧೂರಿಯಾಗಿ ನೆರವೇರಿತು.

ಗಣೇಶ ಚತುರ್ಥಿ ಅಂಗವಾಗಿ ನಗರದ ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಗಳನ್ನು ಸಾರ್ವಜನಿಕ ಗಣೇಶ ವಿಸರ್ಜನಾ ಸಮಿತಿ ವತಿಯಿಂದ ಆಯೋಜಿಸಿದ್ದ ಮಹೋತ್ಸವದಲ್ಲಿ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಸಾಮೂಹಿಕವಾಗಿ ಅದ್ಧೂರಿ ಮೆರವಣಿಗೆ ನಡೆಸಿ ಶ್ರೀರಂಗಪಟ್ಟಣದಲ್ಲಿ ವಿಸರ್ಜನೆ ಮಾಡಲಾಯಿತು.

ಇದಕ್ಕೂ ಮುನ್ನ ನರಸಿಂಹರಾಜ ಕ್ಷೇತ್ರದ ಗಣೇಶ ಮೂರ್ತಿಗಳ ಮೆರವಣಿಗೆ ಫೌಂಟೇನ್ ವೃತ್ತದಿಂದ ಸಾಗಿ ವೀರನಗೆರೆ ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಅಲ್ಲಿಂದ ಅಶೋಕ ರಸ್ತೆ ಮಾರ್ಗವಾಗಿ ಶ್ರೀ ಕೋಟೆ ಆಂಜನೇಸ್ವಾಮಿ ದೇವಸ್ಥಾನದ ಎದುರು ಸೇರಿದರೆ, ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾ ಕಾರ್ಯಾಲಯದಿಂದ ಹೊರಟ ಹತ್ತಾರು ಗಣೇಶ ಮೂರ್ತಿಗಳ ಭವ್ಯ ಮೆರವಣಿಗೆ ಆರ್‌ಟಿಓ ವೃತ್ತ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆಯಲ್ಲಿ ಸಾಗಿ ಗನ್‌ಹೌಸ್ ವೃತ್ತ, ಬಿ.ಎನ್.ರಸ್ತೆ ಮೂಲಕ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಬಂದು ಸೇರಿತು.



ವಿವಿಧ ಹಿಂದೂ ಸಂಘಟನೆಗಳಿಂದ ಮೈಸೂರಲ್ಲಿ ಸಾರ್ವಜನಿಕ ಗಣೇಶ ವಿಸರ್ಜನಾ ಮಹೋತ್ಸವ ಅದ್ಧೂರಿಯಾಗಿ ನೆರವೇರಿತು.

ಈ ವೇಳೆ ಮಾರ್ಗದುದ್ದಕ್ಕೂ ಡೊಳ್ಳು ಕುಣಿತ, ಕಂಸಾಳೆ, ಪೂಜಾ ಕುಣಿತ ಮುಂತಾದ ಕಲಾತಂಡಗಳೊಂದಿಗೆ ಜೈಕಾರ ಕೂಗುತ್ತಾ ಸಾಗಿದ್ದ ಭಕ್ತ ಸಮೂಹ, ಡಿಜೆ ಸೌಂಡ್ಸ್‌ಗೆ ಕುಣಿದು ಕುಪ್ಪಳಿಸಿತು. ಕೇಸರಿ ಭಾವುಟ ಹಾರಿಸಿ, ಪಟಾಕಿ ಸಿಡಿಸಿ ಸಂಭ್ರಮಿಸಿ ಅಭಿಮಾನ ಮೆರೆದರು. ನಂತರ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ನಡೆದ ವೇದಿಕೆ ಕಾರ್ಯಕ್ರಮದ ಬಳಿಕ ದೇವರಾಜ ಅರಸು ರಸ್ತೆಯಲ್ಲಿ ಮೆರವಣಿಗೆ ನಡೆಸಿ ನಂತರ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಸಾಮೂಹಿಕ ವಿಸರ್ಜಿಸಿ ನೆರವೇರಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ, ಹಿಂದೂ ಜಾಗರಣಾ ವೇದಿಕೆ ವಿಭಾಗ ಪ್ರಮುಖ್ ಲೋಹಿತ್ ಅರಸ್, ಧಾರ್ಮಿಕ ಪ್ರತಿಷ್ಠಾನದ ಚರಣ್, ರುದ್ರಮೂರ್ತಿ, ಚೇತನ್, ಮಂಜುನಾಥ್, ಬಿಜೆಪಿ ಮುಖಂಡರು, ಹಿಂದೂ ಸಂಘಟನೆಗಳ ನೂರಾರು ಮಂದಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಸಾಮರಸ್ಯದ ಸಂಕೇತ...

ಸಾಮೂಹಿಕ ಗಣೇಶ ವಿಸರ್ಜನೆ ಎಂಬುದು ಸೌಹಾರ್ದತೆ, ಸಾಮರಸ್ಯದ ಸಂಕೇತವಾಗಿದ್ದು, ನಾವೆಲ್ಲಾ ಒಂದು ಎಂಬ ಸಂದೇಶವನ್ನು ಗಣಪತಿ ನೀಡುತ್ತಿದ್ದಾನೆ ಎಂದು ದೇವಸ್ಥಾನ ಸಂವರ್ಧನಾ ಸಮಿತಿ ಸಂಯೋಜಕ ಮನೋಹರ್ ಮಠದ್ ಹೇಳಿದರು. ಬಾಂಬ್ ಹಾಕದೆ, ಬಂದೂಕು ಹಿಡಿಯದೆ ಜಗತ್ತನ್ನೇ ಒಂದು ಗೂಡಿಸುವ ದೇಶ ಭಾರತ. ಭಾರತವಿಂದು ಜಗತ್ತಿಗೆ ಭಿಕ್ಷೆ ನೀಡುವ ದೇಶವಾಗಿದೆ. ವಿಶ್ವವೇ ಒಂದು ಕುಟುಂಬ ಎಂಬುದನ್ನು ಸಾರ್ಥಕ ಮಾಡುತ್ತಿದೆ ಎಂದರು.

ಸರ್ವಧರ್ಮ ಸಮಾನತೆಗೆ ಇರುವುದೊಂದೇ ದೇಶ ಭಾರತ. ಇನ್ನೊಬ್ಬರಿಗೆ ಒಳ್ಳೆಯದನ್ನು ಬಯಸುವುದು, ಎಲ್ಲರೊಂದಿಗೆ ಬದುಕುವುದೇ ಧರ್ಮ. ಅದರ ಆಚರಣೆ ಹಿಂದೂ ಧರ್ಮದಲ್ಲಿದೆ. ಗಣಪತಿಯ ಸಂದೇಶವೇ ಪರಿವರ್ತನೆಯಾಗಿದೆ ಎಂದರು.

ಒಳ ಮೀಸಲಾತಿ: ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆಯಿಂದ ಜನಜಾಗೃತಿ

ಮೈಸೂರು, ಸೆ.13(ಜಿಎ)–ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ತಳ ಸಮುದಾಯಗಳ ಒಳ ಮೀಸಲಾತಿ ಹಾಗೂ ಕೆನೆ ಪದರು ಕುರಿತ ವ್ಯಾಪಕ ಚರ್ಚೆ ನಡೆಯುತ್ತಿವೆ. ಆದರೆ ಇದರಲ್ಲಿ ಶೋಷಿತ ಸಮುದಾಯಗಳಲ್ಲಿ ಅಸಮಾಧಾನ ಹಾಗೂ ಅಸೂಯೆ ಮೂಡಿಸುತ್ತಿರುವುದು ಸರಿಯಲ್ಲ ಎಂದು ಕರ್ನಾಟಕ ದಲಿತ ಚಳವಳಿ ನವ ನಿರ್ಮಾನ ವೇದಿಕೆ ಮುಖಂಡ ಹರಿಹರ ಆನಂದಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವಿಚಾರವಾಗಿ ವೇದಿಕೆ ಜನಜಾಗೃತಿ ಮೂಡಿಸಲು ಜನಾಂದೋಲನ ಹಮ್ಮಿಕೊಂಡಿದ್ದು, ಇದರ ಅಂಗವಾಗಿ ಎಲ್ಲೆಡೆ ತಿಳುವಳಿಕೆ ಮೂಡಿಸುವ ಕರಪತ್ರ ವಿತರಿಸಲಾಗುತ್ತಿದೆ ಎಂದು ತಿಳಿಸಿದರು. ಎಸ್‌ಸಿ ಗುಂಪಿನೊಳಗೆ ರಾಜಕೀಯ ಕಾರಣಕ್ಕಾಗಿ ನುಸುಳಿದ ಜಾತಿಗಳು ನಿಜವಾಗಿ ಎಸ್‌ಸಿ ಮೀಸಲಾತಿಯ ಫಲಾನುಭವಿಗಳಾಗಬೇಕಾಗಿದ್ದ ಅಸ್ಪೃಶ್ಯ ಸಮುದಾಯಗಳನ್ನು ನಯವಾಗಿ ವಂಚಿಸುತ್ತಿದೆ. ಹೀಗಾಗಿ ಎಸ್‌ಸಿ ಪಟ್ಟಿಯಲ್ಲಿರುವ ಸಮುದಾಯಗಳನ್ನು ಪ್ರತ್ಯೇಕಿಸಿ ಒಬಿಸಿ ಗಳಿಗಿರುವಂತೆ ಪ್ರತ್ಯೇಕ ಮೀಸಲಾತಿ ಗುಂಪನ್ನು ಸೃಷ್ಟಿಸಬೇಕು, ವೈಜ್ಞಾನಿಕ ಜನಸಂಖ್ಯಾ ಅಂಕಿ ಅಂಶಗಳಿಗೆ ಅನುಗುಣವಾಗಿ ಒಳ ಮೀಸಲಾತಿ ಬೇಡಿಕೆಯನ್ನು ಪರಿಗಣಿಸಬೇಕು, ಅಸ್ಪೃಶ್ಯ ಸಮುದಾಯಗಳಿಗೆ ಹಂಚಿಕೆ ಮಾಡಲಾದ ಮೀಸಲಾತಿ ಪ್ರಮಾಣವನ್ನು ಏರಿಕೆ ಮಾಡಬೇಕು, ಖಾಸಗಿ ವಲಯದಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಮೀಸಲಾತಿ ನೀತಿಯನ್ನು ಸಾಂವಿಧಾನಿಕವಾಗಿ ಜಾರಿಗೊಳಿಸಬೇಕೆಂದು ವೇದಿಕೆ ಒತ್ತಾಯಿಸುತ್ತದೆ ಎಂದರು.

ಈ ನಾಡಿನ ಶೋಷಿತ ಸಮುದಾಯಗಳ ಈ ಆಗ್ರಹಗಳಿಗೆ ದಲಿತ ಸಮುದಾಯಗಳ ಆಮೂಲಾಗ್ರ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿ ಆದಷ್ಟು ಶೀಘ್ರವಾಗಿ ಒಳ ಮೀಸಲಾತಿ ಜಾರಿಗೊಳಿಸಿ ಅನ್ಯಾಯಕ್ಕೊಳಗಾಗಿರುವ ಸಮುದಾಯಗಳಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಬಂಗವಾದಿ ನಾರಾಯಣಪ್ಪ, ಹೊರಳವಾಗಿ ನಂಜುಂಡಸ್ವಾಮಿ, ಸತೀಶ್ ಪಡುವಾರಹಳ್ಳಿ ಉಪಸ್ಥಿತರಿದ್ದರು.

ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಚಾಲನೆ




ಮೈಸೂರು, ಸೆ. 13–ರಾಷ್ಟ್ರೀಯ ಕ್ರೀಡಾ ದಿನದ ಆಚರಣೆಯ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಂಘ ಮತ್ತು ಕನ್ನೇಗೌಡ ಸ್ಪೋರ್ಟ್ಸ್ ಕ್ಲಬ್ ಜಂಟಿಯಾಗಿ ಆಯೋಜಿಸಲಾದ ಬ್ಯಾಡ್ಮಿಂಟನ್ ಕ್ರೀಡಾ ಕೂಟ ಮಾನಸಗಂಗೋತ್ರಿ ಒಳಾಂಗಣ ಕ್ರೀಡಾಂಗಣದಲ್ಲಿ ಉದ್ಘಾಟಿಸಲಾಯಿತು.

ಈ ವೇಳೆ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಜೀವರಸಾಯನ ಶಾಸ್ತ್ರದ ಪ್ರಾಧ್ಯಾಪಕ ಪ್ರೊ. ಬಿ.ಎಸ್.ವಿಶ್ವನಾಥ್ ಕ್ರೀಡಾ ಕೂಟಗಳನ್ನು ಉದ್ದೇಶಿಸಿ ಶಿಕ್ಷಣದ ಜೊತೆಗೆ ಕ್ರೀಡೆಯಲ್ಲೂ ಭಾಗವಹಿಸಿ ಕಿರಿಯ ವಯಸಿನಲ್ಲೇ ನಿರಂತರ ಕ್ರೀಡಾಭ್ಯಾಸದಲ್ಲಿ ತೊಡಗಲು ಕ್ರೀಡಾಪಟುಗಳಿಗೆ ಸೂಚಿಸಿದರು.

ಸಮಾರಂಭದಲ್ಲಿ ಆಯೋಜಕ ಗಿರೀಶ್, ಸುದರ್ಶನ್ ಹಾಗೂ ಡಾ. ಸಿ.ವೆಂಕಟೇಶ್ ಹಾಜರಿದ್ದರು. ಕ್ರೀಡಾಕೂಟದಲ್ಲಿ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನ ಬಾಲಕ, ಬಾಲಕಿಯರು ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ಇಂದಿನ ಪಂಚಾಂಗ

14.09.2024 ಶನಿವಾರ, ಮಳೆ ನಕ್ಷತ್ರ: ಉತ್ತರಾ, 13.09.2024 ರಿಂದ 26.09.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಉಷಾ, ರಾಹುಕಾಲ : ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಮೈಸೂರು ಡಿಸ್ಟ್ರಿಕ್ಟ್ ಅಥ್ಲೆಟಿಕ್ ಅಸೋಸಿಯೇಷನ್ :** ಕರ್ನಾಟಕ ರಾಜ್ಯ ಕಿರಿಯರ ಅಂತರ ಜಿಲ್ಲಾ ಮತ್ತು 23 ವರ್ಷದೊಳಗಿನ ಅಥ್ಲೆಟಿಕ್ಸ್ ಕ್ರೀಡಾಕೂಟ, ಚಾಮುಂಡಿಬೆಟ್ಟದಲ್ಲಿ ಬೆಳಗ್ಗೆ 7.30ಕ್ಕೆ ಕ್ರೀಡಾಕೂಟದ ಕ್ರೀಡಾಜ್ಯೋತಿ ಬೆಳಗಿಸುವ ಕಾರ್ಯಕ್ರಮ, ಮಧ್ಯಾಹ್ನ 3.30ಕ್ಕೆ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಗೌರವ ಅತಿಥಿಗಳು : ಗೃಹ ಸಚಿವ ಡಾ. ಜಿ.ಪರಮೇಶ್ವರ್, ಅಂತರರಾಷ್ಟ್ರೀಯ ಅಥ್ಲೀಟ್ ಶ್ರೀಮತಿ ಮಾಚೆಟ್ಟೀರ ರಾಜು ಪೋವಮ್ಮ, ಮುಖ್ಯ ಅತಿಥಿಗಳು : ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಹೆಚ್.ಎಂ. ಗಣೇಶ್ ಪ್ರಸಾದ್, ಕೆ. ಹರೀಶ್‌ಗೌಡ, ಡಿ. ರವಿಶಂಕರ್, ಮಾಜಿ ಶಾಸಕರಾದ ಹೆಚ್.ಪಿ. ಮಂಜುನಾಥ್, ಎಂ.ಕೆ. ಸೋಮಶೇಖರ್, ಅಭಿಲಾಷ್ ನಾಯರ್, ಮೈಸೂರು ಡಿಸ್ಟ್ರಿಕ್ಟ್ ಅಥ್ಲೆಟಿಕ್ ಅಸೋಸಿಯೇಷನ್ ಕಾರ್ಯದರ್ಶಿ ಎ. ರಾಜವೇಲು, ಸುರಕ್ಷಾ ಕನ್‌ಸ್ಟ್ರಕ್ಷನ್ಸ್ ವ್ಯವಸ್ಥಾಪಕ ನಿರ್ದೇಶಕ ಆರ್. ಶ್ರೀಕಂಠ ಜೆಟ್ಟಪ್ಪ, ಸಂಘದ ಖಜಾಂಚಿ ಎಂ. ಉಮೇಶ್, ಸಂಘಟನಾ ಕಾರ್ಯದರ್ಶಿ ಬಿ. ಶ್ರೀಕಾಂತ್, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ.

■ **ಶ್ರೀ ವಿದ್ಯಾಗಣಪತಿ ದೇವಸ್ಥಾನ, ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್ :** 44ನೇ ವರ್ಷದ ಗೌರಿ–ಗಣೇಶ ಹಬ್ಬದ ಪೂಜಾ ಮಹೋತ್ಸವ, ಸ್ಥಳ: ದೇವಸ್ಥಾನ, ವಿನಾಯಕನಗರ.

■ **ಅಂಬಾರಿ ಬಾಯ್ಸ್ :** 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ, ಸ್ಥಳ: ಕಾಮಾಟಗೇರಿ, ನಜರ್‌ಬಾದ್.

■ **ಎಸ್.ಪಿವಿಜಿಎಂಸಿ ಟ್ರಸ್ಟ್: ಪಾರಂಪರಿಕ ಸಂಗೀತೋತ್ಸವ,** 63ನೇ ಪಾರಂಪರಿಕ ಸಂಗೀತೋತ್ಸವ, ಬೆಳಗ್ಗೆ 10 ಗಂಟೆಗೆ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ, ಸಂಜೆ 5.30 ರಿಂದ ಗಮಕ ಸಂಜೆ, ಕಾವ್ಯ: ಮಾರುತಿ ಭಕ್ತಿ ದರ್ಪಣ, ವಾಚನ : ಕುಮಾರಿ ಧನ್ಯ, ವ್ಯಾಖ್ಯಾನ : ವಿದ್ವಾನ್ ಕೃಪ ಮಂಜುನಾಥ್, ಸಂಜೆ 6.45ಕ್ಕೆ ವಿದುಷಿ ಸಂಗೀತಾ ಕಟ್ಟಿ ಅವರಿಂದ ಗಾಯನ, ಪಂಡಿತ್ ಸತೀಶ್ ಕೊಲ್ಲಿ–ಹಾರ್ಮೋನಿಯಂ, ವಿದ್ವಾನ್ ಕೇಶವ್ ಜೋಶಿ–ತಬಲಾ, ಸ್ಥಳ: ಎಸ್‌ಪಿವಿಜಿಎಂಸಿ ಟ್ರಸ್ಟ್, 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಕ್ರಿಯಾಯೋಗ ತರಗತಿಗಳು, ಸ್ಥಳ: ಆಶ್ರಮದ ಆವರಣ.

■ **ಗೋಪಾಲಸ್ವಾಮಿ ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢಶಾಲೆ :** ಶಿಕ್ಷಕರ ದಿನಾಚರಣೆ ಅಂಗವಾಗಿ ಪ್ರೌಢಶಾಲಾ ಶಿಕ್ಷಕರಿಗೆ ಅಂತರಶಾಲಾ ಸ್ಪರ್ಧೆಗಳು, ಅಧ್ಯಕ್ಷತೆ : ಶಿಶುವಿಹಾರ ಅಧ್ಯಕ್ಷ ಡಾ. ಎ.ಎಸ್. ಚಂದ್ರಶೇಖರ್, ಮುಖ್ಯ ಅತಿಥಿಗಳು : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಟಿ. ಜವರೇಗೌಡ, ಅತಿಥಿಗಳು : ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ಎನ್.ಆರ್. ಮಂಜುನಾಥ, ಎಸ್. ರಾಮ್‌ಪ್ರಸಾದ್, ಶ್ರೀಮತಿ ಪ್ರಭ, ಹೆಚ್.ಎನ್. ಚಂದನ್‌ಕುಮಾರ್, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಪ್ರೌಢಶಾಲೆ, ಬೆಳಗ್ಗೆ 9.30 ರಿಂದ.

■ **ಆದ್ಯ ಸೌಹಾರ್ದ ಸಹಕಾರಿ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ ಉದ್ಘಾಟನೆ : ಶ್ರೀಮತಿ ಕೆ. ಲಲಿತಾ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಎಸ್.ಆರ್.ನಾರಾಯಣ ರಾವ್, ಗುರುಪ್ರಸಾದ್ ಬಂಗೇರ, ರಘುರಾಂ ವಾಜಪೇಯಿ, ಸ್ಥಳ: ಶ್ರೀ ಗಣಪತಿ ದೇವಸ್ಥಾನದ ಸಭಾ ಮಂಟಪ, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

■ **ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆ, ಮೈಸೂರು ಶಾಖೆ, ಮೈಸೂರು ಮುಕ್ತ ವೇದಿಕೆ :** ಜಿಲ್ಲಾಡಳಿತ ಮತ್ತು ನಾಗರಿಕ ಕುರಿತ ತಜ್ಞರ ಅಭಿಮತ, ವಿಶ್ರಾಂತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗುರುಚರಣ್ ಗೊಲ್ಲರಕೇರಿ ಅವರಿಂದ ಹವಾಮಾನ ಬದಲಾವಣೆ : ಜಿಲ್ಲಾ ಮಟ್ಟದಲ್ಲಿ ಮುಖ್ಯವಾಹಿನಿ ಹವಾಮಾನ ಕ್ರಮ, ವಿಶ್ರಾಂತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಂ.ಆರ್. ಶ್ರೀನಿವಾಸಮೂರ್ತಿ ಅವರಿಂದ ಪಂಚಾಯತ್ ರಾಜ್ : ತತ್ವಗಳು ಮತ್ತು ಆಚರಣೆಗಳು, ವಿಶ್ರಾಂತ ಡಿಜಿ ಮತ್ತು ಪೊಲೀಸ್ ಐಜಿ ಡಾ. ಎಸ್.ಟಿ. ರಮೇಶ್ ಅವರಿಂದ ಪೊಲೀಸ್ ಮತ್ತು ಸಮುದಾಯ ಕುರಿತು ಉಪನ್ಯಾಸ, ಅಧ್ಯಕ್ಷತೆ : ಸಂಪುಟ ಸಚಿವಾಲಯದ ವಿಶ್ರಾಂತ ಜಂಟಿ ಕಾರ್ಯದರ್ಶಿ ರವಿ ಜೋಶಿ, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಕಾಲೇಜು ಅಧ್ಯಾಪಕರ ಹಾಗೂ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ. ಎಂ.ಎಸ್. ಮಹದೇವಸ್ವಾಮಿ, ಸ್ಥಳ: ಅರಸು ಮಂಡಳಿ, ಅಕ್ಕನ ಬಳಗ ಕ್ರಾಸ್, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–97–98, ತಿಂಗಳ ಸಾಧಕರು ಬಹುಮುಖ ಪ್ರತಿಭೆಯ ಕವಿ ಡಾ. ಜಯಪ್ಪ ಹೊನ್ನಾಳಿ ಮತ್ತು ಗಾಯಕ ಪರಶಿವಮೂರ್ತಿ, ಮುಖ್ಯ ಅತಿಥಿಗಳು: ಕಸಾಪ ಮಾಜಿ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು : ಸಾಹಿತಿಗಳಾದ ಡಾ. ಹೆಚ್.ಬಿ. ಬೆಟ್ಟಸ್ವಾಮಿ, ದೇವರಾಜ ಪಿ. ಚಿಕ್ಕಳ್ಳಿ, ಗಾಯಕಿ ಶ್ರೀಮತಿ ಸುಗಂಧಮ್ಮ ಜಯಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ

■ **ಎಸ್.ಕೆ. ಎಜುಕೇಷನ್ ಸೊಸೈಟಿ :** ಕೆಎಎಸ್ ಪ್ರಿಲಿಮ್ಸ್ –2024 ಪರೀಕ್ಷೆಯ ಸ್ಪರ್ಧಾತ್ಮಕ ಪರೀಕ್ಷೆಗೆ 2 ತಿಂಗಳ ಕ್ರ್ಯಾಶ್ ಕೋರ್ಸ್ ನಡೆಸುವ ಸಂಬಂಧ ಪೂರ್ವಭಾವಿಯಾಗಿ ಉಚಿತ ಮುಕ್ತ ಸಂವಾದ ಕಾರ್ಯಕ್ರಮ, ಸ್ಥಳ: ಸೊಸೈಟಿ ಆವರಣ, ಸಂಜೆ 4 ಗಂಟೆಗೆ

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಡಾ.ಸರ್ವಪಲ್ಲಿ ರಾಧಾಕೃಷ್ಣನ್ ದಿನಾಚರಣೆ ಮತ್ತು ಸಾಧಕ ಶಿಕ್ಷಕರಿಗೆ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಪ್ರಶಸ್ತಿ ಪ್ರದಾನ ಸಮಾರಂಭ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 4.30ಕ್ಕೆ.

■ **ಚಂಪಕ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್ :** ಭಾರತೀಯ ಪ್ರದರ್ಶಕ ಕಲೆಗಳಿಗೆ ಹಾಗೂ ಕಲಾವಿದರಿಗೆ ಪ್ರೋತ್ಸಾಹ ನೀಡಲು "ಚಂಪಕ ರಾಷ್ಟ್ರೀಯ ಕಲಾ ಉತ್ಸವ" ಶೀರ್ಷಿಕೆಯಲ್ಲಿ ಮಾಸಿಕ ಕಾರ್ಯಕ್ರಮ, ಚಂಪಕ ಅಕಾಡೆಮಿಯ ಸಂಸ್ಥಾಪಕರಾದ ವಿದುಷಿ ಡಾ। ನಾಗಲಕ್ಷ್ಮಿ ನಾಗರಾಜನ್ ಅವರಿಂದ ಡಾ। ಸುಕನ್ಯ ಪ್ರಭಾಕರ್ ಅವರ ಸಂಕಲನವಾದ 'ಹರಿಯನ್ನರಸಿದ ವನಿತೆಯರು' ಅಧಾರಿತ ಭರತನಾಟ್ಯ ಕಾರ್ಯಕ್ರಮ, ಬೆಂಗಳೂರಿನ ಕಲ್ಪನಾ ಸ್ಕೂಲ್ ಆಫ್ ಡಾನ್ಸ್ ಸಂಸ್ಥಾಪಕರು ಮತ್ತು ನಿರ್ದೇಶಕರಾದ ವಿದುಷಿ ಭಾರತಿ ವಿಠ್ಠಲ್ ಮತ್ತು ಶಿಷ್ಯಂದಿರಿಂದ ಕಥಕ್ ಕಾರ್ಯಕ್ರಮ, ಮೈಸೂರಿನ ಶಿವನೂಪುರ ನರ್ತನ ಕಲಾ ಕೇಂದ್ರದ ಸಂಸ್ಥಾಪಕರು ಮತ್ತು ನಿರ್ದೇಶಕರಾದ ವಿದುಷಿ ಭಾವನ ಡಿ ರಾವ್ ಮತ್ತು ಶಿಷ್ಯವೃಂದದವರಿಂದ ಭರತನಾಟ್ಯ ವೈಶಿಷ್ಟ್ಯ, ಮುಖ್ಯ ಅತಿಥಿಗಳು : ಪತ್ರಕರ್ತ ಎಂ.ಆರ್. ಸತ್ಯನಾರಾಯಣ, ಸ್ಥಳ: ಚಂಪಕ ಅಕಾಡೆಮಿ ಸಭಾಂಗಣ, ರಾಮಕೃಷ್ಣನಗರ, ಸಂಜೆ 4.30ಕ್ಕೆ.

■ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 845, ಕಥೆ ಹೇಳುವವರು: ಡಾ. ಎಚ್ ಎ ರುದ್ರೇಶ್, ವಿಶ್ರಾಂತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಹಾಗೂ ಲೇಖಕರು, ಸ್ಥಳ: ಸುರುಚಿ ರಂಗಮನೆ, ನಂ. 476, ಚಿತ್ರಭಾನು ರಸ್ತೆ, ಕುವೆಂಪು ನಗರ, ಸಂಜೆ 4.30 ರಿಂದ

■ **ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ :** ಯಕ್ಷಗಾನ ಮಹೋತ್ಸವ, ಉಪಸ್ಥಿತರು : ಡಾ. ರಾಜಶೇಖರ್ ಆಸ್ಪತ್ರೆಯ ಡಾ. ಆರ್. ಸಂಜಯ್, ದಕ್ಷಿಣ ಕನ್ನಡ ಮತ್ತು ಕರಾವಳಿ ಸಂಘಗಳ ಒಕ್ಕೂಟದ ಅಧ್ಯಕ್ಷ ಗ್ರೇಸಿಯನ್ ರೊಡ್ರಿಗಸ್, ಡಾ. ಪ್ರಕಾಶ್ ಬಾಬು, ಒಕ್ಕೂಟದ ಕಾರ್ಯದರ್ಶಿ ನಾರಾಯಣ ಹೆಗಡೆ, ಚಿಟ್ಟಾಣಿ ಯಕ್ಷ ವೈಭವ 'ಮಹಾಮಂತ್ರಿ ದುಷ್ಟಬುದ್ಧಿ' ಸ್ಥಳ: ಯೋಗ ಸಂಸ್ಕೃತಿ ಕಲಾ ಭವನ, ಸಂಜೆ 5 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹೀಪಾಲಾನಂದ ಅವರಿಂದ ಡಿವೈನ್ ಫ್ಯಾಮಿಲಿ ಆಫ್ ಶಿವ ಅಂಡ್ ಶಕ್ತಿ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI 'ಶೋಧ – ಅನುಶೋಧ' ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಡಿ. ಪುರಷೋತ್ತಮ್, ಅಮೃತಾ ನಿತಿನ್ ಶಾಸ್ತ್ರಿ, ವ್ಯಾಖ್ಯಾನ–ಡಾ. ಹೆಚ್. ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ– ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೊವಿಲಡಿ ಆರ್. ಕಲಾ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.00 ಆಯುಷ್‌ವಾಣಿ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.30 ದೇವರನಾಮ–ಕೌಸ್ತುಭ್. ಎಂ. ಎಸ್, 12.45 ಜನಪದ ಸಂಗೀತ, 1.20 ಭಾವಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ : ಮೈಸೂರಿನ ಶಕ್ತಿಧಾಮ ವಿದ್ಯಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ : ಹಾಲಿನವಳ ಲೆಕ್ಕ, ರಚನೆ : ಬಿ.ಎಸ್.ಕೇಶವರಾವ್, ನಿರ್ಮಾಣ : ಉಮೇಶ್. ಎಸ್.ಎಸ್., 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸಮಗ್ರ ಕೃಷಿಯ ಪ್ರಾಮುಖ್ಯತೆ. ಈ ಕುರಿತು ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕು ಗುಡ್ಡದಹಟ್ಟಿ ಗ್ರಾಮದ ವೇದಾಮನೋಹರ ಮಸ್ಕಿ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 8.00 ಯುವವಾಣಿ, 9.30 ಸವಿನೆನಪು–ಹಳೆಯ ಕನ್ನಡ ಚಿತಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ : ಪಂ. ದೆಬಶಿಶ್ ಭಟ್ಟಾಚಾರ್ಯ – ಗಿಟಾರ್

ಮೈಸೂರು ಮಿತ್ರ



ಜಂಬೂಸವಾರಿಯಲ್ಲಿ ಅಂಬಾರಿ ಹೊರುವ ಅಭಿಮನ್ಯುವಿಗೆ ಲಕ್ಷ್ಮೀ, ಹಿರಣ್ಯ ಸಾಥ್

● ಎರಡೂ ಹೆಣ್ಣಾನೆ ರಾಂಪುರ ಕ್ಯಾಂಪ್‌ಗೆ ಸೇರಿದವು ● ಗಜಪಡೆಯ ಹಿರಿಯ ಅಜ್ಜಿ ವರಲಕ್ಷ್ಮಿಗೆ ವಿರಾಮ ● ವಿಶ್ವಾಸ ಗಳಿಸಲು ವಿಫಲವಾದ ದೊಡ್ಡಹರವೆ ಲಕ್ಷ್ಮಿ



ಲಕ್ಷ್ಮೀ



ಹಿರಣ್ಯ

ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಸೆ.13 –ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಅಂಬಾರಿ ಹೊರುವ ಅಭಿಮನ್ಯು ಎಡ–ಬಲದಲ್ಲಿ ಹೆಜ್ಜೆ ಹಾಕಲು ಇದೇ ಮೊದಲ ಬಾರಿಗೆ ಲಕ್ಷ್ಮಿ ಹಾಗೂ ಹಿರಣ್ಯ ಆಯ್ಕೆಯಾಗಿದ್ದು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ರಾಂಪುರ ಕ್ಯಾಂಪ್ ಸಿಬ್ಬಂದಿಗಳಲ್ಲಿ ಹರ್ಷ ಮನೆ ಮಾಡಿದೆ.

ಕಳೆದ ಕೆಲ ವರ್ಷಗಳಿಂದ ಜಂಬೂಸವಾರಿ ಮೆರವಣಿಗೆಯಲ್ಲಿ ಅಂಬಾರಿ ಹೊತ್ತ ಆನೆಗೆ ಕುಮ್ಕಿ ಆನೆಯಾಗಿ ದುಬಾರೆ ಹಾಗೂ ಮತ್ತಿಗೋಡು ಕ್ಯಾಂಪ್ ಆನೆಗಳು ಹೆಜ್ಜೆ ಹಾಕುತ್ತಿದ್ದವು. ವಯಸ್ಸಾದ ಕಾರಣ ಇದೀಗ ಈ ಎರಡೂ ಕ್ಯಾಂಪ್‌ಗಳ ಹೆಣ್ಣಾನೆಗಳಿಗೆ ವಿಶ್ರಾಂತಿ ನೀಡಲಾಗಿದ್ದು, ಅದರ ಸದುಪಯೋಗವನ್ನು ರಾಂಪುರ ಕ್ಯಾಂಪ್‌ನ ಹೆಣ್ಣಾನೆಗಳು ಪಡೆದುಕೊಂಡಿವೆ. ಇದರಿಂದ ಒಂದೇ ಕ್ಯಾಂಪ್‌ನ ಎರಡೂ ಹೆಣ್ಣಾನೆಗಳು ಕುಮ್ಕಿ ಆನೆಗಳಾಗಿ ಅಂಬಾರಿ ಹೊರುವ ಆನೆಯೊಂದಿಗೆ ಈ ಬಾರಿ ಸಾಗಲಿವೆ.

ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು 10 ಗಂಡಾನೆ ಹಾಗೂ 4 ಹೆಣ್ಣಾನೆಗಳನ್ನು ಕರೆತರಲಾಗಿದ್ದು, ಅವುಗಳಲ್ಲಿ 68 ವರ್ಷದ ವರಲಕ್ಷ್ಮೀ ಆನೆಯನ್ನು ಕುಮ್ಕಿ ಆನೆ ಸೇವೆಯಿಂದ ಬಿಡುಗಡೆ ಮಾಡಲಾಗಿದೆ. ಉಳಿದ ಮೂರು ಹೆಣ್ಣಾನೆಗಳಲ್ಲಿ ದೊಡ್ಡ ಹರವೆ ಕ್ಯಾಂಪ್ ಲಕ್ಷ್ಮೀ ಅಧಿಕಾರಿಗಳ ವಿಶ್ವಾಸ ಗಳಿಸಲು ವಿಫಲವಾದ ಹಿನ್ನೆಲೆಯಲ್ಲಿ ಉಳಿದ ಎರಡು ಆನೆಗಳಿಗೆ ಕುಮ್ಕಿ ಆನೆಯಾಗಿ ಹೆಜ್ಜೆ ಹಾಕುವ ಅವಕಾಶ ಲಭಿಸಿದೆ.

ಭರವಸೆ ಮೂಡಿಸಿದ ಲಕ್ಷ್ಮಿ: 2019ರ ದಸರಾ ಮಹೋತ್ಸವದಲ್ಲಿ 18 ವರ್ಷ ವಯಸ್ಸಲ್ಲೇ ಮೊದಲ ಬಾರಿಗೆ ಆಗಮಿಸಿದ್ದ ರಾಂಪುರ ಕ್ಯಾಂಪ್ ಲಕ್ಷ್ಮಿ ಗಮನ ಸೆಳೆದಿತ್ತು. ಮೊದಲ ವರ್ಷವಾಗಿದ್ದ ಹಿನ್ನೆಲೆಯಲ್ಲಿ ಸಿಡಿಮದ್ದು ಶಬ್ದಕ್ಕೆ ಬೆಚ್ಚಿತ್ತು. ಈ ಹಿನ್ನೆಲೆಯಲ್ಲಿ ಆ ಬಾರಿ ಅರಮನೆ ಆವರಣದಲ್ಲೇ ಇದ್ದು, ಜಂಬೂಸವಾರಿ ಮೆರವಣಿಗೆಯಿಂದ ದೂರವುಳಿಯಿತು. 2022ರಲ್ಲಿ ಎರಡನೇ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಲಕ್ಷ್ಮಿ ಅರಮನೆ ಆವರಣದಲ್ಲೇ ಗಂಡು ಮರಿಗೆ ಜನ್ಮ ನೀಡಿತ್ತು ಆ ಮರಿಗೆ ರಾಜವಂಸ್ಥರು ದತ್ತಾತ್ರೇಯ ಎಂದು ನಾಮರಣ ಮಾಡಿದ್ದರು. ಎರಡು ವರ್ಷದ ಬಳಿಕ ಮೂರನೇ ಬಾರಿಗೆ ಆಗಮಿಸಿರುವ 23 ವರ್ಷದ ಲಕ್ಷ್ಮಿ ಇದೀಗ ಕುಮ್ಕಿ ಆನೆಯಾಗಿ ಸಾಗುವ ಮಹತ್ತರ ಜವಾಬ್ದಾರಿ ನಿಭಾಯಿಸಲು ಆಯ್ಕೆಯಾಗಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಮಂಗಲ ರಸ್ತೆಯಲ್ಲಿ ತಾಯಿಯಿಂದ ಬೇರ್ಪಟ್ಟಿದ್ದ 4 ತಿಂಗಳ ಮರಿಯನ್ನು 2002ರಲ್ಲಿ ರಕ್ಷಣೆ ಮಾಡಿದ್ದ ಅರಣ್ಯ ಸಿಬ್ಬಂದಿಗಳು, ಅದನ್ನು ಪಾಲನೆ ಮಾಡಲು ರಾಜವಂಶಸ್ಥರಾದ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಅವರ ಸಹೋದರಿ ಶ್ರೀಮತಿ ವಿಶಾಲಾಕ್ಷೀ ದೇವಿ ಅವರ ಸುಪರ್ದಿಗೆ ಒಪ್ಪಿಸಿದರು. ವಿಶಾಲಾಕ್ಷೀ ದೇವಿ ಅವರು ಆ ಮರಿಗೆ ಪದ್ಮಜ ಎಂದು ನಾಮಕರಣ ಮಾಡಿದ್ದರು. ಅದರೊಂದಿಗೆ

> ಜಂಬೂಸವಾರಿ ಮೆರವಣಿಗೆಯುಲ್ಲಿ ಈ ಬಾರಿ ಅಂಬಾರಿ ಹೊರುವ ಅಭಿಮನ್ಯುವಿನೊಂದಿಗೆ ಕುಮ್ಕಿ ಆನೆಯಾಗಿ ರಾಂಪುರ ಕ್ಯಾಂಪ್‌ನ ಲಕ್ಷ್ಮೀ ಹಾಗೂ ಹಿರಣ್ಯ ಆನೆಗಳು ಸಾಗಲಿವೆ. ಈಗಾಗಲೇ ಎಲ್ಲಾ ಆನೆಗಳಿಗೂ ಆರೈಕೆಯೊಂದಿಗೆ ತರಬೇತಿ ನೀಡಲಾಗುತ್ತಿದೆ.
>
> – ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ವನ್ಯಜೀವಿ ವಿಭಾಗ

ಮತ್ತೆರಡು ಅನಾಥ ಮರಿಗಳನ್ನು ವಿಶಾಲಾಕ್ಷಿದೇವಿ ಅವರಿಗೆ ಪಾಲನೆ ಮಾಡಲು ನೀಡಲಾಗಿತ್ತು. ಅವುಗಳಲ್ಲಿ ಒಂದಕ್ಕೆ ಪೃಥ್ವಿರಾಜ್ ಎಂದು ನಾಮಕರಣ ಮಾಡಿದ್ದರು. ಅದನ್ನು ಈಗ ರೋಹಿತ ಎಂದು ಕರೆಯಲಾಗುತ್ತದೆ. ಮತ್ತೊಂದು ಮರಿಗೆ ಮೃತ್ಯುಂಜಯ ಎಂದು ನಾಮಕರಣ ಮಾಡಿದ್ದರು. ಅದಕ್ಕೆ ಅರಣ್ಯ ಇಲಾಖೆ ಗಣೇಶ ಎಂದು ನಾಮಕರಣ ಮಾಡಿತ್ತು. ಗಣೇಶ ಎರಡು ವರ್ಷದ ಹಿಂದಷ್ಟೇ ಅಕಾಲಿಕ ಮರಣಕ್ಕೀಡಾಗಿತ್ತು.

ಲಕ್ಷ್ಮಿಯಾಗಿ ಬದಲಾಗಿರುವ ಪದ್ಮಜ 3ನೇ ವರ್ಷ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದೆ. 2.32 ಮೀ. ಎತ್ತರವಿರುವ ಲಕ್ಷ್ಮಿ 2480 ಕೆಜಿ ತೂಕವಿದೆ. ಅದರ ಮಾವುತರಾಗಿ ಚಂದ್ರ, ಕಾವಾಡಿಯಾಗಿ ಕೃಷ್ಣಮೂರ್ತಿ ಕಾರ್ಯನಿರ್ವಹಿಸುತ್ತಿದ್ದಾರೆ.

ಎರಡೇ ವರ್ಷದಲ್ಲೇ ಹಿರಣ್ಯಗೆ ಒಲಿದ ಅವಕಾಶ: ದಸರಾ ಮಹೋತ್ಸವದಲ್ಲಿ ಎರಡನೇ ಬಾರಿಗೆ ಪಾಲ್ಗೊಳ್ಳುತ್ತಿರುವ ಬಂಡೀಪುರದ ರಾಂಪುರ ಕ್ಯಾಂಪ್‌ನಲ್ಲಿರುವ 47 ವರ್ಷದ ಹಿರಣ್ಯ ಆನೆಗೆ ಈ ಬಾರಿ ಕುಮ್ಕಿ ಆನೆಯಾಗಿ ಸಾಗುವ ಸದಾವಕಾಶ ದೊರೆತಿದೆ. ಸುಪ್ರಿಂಕೋರ್ಟ್ ಆದೇಶದ ಮೇರೆಗೆ ಅರಣ್ಯ ಇಲಾಖೆ 2021ರಲ್ಲಿ ಕೊಡಗಿನ ಆನೆ ಮನೆ ಫೌಂಡೇಷನ್‌ನಿಂದ ವಶಕ್ಕೆ ಪಡೆದು ರಾಂಪುರ ಕ್ಯಾಂಪ್‌ನಲ್ಲಿ ಪಾಲನೆ ಮಾಡಲಾಗುತ್ತಿತ್ತು. ಕಳೆದ ವರ್ಷದಿಂದ ದಸರಾ ಮಹೋತ್ಸವಕ್ಕೆ ಬರುತ್ತಿರುವ ಹಿರಣ್ಯ 2.50 ಮೀಟರ್ ಎತ್ತರವಿದ್ದು, 3485 ಕೆಜಿ ತೂಕ ಹೊಂದಿದೆ. ಮಾವುತ ಶಫಿವುಲ್ಲಾ, ಕಾವಾಡಿಯಾಗಿ ಮನ್ಸೂರ್ ಹಿರಣ್ಯಳನ್ನು ಪಾಲನೆ ಮಾಡುತ್ತಿದ್ದಾರೆ. ಇತರೆ ಆನೆಗಳಂತೆ ಸೌಮ್ಯ ಸ್ವಭಾವಿಯಾಗಿರುವ ಈ ಆನೆ ಕುಮ್ಕಿ ಆನೆಯಾಗಿ ಜಂಬೂಸವಾರಿ ಮೆರವಣಿಗೆಯುಲ್ಲಿ ಅಂಬಾರಿ ಆನೆಯಾಗಿ ಹೆಜ್ಜೆ ಹಾಕಲಿದೆ.

ದಸರಾಗೆ ಫಿರಂಗಿ ದಳ ಸಜ್ಜು; ಕುಶಾಲತೋಪು ಸಿಡಿಸುವ ಒಣ ತಾಲೀಮಿಗೆ ಚಾಲನೆ



ಮೈಸೂರು ಅರಮನೆ ಆವರಣದಲ್ಲಿ ಫಿರಂಗಿ ದಳದ ಸಿಬ್ಬಂದಿಗಳು ಕುಶಾಲತೋಪು ಸಿಡಿಸುವ ಒಣ(ಸಿಡಿಮದ್ದು ಬಳಸದೆ) ತಾಲೀಮು ನಡೆಸಿದರು.

ಮೈಸೂರು,ಸೆ.13(ಎಂಟಿವೈ)– ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಅರಮನೆ ಆವರಣದಲ್ಲಿ ಫಿರಂಗಿ ದಳ ಶುಕ್ರವಾರದಿಂದ ಕುಶಾಲ ತೋಪು ಸಿಡಿಸುವ ಒಣ ತಾಲೀಮು ಆರಂಭಿಸಿತು.

ಅರಮನೆಯ ಆನೆ ಬಾಗಿಲ ಬಳಿ ಕುಶಾಲ ತೋಪು ಸಿಡಿಸುವ ತಂಡದ ಸದಸ್ಯರು ಸಿಎಆರ್ ಎಸಿಪಿ ಸತೀಶ್ ಸಮ್ಮುಖದಲ್ಲಿ ಎಎಸ್‌ಐ ಸಿದ್ದರಾಜು ನೇತೃತ್ವದಲ್ಲಿ ಸಿಡಿಮದ್ದು ಬಳಸದೇ ಫಿರಂಗಿ ಬಳಕೆ, ಕುಶಾಲ ತೋಪು ಸಿಡಿಸುವ ಕುರಿತು ತಾಲೀಮು ಆರಂಭಿಸಿದರು.

ನವರಾತ್ರಿ ಆರಂಭಕ್ಕೆ ಕೇವಲ 18 ದಿನ ಮಾತ್ರವಿದ್ದು, ತಾಲೀಮು ಚುರುಕುಗೊಳಿಸಲಾಗಿದೆ. ಗುರುವಾರವಷ್ಟೇ ಫಿರಂಗಿಗಳಿಗೆ ಪೂಜೆ ಸಲ್ಲಿಸಲಾಗಿತ್ತು. ಇಂದಿನಿಂದ ಒಂದು ವಾರಗಳ ಕಾಲ ಒಣ ತಾಲೀಮು ನಡೆಸಿ, ಒಂದು ನಿಮಿಷದೊಳಗೆ 21 ಬಾರಿ ಕುಶಾಲತೋಪು ಸಿಡಿಸಬೇಕಾದ ನೈಪುಣ್ಯತೆಯನ್ನು ಕರಗತ ಮಾಡಿಕೊಳ್ಳಲು ಇಂದಿನಿಂದ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಒಣ ತಾಲೀಮು ನಡೆಸಲಿದ್ದಾರೆ.

ಕುಶಾಲ ತೋಪು ಸಿಡಿಸಲು 7 ಫಿರಂಗಿ ಬಳಸಲಾಗುತ್ತಿದ್ದು, ಅವುಗಳಲ್ಲಿ ಒಂದೊಂದು ಫಿರಂಗಿಯಲ್ಲಿ ಮೂರು ಬಾರಿ ಸಿಡಿಮದ್ದು ಸಿಡಿಸಲಾಗುತ್ತದೆ. ಒಂದೊಂದು ಫಿರಂಗಿಗೂ ತಲಾ ಐದು ಸಿಬ್ಬಂದಿಗಳನ್ನು ನಿಯೋಜಿಸಿದ್ದು, ಎಲ್ಲರಿಗೂ ಯಾವ ಕರ್ತವ್ಯ ಮಾಡಬೇಕೆಂದು ಸೂಚನೆ ನೀಡಿ, ವಿಂಗಡಿಸಲಾಗಿದೆ. ಜಂಬೂಸವಾರಿ ದಿನ ಅರಮನೆ ಆವರಣದಲ್ಲಿ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ವೇಳೆ ರಾಷ್ಟ್ರಗೀತೆ ಮೊಳಗುವ 21 ಬಾರಿ ಕುಶಾಲತೋಪು ಸಿಡಿಸಬೇಕಾದ ಸಂಪ್ರದಾಯವಿದೆ. ಈ ಹಿನ್ನೆಲೆಯಲ್ಲಿ ಫಿರಂಗಿ ಸ್ವಚ್ಛತೆ, ಫಿರಂಗಿಗೆ ಸಿಡಿಮದ್ದು ತುಂಬುವುದು, ಕಿಡಿ ಹಚ್ಚುವ ಬಗೆ ಕುರಿತು ತರಬೇತಿ ಪಡೆಯುವ ಮೂಲಕ ಕುಶಾಲ ತೋಪು ಸಿಡಿಸಲು ಫಿರಂಗಿ ದಳ ಭರದಿಂದ ಸಿದ್ಧತೆ ಮಾಡಿಕೊಳ್ಳುತ್ತಿದೆ.

ಮೂರು ಬಾರಿ ಸಿಡಿಮದ್ದು ಸಿಡಿಸಿ ತಾಲೀಮು: ಸೆ.25ರ ಬಳಿಕ ಮೂರು ಬಾರಿ ಗಜಪಡೆ, ಅಶ್ವಪಡೆ ಮುಂದೆ ಸಿಡಿಮದ್ದು ಸಿಡಿಸಿ ತಾಲೀಮು ನಡೆಸಲು ನಿರ್ಧರಿಸಲಾಗಿದೆ. ಮೊದಲ ತಾಲೀಮಿನಲ್ಲಿ ಮೊದಲ ಸುತ್ತಿನ ಸಿಡಿಮದ್ದಿನ ಸಿಡಿತದ ಬಳಿಕ ಕೆಲ ನಿಮಿಷ ವಿಶ್ರಾಂತಿ ನೀಡಿ, ಎರಡನೇ ಸುತ್ತಿನ ಸಿಡಿಮದ್ದು ತಾಲೀಮು ನಡೆಸಲಾಗುತ್ತದೆ. ಆನೆ, ಕುದುರೆಗಳ ವರ್ತನೆಯನ್ನು ಪರಿಶೀಲಿಸಿ ಮೂರನೇ ಸುತ್ತಿನ ತಾಲೀಮು ನಡೆಸಲಾಗುತ್ತದೆ. ಎರಡನೇ ತಾಲೀಮಿನಲ್ಲಿ ಪ್ರತಿ ಸುತ್ತು ಕುಶಾಲ ತೋಪು ಸಿಡಿಸುವ ಸಮಯಾವಕಾಶದಲ್ಲಿ ಕಡಿತ ಮಾಡಲಾಗುತ್ತದೆ. ಮೂರನೇ ತಾಲೀಮಿನಲ್ಲಿ ಒಂದೇ ನಿಮಿಷದೊಳಗೆ ಮೂರು ಸುತ್ತಿನ ಸಿಡಿಮದ್ದು ಸಿಡಿಸುವುದಕ್ಕೆ ನಿರ್ಧರಿಸಲಾಗಿದೆ.

ಸಿಡಿಮದ್ದು ತಯಾರು: ಕುಶಾಲ ತೋಪು ಸಿಡಿಸಲು ಬಳಸುವ ಸಿಡಿಮದ್ದು ತಯಾರಿಕೆ ಪ್ರಕ್ರಿಯೆಗೂ ಚಾಲನೆ ದೊರೆತಿದೆ. ಯಾವ ಗನ್‌ಪೌಡರ್‌ನಲ್ಲಿ ಸಿಡಿಮದ್ದು ತಯಾರಿಸಬೇಕು ಎಂದು ಪರಿಶೀಲಿಸಲಾಗುತ್ತಿದೆ. 2–3 ಬಗೆಯ ಗನ್‌ಪೌಡರ್ ತಂದು ಪರಿಶೀಲಿಸಿ, ಯಾವ ಗನ್ ಪೌಡರ್ ಬಳಸಿದರೆ ಉತ್ತಮ ಶಬ್ದ, ಹೊಗೆ ಬರುತ್ತದೆ ಎಂದು ಪರಿಶೀಲಿಸಿದ ಬಳಿಕ ಗನ್ ಪೌಡರ್ ಆಯ್ಕೆ ಮಾಡಲಾಗುತ್ತದೆ. ಫಿರಂಗಿ 1.75 ಕೆಜಿಯಿಂದ 2.50 ಕೆಜಿವರೆಗೂ ಗನ್‌ಪೌಡರ್ ಬಳಸಿ ಸಿಡಿಮದ್ದು ತಯಾರಿಸಲಾಗುತ್ತದೆ. ಜಂಬೂಸವಾರಿ ದಿನ ಗನ್‌ಪೌಡರ್ ಸಾಮರ್ಥ್ಯ ಹೆಚ್ಚಳ ಮಾಡಲಾಗುತ್ತದೆ.

ರಾಮಕೃಷ್ಣ ಆಶ್ರಮದಲ್ಲಿ ಪಠಣ ತರಗತಿಗಳು

ಮೈಸೂರು, ಸೆ.13– ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ವತಿಯಿಂದ ಪ್ರತಿ ಶುಕ್ರವಾರದಂದು ಸಂಜೆ 5ರಿಂದ 6 ಗಂಟೆಯವರೆಗೆ ಆಶ್ರಮದ ಆವರಣದಲ್ಲಿ ಪಠಣ ತರಗತಿಗಳನ್ನು ಹಮ್ಮಿಕೊಳ್ಳಲಾಗಿದೆ.

8ರಿಂದ 60 ವರ್ಷ ವಯಸ್ಸಿನವರಿಗೆ ವಿಶೇಷ ಒತ್ತು ನೀಡಲಾಗುತ್ತದೆ. ಸಿಂಧೂರ ಅವರು ಚಿಕ್ಕಂದಿನಿಂದಲೂ ಎಂ.ಎಸ್. ಶ್ರೀನಿವಾಸನ್ ಅವರ ಬಳಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮಾಹಿತಿಗೆ ದೂ. 0821–2417444 ಬೆಳಗ್ಗೆ 10ರಿಂದ ರಾತ್ರಿ 6ರವರೆಗೆ ಸಂಪರ್ಕಿಸಬಹುದು.

ಜಂಬೂ ಸವಾರಿ ಮಾರ್ಗ ಪರಿಶೀಲಿಸಿದ ಪಾಲಿಕೆ ಆಯುಕ್ತರು

ಮೈಸೂರು, ಸೆ. 13(ಆರ್‌ಕೆ)– ದಸರಾ ಮಹೋತ್ಸವ ಸಮೀಪಿಸುತ್ತಿದ್ದಂತೆಯೇ ಸಿದ್ಧತಾ ಕಾರ್ಯ ತೀವ್ರಗೊಳಿಸಿರುವ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಇಂದು ಜಂಬೂ ಸವಾರಿ ಸಾಗುವ ರಾಜಮಾರ್ಗವನ್ನು ಪರಿಶೀಲಿಸಿದರು.

ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ. ಸಿಂಧೂ ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜು, ವಲಯಾಧಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳು, ಆರೋಗ್ಯ ಶಾಖೆ ಅಧಿಕಾರಿಗಳು ಹಾಗೂ ಪರಿಸರ ಇಂಜಿನಿಯರ್ ಗಳೊಂದಿಗೆ ಬೆಳಗ್ಗೆ 8 ಗಂಟೆಯಿಂದ ಪಾದಯಾತ್ರೆ ಆರಂಭಿಸಿದ ಆಯುಕ್ತರು, ಬೆಳಗ್ಗೆ 10.15 ಗಂಟೆ ವೇಳೆಗೆ ಪರಿಶೀಲನೆ ಅಂತ್ಯಗೊಳಿಸಿದರು.

ಹಾರ್ಡಿಂಜ್ ಸರ್ಕಲ್‌ನಿಂದ ನಡೆದುಕೊಂಡೇ ಪರಿಶೀಲನೆ ಆರಂಭಿಸಿದ ಅವರು, ಜಯಚಾಮರಾಜ ಒಡೆಯರ್ ಸರ್ಕಲ್, ಕೆ.ಆರ್.ಸರ್ಕಲ್, ಸಯ್ಯಾಜಿ ರಾವ್ ರಸ್ತೆ, ಸರ್ಕಾರಿ ಆಯುರ್ವೇದ ಸರ್ಕಲ್, ಹಳೇ ಆರ್‌ಎಂಸಿ ವೃತ್ತ, ಬಂಬೂ ಬಜಾರ್, ಹೈವೇ ಸರ್ಕಲ್ ಮೂಲಕ ಬನ್ನಿಮಂಟಪದ ಎಲ್‌ಐಸಿ ಸರ್ಕಲ್‌ವರೆಗೆ ರಾಜಮಾರ್ಗದಲ್ಲಿ ಖುದ್ದು ಪರಿಶೀಲನೆ ನಡೆಸಿದ ಷರೀಫ್, ರಸ್ತೆ ಹಾಳಾಗಿರುವುದು, ಫುಟ್‌ಪಾತ್ ಟೈಲ್ಸ್ ಒಡೆದು ಗುಂಡಿ ಬಿದ್ದಿರುವುದು, ಚರಂಡಿ ಬಂದ್ ಆಗಿರುವುದು, ಒಣಗಿದ ಮರದ ರೆಂಬೆ, ಶಿಥಿಲಾವಸ್ಥೆಯಲ್ಲಿರುವ ವಿದ್ಯುತ್ ಕಂಬಗಳು ಹಾಗೂ ಅಪಾಯ ತಂದೊಡ್ಡುವ ಕರ್ಬ್ ಸ್ಟೋನ್‌ಗಳನ್ನು ವೀಕ್ಷಿಸಿದರು. ಜಂಬೂ ಸವಾರಿ ವೀಕ್ಷಿಸುವವರಿಗೆ ಬಂಬೂ ಬಜಾರ್‌ನಲ್ಲಿರುವ ಕಲ್ಲಿನ ಮೆಟ್ಟಿಲುಗಳನ್ನು ಸ್ವಚ್ಛಗೊಳಿಸಿ ಅಗತ್ಯವಿರುವ ಕಡೆ ಸಿಮೆಂಟ್ ಕಾಂಕ್ರಿಟ್‌ನಿಂದ ಹಳ್ಳ ಬಿದ್ದಿರುವುದನ್ನು ಮುಚ್ಚ ಬೇಕು, ಬೀಳುವಂತಿರುವ ಮರದ ರೆಂಬೆಗಳನ್ನು ತೆರವುಗೊಳಿಸಬೇಕು, ಸಯ್ಯಾಜಿರಾವ್ ರಸ್ತೆ, ಕೆಆರ್ ಸರ್ಕಲ್‌ನಲ್ಲಿ ಮುರಿದಿರುವೆಡೆ ಬ್ಯಾರಿ ಕೇಡ್‌ಗೆ ಕಲ್ಲುಗಳನ್ನು ಅಳವಡಿಸಬೇಕೆಂದು ಷರೀಫ್ ಅಧಿಕಾರಿಗಳಿಗೆ ತಾಕೀತು ಮಾಡಿದರು.



ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಇಂದು ಜಂಬೂ ಸವಾರಿ ಸಾಗುವ ರಾಜಮಾರ್ಗವನ್ನು ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ.ಸಿಂಧೂ ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜು, ವಲಯಾಧಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳು, ಆರೋಗ್ಯ ಶಾಖೆ ಅಧಿಕಾರಿಗಳು ಹಾಗೂ ಪರಿಸರ ಇಂಜಿನಿಯರ್‌ಗಳೊಂದಿಗೆ ಪರಿಶೀಲಿಸಿದರು.

ಕೆ.ಜಿ.ಕೊಪ್ಪಲು ಮೊಟ್ಟೆ ಗರಡಿ ಮನೆ ಅಖಾಡಕ್ಕೆ ವಿಶೇಷ ಪೂಜೆ



ಕೆ.ಜಿ.ಕೊಪ್ಪಲಿನ ಮೊಟ್ಟೆ ಗರಡಿ ಮನೆಯ ಅಖಾಡಕ್ಕೆ ವಿಶೇಷ ಪೂಜೆ ಸಲ್ಲಿಸಿ, ಶಾಸಕ ಜಿ.ಟಿ.ದೇವೇಗೌಡರನ್ನು ಸನ್ಮಾನಿಸಲಾಯಿತು. ಮಾಜಿ ಶಾಸಕ ಎಲ್.ನಾಗೇಂದ್ರ ಸೇರಿದಂತೆ ಪೈಲ್ವಾನರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಮೈಸೂರು, ಸೆ.13(ಎಂಕೆ)– ಮೈಸೂರು ಕೆ.ಜಿ.ಕೊಪ್ಪಲಿನ ಪೈಲ್ವಾನ್ ಬೋರಯ್ಯ ಬಸವಯ್ಯನವರ ಗರಡಿ(ಮೊಟ್ಟೆ ಗರಡಿ) ಮನೆಯ ಅಖಾಡಕ್ಕೆ(ಮಟ್ಟಿಗೆ) ಶುಕ್ರವಾರ ವಿಶೇಷ ಪೂಜೆ ಸಲ್ಲಿಸಲಾಯಿತು.

ನಾಡಹಬ್ಬ ಮೈಸೂರು ದಸರಾ ಸಮೀಪದ ಹಿನ್ನಲೆಯಲ್ಲಿ ಕುಸ್ತಿ ತಯಾರಿ ನಡೆಸಲು ಹೊಸದಾಗಿ ಮಣ್ಣು ತಂದು ವಿಶೇಷವಾಗಿ ಅಲಂಕರಿಸಿದ್ದ ಅಮ್ಮತಾಯಿಗೆ (ಮಟ್ಟಿ) ಸಲ್ಲಿಸುವ ಸಾಂಪ್ರದಾಯಿಕ ಪೂಜೆ ಇದಾಗಿದ್ದು, ಹಿರಿಯ ಪೈಲ್ವಾನರು, ಗ್ರಾಮಸ್ಥರು ಪೂಜೆ ನೆರವೇರಿಸಿದರು.

ಪೂಜಾ ಕೈಂಕರ್ಯದಲ್ಲಿ ಭಾಗವಹಿಸಿದ್ದ ಶಾಸಕ ಜಿ.ಟಿ.ದೇವೇಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ ಮಟ್ಟಿಗೆ ಪೂಜೆ ಸಲ್ಲಿಸಿ, ಪೈಲ್ವಾನರನ್ನು ಅಭಿನಂದಿಸಿದರು. ಬಳಿಕ ಮಾತನಾಡಿದ ಜಿಟಿಡಿ, ದೇಶದಲ್ಲಿಯೇ ಮೈಸೂರು ಕುಸ್ತಿ ಕಲೆಗೆ ಪ್ರಸಿದ್ಧಿ ಪಡೆದಿದೆ. ಅಂತರಾಷ್ಟ್ರೀಯ ಮಟ್ಟದ ಪೈಲ್ವಾನರನ್ನು ಸೋಲಿಸಿದ್ದ ಕೆ.ಜಿ.ಕೊಪ್ಪಲಿನ ಪೈ.ಬಸವಯ್ಯ ಅವರ ಹೆಸರು ಶಾಶ್ವತವಾಗಿ ಉಳಿದಿದೆ. ಪೈ.ಬೊರಯ್ಯ ಮತ್ತು ಅವರು, ಮೈಸೂರು ಮಹಾರಾಜರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಕುಸ್ತಿ ಕ್ರೀಡೆಯೂ ದೈಹಿಕ ಆರೋಗ್ಯಕ್ಕೆ ಸಹಕಾರಿಯಾಗಿದೆ. ಹೆಚ್ಚೆಚ್ಚು ಯುವಕ–ಯುವತಿಯರು ಪೈಲ್ವಾನರಾಗಬೇಕು ಎಂದು ಹಾರೈಸಿದರು.

ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಮೈಸೂರಲ್ಲಿ ಕನ್ನೇಗೌಡಕೊಪ್ಪಲು ಎಂದರೆ ಕುಸ್ತಿಗೆ ಹೆಸರುವಾಸಿ. ಒಟ್ಟು 6 ಗರಡಿ ಮನೆಗಳಿದ್ದು, ಪ್ರತೀ ವರ್ಷ ಮಟ್ಟಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಲಾಗುತ್ತದೆ. ಪೈಬಸವಯ್ಯ ಅವರು ಮೈಸೂರಿಗೆ ಕೀರ್ತಿ ತಂದವರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದ್ದ ಗಾಮಾ ಎಂಬ ಪೈಲ್ವಾನ್ ವಿರುದ್ಧವೂ ಕುಸ್ತಿ ಮಾಡಲು ಪೈ.ಬಸವಯ್ಯ ಸಿದ್ದರಾಗಿದ್ದರು. ದಸರಾ ನಾಡಕುಸ್ತಿಯಲ್ಲಿ ಭಾಗವಹಿಸುವ ಪೈಲ್ವಾನರ ತಯಾರಿಗಾಗಿ ಗರಡಿ ಮನೆಗಳಲ್ಲಿ ಮಟ್ಟಿಗೆ ಪೂಜೆ ಸಲ್ಲಿಸಲಾಗುತ್ತದೆ ಎಂದು ಮಾಹಿತಿ ನೀಡಿದರು. ಪೈ.ದೊಡ್ಡನಿಂಗಣ್ಣ, ಪೈನಾರಾಯಣ, ಪೈದತ್ತುರಾಜ್‌ಕುಮಾರ್, ಪೈಕೃಷ್ಣಪ್ಪ, ಪೈದೇವರಾಜು, ಮುಖಂಡ ಶೇಖರ್ ಸೇರಿದಂತೆ ಗ್ರಾಮದ ಯಜಮಾನರು, ಮುಖಂಡರು ಉಪಸ್ಥಿತರಿದ್ದರು.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬೋಗಾದಿ
ಮೈಸೂರು ತಾಲ್ಲೂಕು ಮತ್ತು ಜಿಲ್ಲೆ –570026
ದೂರವಾಣಿ ಸಂ: 0821–2331099
Web : www.bogaditown.mrc.gov.in
E. mail : itstaff_ulb_bogadi@yahoo.com
ಸಂ:ಪ.ಪಂ.ಬೋಗಾದಿ/ಆ.ಶಾ./ಟೆಂಡರ್.ಸಿ.ಆರ್.02/2024–25 ದಿ: 11.09.2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕಛೇರಿಯ ದೈನಂದಿನ ಕೆಲಸಕ್ಕಾಗಿ ಹೊರಗುತ್ತಿಗೆ ಆಧಾರದ ಮೇಲೆ ಹವಾನಿಯಂತ್ರಿತ ವಾಹನವನ್ನು (AC Car) ಸರಬರಾಜು ಮತ್ತು ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮಾಡಲು ಇ–ಪೋರ್ಟಲ್‌ನಲ್ಲಿ ನೋಂದಾಯಿತ ಅರ್ಹ ವಾಹನ ಸರಬರಾಜು ಏಜೆನ್ಸಿಯವರಿಂದ ಇ–ಪೋರ್ಟಲ್ https://kppp.karnataka.gov.in ಮೂಲಕ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಅರ್ಹ ಏಜೆನ್ಸಿಯವರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. 1) WORK INDENT NO:DMA/2024-25/SE3660 ಅಂದಾಜು ಮೊತ್ತವು ರೂ.5.04 ಲಕ್ಷ ಇರುತ್ತದೆ ಹಾಗೂ ಇ.ಎಂ.ಡಿ ಮೊತ್ತವು ರೂ.12,600/– ಇರುತ್ತದೆ. 2) WORK INDENT NO:DMA/2024-25/SE3690 ಅಂದಾಜು ಮೊತ್ತವು ಕ್ರಮವಾಗಿ ರೂ.2.80 ಲಕ್ಷ ಇರುತ್ತದೆ ಹಾಗೂ ಇ.ಎಂ.ಡಿ ಮೊತ್ತವು ರೂ.7,000/– ಇರುತ್ತದೆ ಸದರಿ ಟೆಂಡರನ್ನು ದಿ: 27.09.2024ರ ಸಂಜೆ 5.30 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು. ದಿ: 30.09.2024ರಂದು ಬೆಳಿಗ್ಗೆ 11.00 ಗಂಟೆಗೆ ಭರ್ತಿಮಾಡಿದ ಟೆಂಡರ್‌ಗಳನ್ನು ತೆರೆಯಲಾಗುವುದು. (ಸಾಧ್ಯವಾಗದಿದ್ದಲ್ಲಿ ಮುಂದಿನ ದಿನಾಂಕದಂದು ಟೆಂಡರ್ ತೆರೆಯಲಾಗುವುದು ಹಾಗೂ ತಿದ್ದುಪಡಿ/ಬದಲಾವಣೆಗಳಿದ್ದಲ್ಲಿ ಪತ್ರಿಕೆ ಪ್ರಕಟಣೆ ಹೊರಡಿಸಲಾಗುವುದಿಲ್ಲ) ಟೆಂಡರ್ ಅಂಗೀಕರಿಸುವ ತಿರಸ್ಕರಿಸುವ ಹಕ್ಕನ್ನು ಪಟ್ಟಣ ಪಂಚಾಯಿತಿ ಬೋಗಾದಿ ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗೆ ಪಟ್ಟಣ ಪಂಚಾಯಿತಿಯ ವೆಬ್ ಸೈಟ್ www.bogaditown.mrc.gov.inರ ಟೆಂಡರ್ ವಿಭಾಗದಲ್ಲಿ ವೀಕ್ಷಿಸಬಹುದಾಗಿದೆ.

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಬೋಗಾದಿ.
DIPR/DDMYS-555/KSMCA-377/2024-25

IN THE COURT OF THE PRINCIPAL FAMILY COURT AT MYSORE
M.C.No: 677/2023

Petitioner : Smt. Archana M. W/o B.Rakesh, D/o Mohith Sahani, Aged shout 22 years, R/at Door No. L-93, K.H.B. Colony, M-Block, Kuvempunagar, Mysuru-570023 **V/S**
Respondent :Sri B. Rakesh S/o Late B.R.Balakrishna, Aged about 24 Years R/at Door No. 104, 3rd Cross, Mahadeshwara Extension, Kumbarakoppal, Mysuru 570 016

PUBLIC NOTICE

Whereas the Petitioner has filed the above said Petition against the Respondent for the relief of dissolution of the marriage.
You are hereby summoned to appear before the Court in person through a pleader duly instructed and able to answer all material questions relating to the above said Petition or who shall be accompanied by some person able to answer all such persons, on 15/10/2024 at 11.00 AM. In default of your appearance before the Court on the day before mention the petition will be heard and determine in your absence as exparte.
Given under my hand and seal of the Court on this 10th day of September 2024

By the order of the Court
ಸಹಿ/– ಅಪರ ಅಧಿಕಾರಿ ಕುಟುಂಬ ನ್ಯಾಯಾಲಯ, ಮೈಸೂರು

Sd/- Sri A.G.Sudheer, Advocate for Petitioner #2759 Railway gate Road, K.G.Koppal, Mysuru
Ph: 94185-69891

ನಕ್ಕರೆ ಅದೇ ಸ್ವರ್ಗ

ರಂಗ : (ಸಂಗ್ಯಾ ಪ್ರಯಾಣ ಮಾಡುತ್ತಿದ್ದ. ರೈಲು ನಿಂತಿತು) ಸರ್ ಇದು ಯಾವ ಸ್ಟೇಷನ್ !

ತುಂಗ : (ನಗತೊಡಗಿದ.... ನಗ್ತಾನೆ ಇದ್ದ... ಕೊನೆಗೊಮ್ಮೆ ಸುಧಾರಿಸಿಕೊಂಡ) ಇದು ರೈಲ್ವೆ ಸ್ಟೇಷನ್ !

ಮೈಸೂರು ಮಿತ್ರ

ಶನಿವಾರ, 14 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಜಗತ್ತಲ್ಲಿ ಎಲ್ಲಾ ಸಂಬಂಧಗಳು ಕ್ಷಣಿಕ. ಯಾರಿಗೂ ಯಾರು ಇಲ್ಲ – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಚರ್ಮ ಹೋದರೂ ಪರವಾಗಿಲ್ಲ, ಕಾಸು ಹೋಗಬಾರದು ಎಂದಂತೆ.

ನಿಮ್ಮ ಪತ್ರಗಳು

ಹೊಸಹುಂಡಿ ಗ್ರಾಮದ ರಸ್ತೆಯಲ್ಲಿ ಕಸ ತೆರವಿಗೆ ಮನವಿ



ಮಾನ್ಯರೆ,

ಮೈಸೂರಿನ ನಂಜನಗೂಡು ರಸ್ತೆಯಲ್ಲಿನ ಟೋಲ್‌ಗೇಟ್ ಬಳಿ ಬಂಡಿಪಾಳ್ಯ ಎಪಿಎಂಸಿ ಹಿಂಭಾಗ ಇರುವ ಹೊಸಹುಂಡಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯಾಗಿದ್ದು, ಕಸದ ರಾಶಿ ರಸ್ತೆಯ ಎರಡು ಬದಿಗಳಲ್ಲಿ ಸದಾ ಬಿದ್ದಿರುತ್ತದೆ. ಸಾರ್ವಜನಿಕರು, ವಾಹನ ಸವಾರರು ಮತ್ತು ಅಲ್ಲಿ ವಾಸಿಸುವ ಜನರು ಅನೇಕ ಬಾರಿ ಕಚೇರಿಗೆ ಬಂದು ಕಸವನ್ನು ತೆರವುಗೊಳಿಸಲು ಮನವಿ ಮಾಡಿದ್ದಾರೆ. ಈ ಕುರಿತು ಕಡಕೊಳ ಪಟ್ಟಣ ಪಂಚಾಯ್ತಿ ಗಮನಕ್ಕೂ ತಂದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಸದರಿ ರಸ್ತೆಯು ಲೋಕೋಪಯೋಗಿ ಇಲಾಖೆಯ ರಾಜ್ಯ ಹೆದ್ದಾರಿಯಾಗಿದ್ದು, ಅವರ ವ್ಯಾಪ್ತಿಗೆ ಬರುವುದರಿಂದ ರಸ್ತೆಯ ಎರಡೂ ಬದಿಗಳಲ್ಲಿ ಹಾಕಿರುವ ಕಸವನ್ನು ಸಂಬಂಧಪಟ್ಟ ಕಡಕೊಳ ಪಟ್ಟಣ ಪಂಚಾಯಿತಿಯವರು ವಿಲೇವಾರಿ ಮಾಡಿ ಸಾರ್ವಜನಿಕರಿಗೆ ಓಡಾಡಲು ಅನುಕೂಲ ಮಾಡಿಕೊಡಬೇಕಾಗಿ ಈ ಮೂಲಕ ಮನವಿ.

– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು.

ವಿಪಕ್ಷ ನಾಯಕ ರಾಹುಲ್ ಗಾಂಧಿ ತಮ್ಮ ಸ್ಥಾನಮಾನದ ಘನತೆಗೆ ತಕ್ಕಂತೆ ನಡೆದುಕೊಳ್ಳಲಿ

ಮಾನ್ಯರೆ,

ಅಭಿವೃದ್ಧಿ ಪಥದತ್ತ ಹೆಜ್ಜೆ ಹಾರುತ್ತಿರುವ ಭಾರತವನ್ನು ಇಡೀ ವಿಶ್ವವೇ ನಿಬ್ಬೆರಗಾಗಿ ಗಮನಿಸುತ್ತಿದೆ. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಹಲವಾರು ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಪ್ರಧಾನಿ ನರೇಂದ್ರ ಮೋದಿಯವರು ವಿಶ್ವದ ನಂ 1 ನಾಯಕರಾಗಿ ಹೊರಹೊಮ್ಮಿದ್ದಾರೆ. ಪ್ರಪಂಚದ ಹಲವಾರು ದೇಶಗಳು ಮೋದಿಯವರ ಅಭಿವೃದ್ಧಿ ಕಾರ್ಯ ಹಾಗೂ ಅವರ ರಾಜತಾಂತ್ರಿಕ ನೀತಿಯನ್ನು ಮುಕ್ತ ಕಂಠದಿಂದ ಪ್ರಶಂಸಿಸುತ್ತಿವೆ. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ 82 ಕ್ಕೂ ಹೆಚ್ಚು ದೇಶಗಳನ್ನು ಸುತ್ತಿರುವ ಮೋದಿಯವರಿಗೆ ರತ್ನಗಂಬಳಿಯ ಸ್ವಾಗತ ದೊರಕುತ್ತಿದೆ. ದ್ವಿಪಕ್ಷಿಯ ಮಾತುಕತೆಗಳ ಮೂಲಕ ಹಲವಾರು ಐತಿಹಾಸಿಕ ಒಪ್ಪಂದಗಳು ನಡೆದಿವೆ.

ಇದುವರೆಗಿನ ಮೋದಿಯವರ ವಿದೇಶ ಪ್ರವಾಸದ ಭಾಷಣಗಳಲ್ಲಿ ಅಪ್ಪಿತಪ್ಪಿಯೂ ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರುವಂತ ಒಂದೇ ಒಂದು ಅಂಶವೂ ಅವರ ಭಾಷಣದಿಂದ ಕೇಳಿ ಬಂದಿಲ್ಲ. ಆದರೆ ಇದಕ್ಕೆ ವ್ಯತಿರಿಕ್ತವೆಂಬಂತೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ವಿದೇಶಿ ನೆಲದಲ್ಲಿ ಭಾರತದ ಘನತೆ–ಗೌರವಗಳಿಗೆ ಚ್ಯುತಿ ತರುವಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮೂಲಕ ತಮ್ಮ ಅಪ್ರಬುದ್ಧತೆಯನ್ನು ಹೊರ ಹಾಕಿದ್ದಾರೆ. ಅವರ ಅಮೇರಿಕಾ ಪ್ರವಾಸದ ಉಪನ್ಯಾಸ, ಸಂವಾದ ಕಾರ್ಯಕ್ರಮಗಳಲ್ಲಿ ಅವರ ಅಣಿಮುತ್ತುಗಳು ಭಾರತದಲ್ಲಿ ಕಿಚ್ಚು ಹಚ್ಚುವಂತೆ ಮಾಡಿದ್ದು ಇದು ದೇಶದ ಘನತೆಗೆ ಎಸಗಿದ ಅಪಚಾರವೆನ್ನಬಹುದು. ರಾಹುಲ್ ಗಾಂಧಿ ಇನ್ನಾದರೂ ಪರಿಪಕ್ವ ರಾಜಕಾರಣಿಯಂತೆ ಮಾತನಾಡುವ ಮೂಲಕ ತಮ್ಮ ಸ್ಥಾನ–ಮಾನದ ಘನತೆಗೆ ತಕ್ಕಂತೆ ನಡೆದುಕೊಳ್ಳಲಿ.

–ಹೆಚ್.ಆರ್. ಪ್ರಸಾದ್, ವಿವೇಕಾನಂದನಗರ, ಮೈಸೂರು.

ದಾಸಪ್ಪ ವೃತ್ತದಲ್ಲಿ ಶೌಚಾಲಯ ನಿರ್ಮಿಸಿ

ಮಾನ್ಯರೆ,

ಮೈಸೂರಿನ ದಾಸಪ್ಪ ವೃತ್ತದ ಬಸ್ ನಿಲ್ದಾಣದಲ್ಲಿ ಹೆಚ್ಚಿನ ಸಾರ್ವಜನಿಕರು ಮತ್ತು ಕಾಲೇಜಿನ ವಿದ್ಯಾರ್ಥಿಗಳು ಗೋಕುಲಂ, ಮೇಟಗಳ್ಳಿ, ಲೋಕನಾಯಕನಗರ, ಹೆಬ್ಬಾಳು, ವಿಜಯನಗರ, ಇನ್ಫೋಸಿಸ್ ಕಡೆಗೆ ಪ್ರಯಾಣಿಸಲು ಬಸ್ಸಿಗೆ ಕಾಯುವುದುಂಟು. ಆದರೆ ಈ ಪ್ರದೇಶದಲ್ಲಿ ಶೌಚಾಲಯದ ಸೌಲಭ್ಯವಿಲ್ಲ. ಇದರಿಂದ ಸಾರ್ವಜನಿಕರು ಪರದಾಡುವಂತಾಗಿದೆ. ಅಲ್ಲದೆ ಹಿನಕಲ್‌ನಲ್ಲಿರುವ ಮೇಲ್ಸುತುವೆ ಹತ್ತಿರ ಮಡಿಕೇರಿ ಕಡೆಗೆ ಹೋಗುವ ಪ್ರಯಾಣಿಕರಿಗೆ ಬಸ್ ನಿಲ್ದಾಣವಿಲ್ಲದೆ ಮಳೆ ಮತ್ತು ಬಿಸಿಲಿನ ತಾಪದಿಂದ ಸಾರ್ವಜನಿಕರು ಬಳಲುವಂತಾಗಿದೆ. ಒಂದು ಅಲ್ಲಿಯೂ ಶೌಚಾಲಯ ನಿರ್ಮಾಣ ಆಗಬೇಕಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸುತ್ತಾರೆಂದು ಆಶಿಸೋಣವೇ?

– ನೊಂದ ಪ್ರಯಾಣಿಕರು, ಮೈಸೂರು.

ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಮಾಡಲು ಪಾಲಿಕೆ ಅಧಿಕಾರಿಗಳಿಗೆ ಧೈರ್ಯವಿಲ್ಲವೆ?

ಮಾನ್ಯರೆ,

ಮೈಸೂರು ನಗರದ ಮುಖ್ಯ ರಸ್ತೆಗಳಾದ ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ ಮತ್ತು ದೇವರಾಜ ಅರಸು ರಸ್ತೆಗಳ ಇಕ್ಕೆಲಗಳಲ್ಲಿ ಅದರಲ್ಲೂ ವಿಶೇಷವಾಗಿ ದೇವರಾಜ ಅರಸು ರಸ್ತೆಯ ಮುಂಭಾಗದಲ್ಲಿ ಆ ರಸ್ತೆಯ ಅಂಗಡಿ ಮಾಲೀಕರುಗಳೇ ತಮ್ಮ ಸ್ವಂತ ಕಾರುಗಳನ್ನು ಬೆಳಗ್ಗೆಯಿಂದ ರಾತ್ರಿಯವರೆಗೆ ನಿಲುಗಡೆ ಮಾಡುವುದರಿಂದ ಸಾರ್ವಜನಿಕರು, ಕೆಲಸ ಕಾರ್ಯಗಳಿಗೆ ಸಿಟಿಗೆ ಬಂದರೆ ತಮ್ಮ ವಾಹನಗಳನ್ನು ನಿಲ್ಲಿಸುವುದಾದರೂ ಎಲ್ಲಿ?

ಕೆಲವು ಮೇಯರ್‌ಗಳು ಈ ರಸ್ತೆಯನ್ನು ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಮಾಡಲು ಪ್ರಯತ್ನಿಸಿ ವಿಫಲರಾದರು. ಅದಕ್ಕೆ ಸ್ಪಷ್ಟ ಕಾರಣ ತಿಳಿದು ಬಂದಿಲ್ಲ. ಈ ರಸ್ತೆಯಲ್ಲಿ ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಮಾಡುವ ಧೈರ್ಯ ನಗರ ಪಾಲಿಕೆಗೆ ಇಲ್ಲವೇ? ಕೆಲವು ಮೇಯರ್‌ಗಳು, ಅಧಿಕಾರದಲ್ಲಿದ್ದಾಗ ಪತ್ರಿಕಾ ಹೇಳಿಕೆ ನೀಡಿ ನಂತರ, ನಮಗೂ ಅದಕ್ಕೂ ಸಂಬಂಧವೇ ಇಲ್ಲ ಎಂಬಂತೆ ವರ್ತಿಸಿದರು. ಕಡೇ ಪಕ್ಷ ದೇವರಾಜ ಅರಸ್ ರಸ್ತೆಯಲ್ಲಾದರೂ ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಮಾಡಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಬಾಳಲ್ಲಿ ಆಗುವುದೆಲ್ಲ ಒಳ್ಳೆಯದಕ್ಕೆ...

"ಛೇ ಪುನಃ ಬಿದ್ದು ಕಾಲು ಮುರಿತಕ್ಕೆ ಒಳಗಾದ್ಲಾ? ಪಾಪ ಅವಳ ಸಮಯವೇ ಸರಿ ಇಲ್ಲ ಅಂತ ಅನ್ನಿಸುತ್ತದೆ. ಗ್ರಹಚಾರ ಕೆಟ್ಟರೆ ಯಾರು ಹೊಣೆ ಹೇಳು ನಮ್ಮಡೆ ಇನ್ನೊಂದು ರೀತಿಯಲ್ಲಿ ಹೇಳ್ತಾರೆ ಹಣೆ ಬರಕೆ ಹೊಣೆ ಯಾರು ಅಂತ...! ಆಕಸ್ಮಿಕವಾಗಿ ಬಿದ್ದು ಮೂಳೆ ಮುರಿತಕ್ಕೆ ಒಳಗಾದವರನ್ನು ನೋಡಲು ಬಂದಿದ್ದ ನೆಂಟರಾಡಿದ ಮಾತುಗಳಿವು. ಒಮ್ಮೊಮ್ಮೆ ನೆಂಟರಾಡುವ ಮಾತುಗಳು ಬಿಸಿ ತುಪ್ಪದಂತಿರುತ್ತದೆ.

ನಿಜ, ಮನುಷ್ಯ ತನ್ನ ಜೀವನದಲ್ಲಿ ಒಳ್ಳೆಯ ಘಟನೆಗಳು ಜರುಗಿದಾಗ ಸಂತಸ, ಸಂಭ್ರಮ, ಸಡಗರಪಡುತ್ತಾನೆ. ಅದೇ ಅವನ ಬದುಕಿನಲ್ಲಿ ಒಂದರ ಹಿಂದೆ ಒಂದರಂತೆ ದುಃಖ, ನೋವುಗಳು ಬಂದರೆ ಪರಿತಪಿಸುತ್ತಾನೆ. ತನ್ನನ್ನೇ ನೆಪ ಮಾಡಿಕೊಂಡು ಈ ಕಷ್ಟಗಳು ಯಾಕಾದರೂ ಹುಡುಕಿಕೊಂಡು ಬರುತ್ತವೆ ಎಂದು ತಲೆಮೇಲೆ ಕೈ ಹೊತ್ತು ಮರುಗುತ್ತಾನೆ.

ಜೀವನ ನಾವಂದುಕೊಂಡ ಹಾಗೆ ಇರುವುದಿಲ್ಲ. ಆಕಸ್ಮಿಕವಾಗಿ ನಾವು ನಿರೀಕ್ಷಿಸದ ಘಟನೆಗಳು ಒಂದರ ಹಿಂದೆ ಒಂದುಂತೆ ಬಂದು ಮಾನಸಿಕವಾಗಿ ನಮ್ಮನ್ನು ಕುಗ್ಗಿಸುವ ಕೆಲಸವನ್ನು ಮಾಡುತ್ತವೆ. ಆದರೆ ಇದಕ್ಕೆಲ್ಲ ಧೈರ್ಯಗೆಡಬಾರದು. ಏನೇ ಬಂದರೂ ಅದನ್ನು ಎದುರಿಸಿ ನಿಲ್ಲುವ ಮನೋಭಾವ ನಮ್ಮಲ್ಲಿ ಅಂತರ್ಗತವಾಗಬೇಕು

ಕೆಲವೊಮ್ಮೆ ನಾವಂದುಕೊಂಡದ್ದು ನಡೆಯದಿರಬಹುದು. ಕೆಲವರ ಬದುಕಲ್ಲಿ ಇದು ಪದೇಪದೆ ಸಂಭವಿಸಬಹುದು. ಹೀಗಂದ ಮಾತ್ರಕ್ಕೆ ಬದುಕಿನಲ್ಲಿ ಬೇಸರವನ್ನು ಮಾಡಿಕೊಂಡು ಕುಳಿತುಕೊಳ್ಳುವ ಅಗತ್ಯವಿಲ್ಲ. ಆಗುವುದೆಲ್ಲ ಒಳ್ಳೆಯದಕ್ಕೆ ಎಂಬ ಮನೋಭಾವ ನಮ್ಮಲ್ಲಿ ಹೊಸ ಭರವಸೆಯನ್ನು ಚೈತನ್ಯವನ್ನು ಮೂಡುವಂತೆ ಮಾಡಬೇಕು. ಆಗಿರುವುದನ್ನು ಅಥವಾ ಮುಂದೆ ಆಗುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲದಿರುವಾಗ ಅದರ ಬಗ್ಗೆ ಇಲ್ಲಸಲ್ಲದ ಆಲೋಚನೆಗಳನ್ನು ಮಾಡುತ್ತಾ ವರ್ತಮಾನವನ್ನು ಬೇಸರದಿಂದ ಕಳೆಯುವ ಅಗತ್ಯವಿಲ್ಲ..

23 ವರ್ಷದ ಯುವಕನೊಬ್ಬ ವಿಮಾನ ಚಾಲಕನಾಗಬೇಕೆಂದು ಕನಸು ಕಂಡರು.ಅದಕ್ಕಾಗಿ ಏರೋನಾಟಿಕಲ್ ಇಂಜಿನಿಯರ್ ಕೂಡ ಆದರು. ವಿಮಾನ ಚಾಲಕರ ಸಂದರ್ಶನದಲ್ಲಿ ಹತ್ತು ಜನರಲ್ಲಿ ಇವರು ಒಬ್ಬರಾಗಿದ್ದರು. ಒಂಬತ್ತು ಜನ ಆಯ್ಕೆಯಾದರು. ಇವರೊಬ್ಬರೇ ಆಯ್ಕೆಯಾಗಲಿಲ್ಲ. ಆ ಯುವಕ ಧೃತಿಗೆಡಲಿಲ್ಲ. ಮುಂದೆ ದೇಶದ ಪ್ರಥಮ ಪ್ರಜೆ ಎನಿಸಿಕೊಂಡು ರಾಷ್ಟ್ರಪತಿಯಾಗಿ ಮೂರುಪಡೆಗಳ ಮುಖ್ಯಸ್ಥರೆನಿಸಿ ಕೊಂಡು ತಮ್ಮ ಕನಸನ್ನು ನನಸಾಗಿಸಿಕೊಂಡರು. ಅವರೇ 'ಜನರ ರಾಷ್ಟ್ರಪತಿ' ಎಂದು ಖ್ಯಾತರಾದ **ಎ.ಪಿ.ಜೆ.ಅಬ್ದುಲ್ ಕಲಾಂ**. ಸೋಲಿಗೆ ಅಂಜದೆ ಮುನ್ನುಗ್ಗಿ ಯಶಸ್ಸು ಖಂಡಿತವಾಗಿ ನಿಮ್ಮನ್ನು ಕೈ ಹಿಡಿಯ ಬಲ್ಲದು ಎಂಬುದಕ್ಕೆ ಇವರ ಜೀವನ ನಿದರ್ಶನವೆನ್ನಬಹುದು.

ಕಾದಂಬರಿಗಳನ್ನು ಬರೆಯುತ್ತಾ ಹೆಚ್ಚು ಓದುಗರನ್ನು ಸೆಳೆದ, ಹಲವು ಭಾಷೆಗಳಿಗೆ ಇವರ ಕಾದಂಬರಿಗಳು ಭಾಷಾಂತರವಾಗಿದ್ದರೂ ಪ್ರಶಸ್ತಿಗಳಿಂದ ವಂಚಿತರಾದರೂ ಮುಂದೆ ಕನ್ನಡದಲ್ಲಿ ಮೊದಲ ಬಾರಿಗೆ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪಡೆದ ಹೆಗ್ಗಳಿಕೆ **ಎಸ್.ಎಲ್.ಭೈರಪ್ಪ** ಅವರಿಗೆ ಸಲ್ಲುತ್ತದೆ. ಹೀಗೆ ಹೇಳುತ್ತಾ ಹೋದರೆ ಹಲವು ನಿದರ್ಶನಗಳು ನಮ್ಮ ಕಣ್ಮುಂದೆ ಬರುತ್ತವೆ. ನಮ್ಮ ಕೆಲಸವನ್ನು ನಾವು ಪ್ರಾಮಾಣಿಕವಾಗಿ ಮಾಡುತ್ತಾ ಹೋದರೆ ಖಂಡಿತವಾಗಿ ಪ್ರತಿಫಲ ಸಿಕ್ಕೇ ಸಿಗುತ್ತೆ.

ನಾವು ಇಚ್ಛೆಪಟ್ಟಂತೆ ಜೀವನ ಸಾಗಿದ್ದರೆ ಚೆಂದ, ಆದರೆ ಕೆಲವೊಮ್ಮೆ ಅದು ಸಾಧ್ಯವಾಗುವುದಿಲ್ಲ. ಬದುಕಿನ ಪಥದಲ್ಲಿ ಅಡೆತಡೆಗಳು ಬರುತ್ತವೆ. ಅವು ನಮ್ಮನ್ನು ಇನ್ನಿಲ್ಲದಂತೆ ಕುಗ್ಗಿಸುವ ಕೆಲಸವನ್ನು ಮಾಡುತ್ತದೆ. ಅಂತಹ ಸಂದರ್ಭದಲ್ಲಿ ಏನೇ ಬಂದರೂ ಅವುಗಳನ್ನು ನಿಭಾಯಿಸಿ ಕೊಂಡು ಹೋಗುವ ಕಲೆಯನ್ನು ಮನುಷ್ಯ ಕರಗತ ಮಾಡಿಕೊಳ್ಳಬೇಕು. ಒಳ್ಳೆಯ ಘಟನೆಗಳು ನಡೆದಾಗ ಸಂತೋಷವಾಗುವುದು, ಕೆಟ್ಟ ಘಟನೆಗಳು ಸಂಭವಿಸಿದಾಗ ದುಃಖವಾಗುವುದು ಸಹಜ. ಆದರೆ ಎರಡನ್ನು ಸಮಾನವಾಗಿ ಸ್ವೀಕರಿಸುವ ಗುಣ ನಮ್ಮಲ್ಲಿ ಬರಬೇಕು. ಕೆಟ್ಟ ಘಟನೆಗಳು ದುಃಖವನ್ನು ತಂದುಕೊಟ್ಟರೂ, ಅದರಿಂದ ಅನುಭವ ಪಡೆಯುವುದು ಸಾಕಷ್ಟಿರುತ್ತದೆ. ಮುಂದೆ ಅಂತಹ ತಪ್ಪುಗಳು ನಡೆಯದಂತೆ ಎಚ್ಚರಿಕೆ ವಹಿಸಬಹುದು.

ಏನೇ ಬಂದರೂ ಅದನ್ನು ಎದುರಿಸಿ ನಿಲ್ಲುವಂತಹ ಗುಣ ನಮ್ಮಲ್ಲಿ ಮೊದಲಿಗೆ ಇರಬೇಕು. ನೋವಿಲ್ಲದ ಜೀವನವನ್ನು ನಡೆಸಲು ಯಾರಿಂದಲೂ ಸಾಧ್ಯವಾಗದು. ಬದುಕು ಎಂಬುದು ನೋವು–ನಲಿವುಗಳ ಮಿಶ್ರಣ, ಸೋಲು–ಗೆಲುವುಗಳ ಕಥನ. ಹೀಗಿರುವಾಗ ಏನೇ ಸಮಸ್ಯೆಗಳು ಎದುರಾದರೂ ಕೂಡ ಅದನ್ನು ಎದುರಿಸಿ ನಿಂತು ಮುನ್ನುಗ್ಗುವ ಛಲ ನಮ್ಮಲ್ಲಿ ಬರಬೇಕು.



ಮನುಷ್ಯನಾಗಿ ಹುಟ್ಟಿದ ಮೇಲೆ ಕಷ್ಟ–ಸುಖಗಳು ಸರ್ವೇಸಾಮಾನ್ಯ. ಕೆಲವೊಮ್ಮೆ ಸುಖ ನೀಡುವ ಸಂತೋಷಕ್ಕಿಂತ ಕಷ್ಟಗಳು ಕಲಿಸುವ ಪಾಠವೇ ಜೀವನ ಪೂರ್ತಿ ನೆನಪಿನಲ್ಲಿಟ್ಟುಕೊಳ್ಳುವ ಹಾಗೆ ಇರುತ್ತವೆ. ಪ್ರತಿ ಮನುಷ್ಯನನ್ನು ಗಟ್ಟಿಗೊಳಿಸುವುದು ಕಷ್ಟಗಳೇ. ಕಷ್ಟಗಳು ಮನುಷ್ಯನನ್ನು ಮತ್ತಷ್ಟು ಮಗದಷ್ಟು ಗಟ್ಟಿವಂತನನ್ನಾಗಿ ಮಾಡುತ್ತವೆ. ಕೆಲವೊಂದು ಸಂದರ್ಭ, ಸನ್ನಿವೇಶ ಬೇಸರವನ್ನು, ಜಿಗುಪ್ಸೆಯನ್ನು ತಂದೊಡ್ಡುತ್ತವೆ ನಿಜ. ಆದರೆ ಅದು ಕಲಿಸುವ ಪಾಠದಿಂದ ಮುಂದೆ ಏನೇ ಬಂದರೂ ಅದನ್ನು ಎದುರಿಸಿ ನಿಲ್ಲುವ ಶಕ್ತಿ ಬರುತ್ತದೆ.

ನನ್ನ ಸಮಯ ಸರಿ ಇಲ್ಲ, ಅಂದುಕೊಂಡದ್ದು ಯಾವುದೋ ನಡೆಯುತ್ತಿಲ್ಲ, ಕಷ್ಟ ನನ್ನೊಬ್ಬನಿಗೆ ಮಾತ್ರ ಬರುತ್ತಿದೆ. ಈ ರೀತಿಯ ನಕರಾತ್ಮಕ ಅಂಶಗಳನ್ನು ಆಲೋಚಿಸಿಕೊಂಡು ಬದುಕನ್ನು ಬೇಸರದಿಂದ ಕಳೆಯುವ ಬದಲು ಸಮಸ್ಯೆಗಳು ಬರುವುದೇ ಮನುಷ್ಯನನ್ನು ಗಟ್ಟಿಗೊಳಿಸುವುದಕ್ಕೆ ಎಂಬ ಸಕರಾತ್ಮಕ ಆಲೋಚನೆಯಿಂದ ಮುನ್ನುಗ್ಗಿದ್ದಲ್ಲಿ ಪ್ರತಿ ನೋವು, ಸೋಲುಗಳಿಂದಲೂ ಹೊಸ ಭರವಸೆಗಳು ಉಂಟಾಗಬಲ್ಲದು. ಮನುಷ್ಯನಾಗಿ ಹುಟ್ಟಿದ ಮೇಲೆ ಕಷ್ಟ–ಸುಖಗಳು ಸರ್ವೇಸಾಮಾನ್ಯ. ಕೆಲವೊಮ್ಮೆ ಸುಖ ನೀಡುವ ಸಂತೋಷಕ್ಕಿಂತ ಕಷ್ಟಗಳು ಕಲಿಸುವ ಪಾಠವೇ ಜೀವನ ಪೂರ್ತಿ ನೆನಪಿನಲ್ಲಿಟ್ಟುಕೊಳ್ಳುವ ಹಾಗೆ ಇರುತ್ತವೆ. ಪ್ರತಿ ಮನುಷ್ಯನನ್ನು ಗಟ್ಟಿಗೊಳಿಸುವುದು ಕಷ್ಟಗಳೇ.

ಉದಾಹರಣೆಗೆ; ಇತ್ತೀಚೆಗೆ ಪ್ಯಾರಾ ಒಲಂಪಿಕ್ಸ್‌ನಲ್ಲಿ ಭಾರತ ಸಾಕಷ್ಟು ಪದಕಗಳನ್ನು ಗೆದ್ದು ಸಾಧನೆ ಮಾಡಿದೆ. 29 ಪದಕಗಳನ್ನು ಪಡೆಯುವ ಮೂಲಕ ದಾಖಲೆಯನ್ನು ಬರೆದಿದೆ. ಈ ದಾಖಲೆಯನ್ನು ಮಾಡಿದವರೆಲ್ಲ ಯಾರು? ಒಮ್ಮೆ ಅವರ ಇತಿಹಾಸವನ್ನು ನೋಡಿದರೆ ದೈಹಿಕವಾಗಿ ಶಕ್ತಿಕುಂದಿದವರೆ. ಇಡೀ ಜಗತ್ತೆ ತಮ್ಮಡೆಗೆ ನೋಡುವಂತೆ ಮಾಡಿದ್ದಾರೆ. ಯಾರು ಕೂಡ ವಿಧಿ ಸರಿ ಇಲ್ಲ, ದೇವರು ಮೋಸ ಮಾಡಿದ ಎಂಬಿತ್ಯಾದಿ ಮಾತುಗಳನ್ನಾಡುತ್ತಾ ಸಮಯವನ್ನು ಕಳೆಯದೆ ತಮ್ಮ ಅಂಗವಿಕಲತೆ ಯನ್ನೇ ಸವಾಲನ್ನಾಗಿ ಸ್ವೀಕರಿಸಿ ಎದ್ದು , ಬಿದ್ದು ಗೆದ್ದು ಬಂದವರು.

ಜೀವನದಲ್ಲಿ ಎದುರಾಗುವ ಪ್ರತಿಯೊಂದು ಸನ್ನಿವೇಶವು ಹೊಸ ಭರವಸೆಯನ್ನು, ಹೊಸ ಅನುಭವವನ್ನು ತಂದುಕೊಡಬಲ್ಲದು. ನೋಡುವ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕಷ್ಟೇ. ನನಗೆ ಇದನ್ನು ಹೇಳುವಾಗ ಹಿಂದೊಮ್ಮೆ ಓದಿದ್ದ ಕಥೆಯೊಂದು ನೆನಪಿಗೆ ಬರುತ್ತದೆ.

ಹೀಗೊಂದು ಕಥೆ: ಒಂದೂರಿನಲ್ಲಿ ಒಬ್ಬ ರಾಜನಿದ್ದ. ತನಗೆ ಇಷ್ಟ ಬಂದಂತೆ ಜೀವನವನ್ನು ಸಾಗಿಸುತ್ತಿದ್ದ ಆ ರಾಜನಿಗೆ ಬೇಟೆಯಾಡುವುದು ಒಂದು ಹವ್ಯಾಸ. ಒಮ್ಮೆ ರಾಜ ತನ್ನ ಮಂತ್ರಿಯೊಂದಿಗೆ ಕಾಡಿಗೆ ಹೋಗುತ್ತಾನೆ. ಕಾಡಿನಲ್ಲಿ ಮಾತನಾಡುತ್ತಾ ಹೋಗುವಾಗ ಮಂತ್ರಿ ಮಾತಿನ ನಡುವೆ **ಆಗುವುದೆಲ್ಲ ಒಳ್ಳೆಯದಕ್ಕೆ** ಎಂಬ ಮಾತನ್ನು ಪದೇ ಪದೆ ಪ್ರಯೋಗಿಸುತ್ತ ಇದ್ದ. ರಾಜನಿಗೆ ಮಂತ್ರಿ ಬಳಸುವ ಈ ವಾಕ್ಯವನ್ನು ಕೇಳಿ ಕಿರಿಕಿರಿ ಉಂಟಾಗುತ್ತಿತ್ತು. ಕೋಪವು ಬರುತ್ತಿತ್ತು. ಆದರೆ ಏನು ಮಾಡುವಂತಿಲ್ಲ, ಏಕೆಂದರೆ ಕಾಡಿನಲ್ಲಿ ಇರುವವರು ಇಬ್ಬರೇ ಮಾತ್ರ. ಹೀಗೆ ಮುಂದಕ್ಕೆ ಸಾಗಿದಂತೆ ಪ್ರಾಣಿಯೊಂದನ್ನು ನೋಡಿ ರಾಜ ಬಿಲ್ಲನ್ನು ಹೂಡಲು ಸಿದ್ಧನಾದ. ಬಿಲ್ಲನ್ನು ತನ್ನ ಗುರಿಯಡೆಗೆ ತಲುಪಿಸುವ ಸಂದರ್ಭದಲ್ಲಿ ಆಕಸ್ಮಿಕವಾಗಿ ರಾಜನ ಎಡಗೈನ ಹೆಬ್ಬೆರಳು ತುಂಡರಿಸಿ ರಕ್ತ ಸುರಿಯಿತು. ರಾಜ ತನ್ನ ಸ್ಥಿತಿಯನ್ನು ಮಂತ್ರಿಗೆ ತಿಳಿಸಿದಾಗ ಮಂತ್ರಿ ಮೊದಲಿನಂತೆಯೇ **ಆಗುವುದೆಲ್ಲ ಒಳ್ಳೆಯದಕ್ಕೆ** ಎಂದ. ಹೆಬ್ಬೆರಳನ್ನು ಕಳೆದುಕೊಂಡು ಮೊದಲೇ ನೋವನ್ನು ಅನುಭವಿಸುತ್ತಿದ್ದ ರಾಜನಿಗೆ ಮಂತ್ರಿಯ ಈ ಮಾತು ಮತ್ತಷ್ಟು ಕೋಪ ತಂದಿತು. ಏನು ನನ್ನ ಹೆಬ್ಬೆರಳು ಕತ್ತರಿಸಿ ಹೋಗಿದ್ದು ಒಳ್ಳೆಯದಾಯಿತೆ ಎಂದು ಕೋಪಗೊಂಡು ಮಂತ್ರಿಯನ್ನು ಅಲ್ಲೇ ಹಳ್ಳಕ್ಕೆ ತಳ್ಳಿದ. ಅದೇ ಕೋಪದಿಂದ ಒಬ್ಬನೇ ಕಾಡಿನಲ್ಲಿ ಮುಂದೆ ಸಾಗಿದ. ಆಗ ಕಾಡು ಜನರ ಗುಂಪೊಂದು ರಾಜನನ್ನು ಅಡ್ಡಗಟ್ಟಿ ಅವನನ್ನು ತಮ್ಮ ಬಿಡಾರಕ್ಕೆ ಎಳೆದುಕೊಂಡು ಹೋಯಿತು. ತಾನೊಬ್ಬ ರಾಜನೆಂದು, ತನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿರುವಿರಿ ಎಂದು ರಾಜ ಒಂದೇ ಸಮನೆ ಕೂಗುತ್ತಿದ್ದರೂ ಆ ಕಾಡಿನ ಜನರಿಗೆ ರಾಜನ ಭಾಷೆ ಅರ್ಥವಾಗಲಿಲ್ಲ. ಅಂದು ಆ ಕಾಡಿನ ಜನರಿಗೆ ಯಾವುದೋ ಹಬ್ಬದ ಸಂಭ್ರಮ. ಆ ಹಬ್ಬಕ್ಕೆ ನರಬಲಿಯನ್ನು ಕೊಡಲು ಮನುಷ್ಯರನ್ನು ಹುಡುಕುವಾಗ ಅವರಿಗೆ ರಾಜ ಸಿಕ್ಕಿದ್ದ. ರಾಜನನ್ನು ಬಲಿ ಕೊಡಲು ಸಿದ್ಧತೆ ನಡೆಸಿ ಇನ್ನೇನು ಬಲಿ ಕೊಡಬೇಕು ಎನ್ನುವಷ್ಟರಲ್ಲಿ ಅವನ ಹೆಬ್ಬೆರಳು ಇಲ್ಲದ್ದನ್ನು ಗಮನಿಸಿ, ಅಂಗವಿಕಲತೆ ಹೊಂದಿರುವವರನ್ನು ಬಲಿಕೊಡುವುದಿಲ್ಲ ಎಂದು ಹೇಳಿ ಕಳುಹಿಸುತ್ತಾರೆ. ಅವರ ಭಾಷೆ ರಾಜನಿಗೆ ಅರ್ಥವಾಗದಿದ್ದರೂ ಅವರ ಆಂಗಿಕ ಭಾವದಿಂದ ಅರ್ಥಮಾಡಿಕೊಂಡ ರಾಜ ಕೋಪದಿಂದ ತಳ್ಳಿದ್ದ ಮಂತ್ರಿಯನ್ನು ಹುಡುಕಿಕೊಂಡು ಬಂದು ಅವನ ರಕ್ಷಣೆ ಮಾಡಿದ. ನಂತರ ನಡೆದ ಘಟನೆಗಳನ್ನು ತಿಳಿಸಿದಾಗ ಮಂತ್ರಿ ಯಥಾಪ್ರಕಾರ **ಆಗುವುದೆಲ್ಲ ಒಳ್ಳೆಯದಕ್ಕೆ** ಎಂಬ ಉತ್ತರವನ್ನೇ ನೀಡಿದ. ರಾಜನಿಗೆ ಮತ್ತೆ ಆಶ್ಚರ್ಯ; ಯಾಕೆ ಹೀಗೆ ಹೇಳುತ್ತಿರುವೆ ಎಂದು ಕೇಳಿದಾಗ ಪ್ರಭು ನಿಮಗೆ ಕೋಪ ಬಂದು ನನ್ನನ್ನು ಹಳ್ಳಕ್ಕೆ ತಳ್ಳದಿದ್ದ ಪಕ್ಷದಲ್ಲಿ ನಾನು ನಿಮ್ಮೊಂದಿಗೆ ಬರಬೇಕಾಗಿತ್ತು. ನೀವು ಅಂಗವಿಕಲರಾಗಿದ್ದ ಕಾರಣ ನಿಮ್ಮನ್ನು ಬಲಿ ಕೊಡಲಿಲ್ಲ. ಆದರೆ ಎಲ್ಲವೂ ಚೆನ್ನಾಗಿದ್ದ ನನ್ನನ್ನು ಖಂಡಿತವಾಗಿಯೂ ಬಲಿಕೊಡುತ್ತಿದ್ದ ರಲ್ಲವೇ?! ಆದ್ದರಿಂದಲೇ ಹೇಳಿದ್ದು ನೀವು ಕೋಪ ಮಾಡಿಕೊಂಡಿದ್ದು, ನನ್ನನ್ನು ತಳ್ಳಿದ್ದು ಎಲ್ಲವೂ ಒಳ್ಳೆಯದಕ್ಕೆ ಎಂದು ತನ್ನ ಜಾಣ್ಮೆಯ ಉತ್ತರವನ್ನು ನೀಡಿದಾಗ ರಾಜ ಕೂಡ ಮಂತ್ರಿಯ ಬುದ್ಧಿ ಮೆಚ್ಚಿದ.

ಮೇಲೆ ಹೇಳಿದ ಕಥೆಯಲ್ಲಿ ಬರುವ ರಾಜ, ಮಂತ್ರಿ , ಆ ಕಾಡು ಜನರು, ಸ್ಥಳ ಇದ್ಯಾವುದು ಮುಖ್ಯ ಎಂದಾಗಲೀ ಅಥವಾ ಈ ಘಟನೆ ಸತ್ಯವಾದುದೇ ಎನ್ನುವುದಾಗಲೀ ಮುಖ್ಯವಲ್ಲ. ಬದುಕಿನಲ್ಲಿ ಏನೇ ಆದರೂ ಅದನ್ನು ಎದುರಿಸಿ ನಿಲ್ಲಬೇಕು ಜೊತೆಗೆ ಆಗುವುದೆಲ್ಲ ಒಳ್ಳೆಯದಕ್ಕೆ ಎಂಬ ಸಕರಾತ್ಮಕ ಭಾವನೆಯನ್ನು ಬೆಳೆಸಿಕೊಂಡಾಗ ಹೆಚ್ಚಿನ ದುಃಖವಾಗದು ಎಂಬ ಸಕಾರಾತ್ಮಕ ಸಂದೇಶವನ್ನು ತಂದುಕೊಡುತ್ತದೆ.ಬದುಕಿನಲ್ಲಿ ಭರವಸೆ ಮುಖ್ಯ, ಆತ್ಮವಿಶ್ವಾಸ ಮುಖ್ಯ.

ಬದುಕಿನಲ್ಲಿ ಜರುಗುವ ಘಟನೆಗಳನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲದಿದ್ದಾಗ ಅದನ್ನು ಹೇಗೆ ಬಂದರೂ ಸ್ವೀಕರಿಸುವ ಮನೋಭಾವ ನಮ್ಮಲ್ಲಿ ಮೊದಲಿಗೆ ಬರಬೇಕು. ಕಷ್ಟ ಬಂದಾಗ ಧೈರ್ಯವಾಗಿ ಅದನ್ನು ಎದುರಿಸಬೇಕು. ಆಗ ಕಷ್ಟಗಳು ಸಾಧನೆಗೆ ಸ್ಫೂರ್ತಿ ನೀಡುತ್ತದೆ. ನಕರಾತ್ಮಕ ಆಲೋಚನೆಗಳು ಸ್ವತಂತ್ರ ಶಕ್ತಿಯನ್ನು, ಆತ್ಮವಿಶ್ವಾಸವನ್ನು ಕುಗ್ಗಿಸುತ್ತವೆ.

ಶ್ರೀಕೃಷ್ಣ ಹೇಳಿರುವ ಭಗವದ್ಗೀತೆಯ ಈ ಸಾರವನ್ನು ಸರಿಯಾಗಿ ಅರ್ಥಮಾಡಿಕೊಂಡು ಬದುಕಿಗೆ ಅಳವಡಿಸಿಕೊಂಡರೆ ಸುಂದರ ಜೀವನ ನಮದಾಗುವುದರಲ್ಲಿ ಯಾವುದೇ ಅನುಮಾನವಿಲ್ಲ;


ಆದುದೆಲ್ಲಾ ಒಳ್ಳೆಯದಕ್ಕೆ ಆಗಿದೆ
ಆಗುವುದೆಲ್ಲಾ ಒಳ್ಳೆಯದೇ ಆಗುತ್ತಿದೆ
ಆಗಲಿರುವುದು ಸಹ ಒಳ್ಳೆಯದೇ ಆಗಲಿದೆ
ರೋಧಿಸಲು ನೀನೇನು ಕಳೆದುಕೊಂಡಿರುವೆ
ಕಳೆದುಕೊಳ್ಳಲು ನೀನು ತಂದಿರುವುದಾದರು ಏನು
ನಾಶವಾಗಲು ನೀನು ಮಾಡಿರುವುದಾದರೂ ಏನು
ನೀನೇನು ಪಡೆದಿದ್ದರೂ ಅದನ್ನು ಇಲ್ಲಿಂದಲೇ ಪಡೆದಿರುವೆ
ಏನನ್ನು ಅರ್ಪಿಸಿದರೂ ಅದನ್ನು ಇಲ್ಲಿಗೆ ಅರ್ಪಿಸಿರುವೆ
ನೆನ್ನೆ ಬೇರೆ ಯಾರದ್ದೋ ಆಗಿದ್ದು ಇಂದು ನಿನ್ನದಾಗಿದೆ
ಮತ್ತು ನಾಳೆ ಇನ್ನಾರದ್ದೋ ಆಗಲಿದೆ
ಪರಿವರ್ತನೆ ಜಗದ ನಿಯಮ

***

ನಾಗಮಂಗಲದ ಗಲಾಟೆ ಬಿಜೆಪಿ, ಜೆಡಿಎಸ್, ಆರ್‌ಎಸ್‌ಎಸ್ ಪೂರ್ವ ನಿಯೋಜಿತ ಕೃತ್ಯ

● ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪ ● ರಾಜಕೀಯ ಲಾಭ ಪಡೆಯಲು ಬಿಜೆಪಿಯತ್ತ; ಕುಮಾರಸ್ವಾಮಿ ಸಂಸದರಾದ ನಂತರ ಮಂಡ್ಯದಲ್ಲಿ ನೆಮ್ಮದಿ ಹಾಳಾಗಿದೆ

ಮೈಸೂರು, ಸೆ.13(ಬಿಎಲ್‌ಯು)– ನಾಗಮಂಗಲದ ಗಲಾಟೆ ಬಿಜೆಪಿ, ಜೆಡಿ ಎಸ್ ಹಾಗೂ ಆರ್‌ಎಸ್‌ಎಸ್ ನಡೆಸಿದ ಪೂರ್ವನಿಯೋ ಜಿತ ಕೃತ್ಯ ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಆರೋಪಿಸಿದ್ದಾರೆ.



ಎಂ.ಲಕ್ಷ್ಮಣ

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋಮು ಗಲಭೆ ಸೃಷ್ಟಿಸಲು ಇವರು ನಡೆಸಿದ ಹುನ್ನಾರದ ಬಗ್ಗೆ ಗೃಹ ಸಚಿವ ಡಾ.ಪರಮೇಶ್ವರ್ ಅವರು ದಾಖಲಾತಿ ಸಮೇತ ವಿವರಣೆ ನೀಡಲಿದ್ದಾರೆ ಎಂದರು.

ಮೈಸೂರಿನಲ್ಲಿ ನಡೆದ ಗಣೇಶ ಮೆರವಣಿಗೆಯಲ್ಲಿ ಗಲಭೆ ಸೃಷ್ಟಿಸಲು ಬಿಜೆಪಿ, ಜೆಡಿಎಸ್ ಹಾಗೂ ಆರ್‌ಎಸ್‌ಎಸ್ ಹುನ್ನಾರ ಮಾಡಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಇದನ್ನು ತಡೆಯುವಲ್ಲಿ ಯಶಸ್ವಿಯಾಗಿದೆ ಎಂದು ಲಕ್ಷ್ಮಣ ತಿಳಿಸಿದರು.

ನಾಗಮಂಗಲದಲ್ಲಿ ನಡೆದ ಗಲಾಟೆಯಲ್ಲಿ 20 ಹಿಂದುಗಳು ಹಾಗೂ 30 ಮುಸ್ಲಿಂರು ಭಾಗಿಯಾಗಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ನಾಗಮಂಗಲಕ್ಕೆ ಭೇಟಿ ನೀಡಿ ಪ್ರಯೋಚದನಕಾರಿ ಹೇಳಿಕೆ ನೀಡಿ ದ್ದಾರೆ. ಒಂದು ಸಮುದಾಯವನ್ನು ಗುರಿಯಾಗಿಟ್ಟುಕೊಂಡು ತುಚ್ಛವಾಗಿ ಬೈಯ್ದಿದ್ದಾರೆ. ಇವರ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲು ಮಾಡಬೇಕು ಎಂದು ಆಗ್ರಹಿಸಿದರು.

ರಾಜಕೀಯ ಲಾಭಕ್ಕೆ ಬಿಜೆಪಿ ಯತ್ನ: ಬಿಜೆಪಿ ಸರ್ಕಾರದ ಅವಧಿಯಲ್ಲಿ 757 ಕೋಮುಗಲಭೆ ನಡೆದಿದ್ದು, 21 ಯುವಕರು ಸಾವನ್ನಪ್ಪಿದ್ದಾರೆ. ಕೋಮು ಗಲಭೆಯಲ್ಲಿ ಕರ್ನಾಟಕ ಎರಡನೇ ಸ್ಥಾನ ಪಡೆದಿತ್ತು ಇದಕ್ಕೆ ಹಿಂದೂ ಸಂಘಟನೆಗಳು ಕುಮ್ಮಕ್ಕು ನೀಡಿದ್ದವು. ಈ ಮೂಲಕ ಅಶಾಂತಿ ಸೃಷ್ಟಿ ಮಾಡಿ ರಾಜಕೀಯ ಲಾಭ ಪಡೆಯುವುದು ಬಿಜೆಪಿ ಉದ್ದೇಶ ವಾಗಿತ್ತು ಎಂದು ಆರೋಪಿಸಿದರು. ಗಲಾಟೆಯಾದ ಸಂದರ್ಭದಲ್ಲಿ ಪ್ರತ್ಯಕ್ಷರಾಗುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತರುವಾಯ ನಾಪತ್ತೆಯಾಗುತ್ತಾರೆ. ರಾಮನ ಹೆಸರಿನಲ್ಲಿ ರಾಜಕಾರಣ ಮಾಡಿದ ಬಿಜೆಪಿಗೆ ಸ್ಪಷ್ಟ ಬಹುಮತ ನೀಡದೆ ರಾಮನೆ ಕಲ್ಲು ಹಾಕಿದ. ಈಗ ಗಣೇಶನ ಹೆಸರಿನಲ್ಲಿ ರಾಜಕಾರಣ ಮಾಡಲು ಹೊರಟಿದ್ದಾರೆ ಎಂದು ಟೀಕಿಸಿದರು. ನಾವು ಹಿಂದುಗಳನ್ನು ಟಾರ್ಗೆಟ್ ಮಾಡಿಲ್ಲ. ಕಾಂಗ್ರೆಸ್‌ನವರು ಭಾಗಿಯಾಗಿದ್ದರೂ ಅವರ ವಿರುದ್ಧ ಪ್ರಕರಣ ದಾಖಲಿಸಿ ಎಂದು ಒತ್ತಾಯಿಸಿದ ಲಕ್ಷ್ಮಣ, ಪೊಲೀಸ್ ಅಧಿಕಾರಿಗಳು ವಿಫಲರಾಗಿದ್ದರೆ ಅವರ ವಿರುದ್ಧವೂ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎಂದರು. ಕುಮಾರಸ್ವಾಮಿ ಸಂಸದರಾಗಿ ಆಯ್ಕೆಯಾದ ನಂತರ ಮಂಡ್ಯದಲ್ಲಿ ನೆಮ್ಮದಿ ಹಾಳಾಗಿದೆ. ಪ್ರತಿ ದಿನ ಒಂದಲ್ಲಾ ಒಂದು ವಿಚಾರ ಇಟ್ಟು ಗಲಾಟೆ ಮಾಡಲಾಗುತ್ತಿದೆ. ಇದರಿಂದ ನಮ್ಮ ಸರ್ಕಾರಕ್ಕೆ ಕೆಲಸ ಮಾಡಲು ಬಿಡುತ್ತಿಲ್ಲ ಎಂದು ಆರೋಪಿಸಿದರು.

ಸಿಟಿ ಬಸ್‌ನಲ್ಲಿ ಆಭರಣವಿದ್ದ ಮಹಿಳೆಯ ಪರ್ಸ್ ಕಳವು

ಮೈಸೂರು, ಸೆ.13– ಮಹಿಳೆಯೊಬ್ಬರ ಬ್ಯಾಗ್‌ನಲ್ಲಿದ್ದ ಚಿನ್ನಾಭರಣವನ್ನು ಬಸ್‌ನಲ್ಲಿ ಕಳವು ಮಾಡಿರುವ ಘಟನೆ ಮೈಸೂರಿನಲ್ಲಿ ವರದಿಯಾಗಿದೆ.

ಚಾಮರಾಜನಗರ ಜಿಲ್ಲೆಯಿಂದ ಮೈಸೂರಿನ ಶ್ರೀರಾಂಪುರದಲ್ಲಿರುವ ತವರು ಮನೆಗೆ ಬಂದಿದ್ದ ಬಿ.ಅರ್ಚನಾ ಅವರು ತಮ್ಮ ಬ್ಯಾಗ್‌ನಲ್ಲಿ ಇಟ್ಟುಕೊಂಡಿದ್ದ ಸುಮಾರು 4 ಲಕ್ಷ ರೂ. ಮೌಲ್ಯದ ಚಿನ್ನಾಭರಣವನ್ನು ಖದೀಮರು ಎಗರಿಸಿದ್ದಾರೆ.

ಗೌರಿ ಹಬ್ಬಕ್ಕೆಂದು ತವರಿಗೆ ಬಂದಿದ್ದ ಅರ್ಚನಾ, ಸೆ.9ರಂದು ಪತಿಯ ಊರಿಗೆ ತೆರಳುವಾಗ ಸಿಟಿ ಬಸ್‌ನಲ್ಲಿ ಈ ಘಟನೆ ನಡೆದಿದೆ. ಲಾಂಗ್ ಚೈನ್, ಡಾಲರ್, ಓಲೆ ಸೇರಿದಂತೆ ಸುಮಾರು 70 ಗ್ರಾಂ ಚಿನ್ನಾಭರಣವನ್ನು ಹ್ಯಾಂಡ್‌ಪರ್ಸ್‌ನಲ್ಲಿ ಇಟ್ಟುಕೊಂಡು ಅದನ್ನು ಲಗ್ಗೇಜ್ ಬ್ಯಾಗ್‌ನಲ್ಲಿಟ್ಟಿದ್ದರು. ವಿವೇಕಾನಂದನಗರ ಡಿಪೋ ಬಳಿ ಸಿಟಿ ಬಸ್ ಹತ್ತಿ ಹಾರ್ಡಿಂಜ್ ಸರ್ಕಲ್ ಬಳಿ ಇಳಿದು ಚಾಮರಾಜನಗರಕ್ಕೆ ಹೋಗಲು ಗ್ರಾಮಾಂತರ ಬಸ್ ನಿಲ್ದಾಣದ ಕಡೆಗೆ ಹೋಗಲು ರಸ್ತೆ ದಾಟುವಾಗ ತಮ್ಮ ಬ್ಯಾಗ್ ಜಿಪ್ ತೆರೆದಿದ್ದನ್ನು ಗಮನಿಸಿದ್ದಾರೆ. ರಸ್ತೆ ದಾಟಿ ಬ್ಯಾಗ್ ಪರಿಶೀಲಿಸಿದಾಗ ಚಿನ್ನಾಭರಣವಿದ್ದ ಪರ್ಸ್ ಇರಲಿಲ್ಲ. ಈ ಸಂಬಂಧ ದೇವರಾಜ ಪೊಲೀಸ್ ಠಾಣೆಗೆ ದೂರು ನೀಡಲಾಗಿದ್ದು, ಖದೀಮರ ಪತ್ತೆಗೆ ಪೊಲೀಸರು ಶೋಧ ನಡೆಸಿದ್ದಾರೆ.

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ

ಹೋಟೆಲ್ ಮಾಲೀಕರು, ಸಿಬ್ಬಂದಿ ಪಾಲ್ಗೊಳ್ಳಲು ನಿರ್ಧಾರ

ಮೈಸೂರು, ಸೆ.13– ಸರ್ಕಾರದ ನಿರ್ಧಾರದಂತೆ ಸೆ.15 ರಂದು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನಾಚರಣೆ ಅಂಗವಾಗಿ ಮೈಸೂರು ಜಿಲ್ಲೆಯ ಎಲ್ಲಾ ಹೋಟೆಲ್, ರೆಸ್ಟೋರೆಂಟ್, ನಾನ್‌ವೆಜ್ ರೆಸ್ಟೋರೆಂಟ್, ಬೇಕರಿ, ಸ್ವೀಟ್ ಶಾಪ್, ಟಿಫಾನೀಸ್ ಇನ್ನಿತರೆ ಆತಿಥ್ಯ ನೀಡುವ ಎಲ್ಲಾ ಉದ್ಯಮಿಗಳು ಅಂದು ಬೆಳಿಗ್ಗೆ 8.30 ಗಂಟೆಯಿಂದ 9.30 ಗಂಟೆಯೊಳಗೆ ಮೈಸೂರು ಜಾಕಿ ಕ್ವಾಟ್ರಸ್ ಹತ್ತಿರ ಮಾನವ ಸರಪಳಿಯಲ್ಲಿ ಪಾಲ್ಗೊಳ್ಳಬೇಕೆಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ಕೋರಿದ್ದಾರೆ. ಅಂದು ಮಾಲೀಕರ ಜೊತೆಗೆ ಎಲ್ಲಾ ನೌಕರರು ಒಂದು ಗಂಟೆ ಬಿಡುವು ಮಾಡಿ ಕೊಂಡು ಈ ಕಾರ್ಯಕ್ರಮದಲ್ಲಿ ಕೈಜೋಡಿಸೋಣ. ತಪ್ಪದೇ ಎಲ್ಲಾ ಹೋಟೆಲ್ ಮಾಲೀಕರು ಹಾಗೂ ನೌಕರು ಪಾಲ್ಗೊಳ್ಳಲು ನಿರ್ಧಾರ ತೆಗೆದುಕೊಳ್ಳಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು–ಕುಶಾಲನಗರ, ಚಾ.ನಗರ–ಹೆಜ್ಜಾಲ ರೈಲ್ವೆ ಯೋಜನೆ ತ್ವರಿತ

●ಅಶೋಕಪುರಂನ ಉನ್ನತೀಕರಣಗೊಂಡ ರೈಲ್ವೆ ನಿಲ್ದಾಣ ಪರಿಶೀಲನೆ ನಂತರ ರೈಲ್ವೆ ಖಾತೆ ರಾಜ್ಯ ಸಚಿವ ಸೋಮಣ್ಣ ಮಾಹಿತಿ ●ಮೈಸೂರಿನಲ್ಲಿ ಉದ್ದೇಶಿತ ಎಲ್ಲಾ ಅಂಡರ್‌ಪಾಸ್ ಕಾಮಗಾರಿ ಶೀಘ್ರ ಆರಂಭ



ಮೈಸೂರಿನ ಡಿಆರ್‌ಎಂ ಕಚೇರಿ ಸಭಾಂಗಣದಲ್ಲಿ ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಸಂಸದ ಯದುವೀರ್, ಶಾಸಕರಾದ ಜಿ.ಟಿ.ದೇವೇಗೌಡರು, ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಡಿಆರ್‌ಎಂ ಶಿಲ್ಪಿ ಅಗರ್ವಾಲ್ ಮತ್ತಿತರರ ಅಧಿಕಾರಿಗಳು ಭಾಗವಹಿಸಿದ್ದರು.

ಮೈಸೂರು, ಸೆ.13(ಎಸ್‌ಬಿಡಿ)– ಮೈಸೂರು–ಕುಶಾಲನಗರ ಮತ್ತು ಚಾಮರಾಜನಗರ–ಹೆಜ್ಜಾಲ ಹೊಸಮಾರ್ಗಗಳು ಸೇರಿದಂತೆ ಮೈಸೂರು ವಿಭಾಗ ವ್ಯಾಪ್ತಿಯ ಎಲ್ಲಾ ರೈಲ್ವೆ ಯೋಜನೆಗಳನ್ನು ಚುರುಕುಗೊಳಿಸಲಾಗುವುದು ಎಂದು ಕೇಂದ್ರ ರೈಲ್ವೆ ಖಾತೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಮೈಸೂರಿನ ಅಶೋಕಪುರಂ ಹಾಗೂ ಕೇಂದ್ರ ರೈಲ್ವೆ ನಿಲ್ದಾಣಗಳಲ್ಲಿನ ವಿವಿಧ ಕಾಮಗಾರಿಗಳ ಪರಿಶೀಲನೆ ಬಳಿಕ ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ (ಡಿಆರ್‌ಎಂ)ರ ಕಚೇರಿ ಸಭಾಂಗಣದಲ್ಲಿ ಪ್ರಗತಿ ಪರಿಶೀಲನೆ ನಡೆಸಿ, ನಂತರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬೆಂಗಳೂರಿನಂತೆ ಮೈಸೂರು ಭಾಗಕ್ಕೂ ಎಲ್ಲಾ ರೀತಿಯ ರೈಲ್ವೆ ಸೌಲಭ್ಯಗಳು ದೊರೆಯಲಿವೆ. ಈ ನಿಟ್ಟಿನಲ್ಲಿ ಪ್ರಧಾನಿ ಮೋದಿ ಹಾಗೂ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಹೊಸ ಯೋಜನೆಗಳ ಜೊತೆಗೆ ನೆನಗುದಿಗೆ ಬಿದ್ದಿರುವ ಮಹತ್ವದ ಹಳೇ ಯೋಜನೆಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ಮೈಸೂರು – ಕುಶಾಲನಗರದ ನಡುವೆ 89 ಕಿ.ಮೀ. ಹೊಸ ರೈಲು ಮಾರ್ಗದ 3074 ಕೋಟಿ ರೂ. ವೆಚ್ಚದ ಯೋಜನೆಗೆ ಸದ್ಯದಲ್ಲೇ ಸರ್ಕಾರದ ಅನುಮೋದನೆ ದೊರಕಲಿದೆ. ಚಾಮರಾಜನಗರ–ಹೆಜ್ಜಾಲ(ರಾಮನಗರ ಜಿಲ್ಲೆ) ನಡುವಿನ 142 ಕಿ.ಮೀ. ಯೋಜನೆ ಪ್ರಕ್ರಿಯೆಯೂ ಚುರುಕುಗೊಳ್ಳಲಿದೆ ಎಂದು ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರು ರೈಲ್ವೆ ಸಚಿವರು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ವೇಳೆ ಬೆಂಗಳೂರಿನಿಂದ ತಮಿಳುನಾಡಿಗೆ ರೈಲ್ವೆ ಯೋಜನೆ ಪ್ರಸ್ತಾವನೆ ಇತ್ತು. ಆದರೆ ಈ ಮಾರ್ಗದಲ್ಲಿ ಸತ್ಯಮಂಗಲ ಅರಣ್ಯ ಪ್ರದೇಶವಿರುವುದರಿಂದ ಯೋಜನೆ ಸ್ಥಗಿತಗೊಂಡಿತು. ಆದ್ದರಿಂದ ಪರಿಷ್ಕರಣೆ ಮಾಡಿ ಹೆಜ್ಜಾಲದಿಂದ ಚಾಮರಾಜನಗರದವರೆಗೆ ರೈಲು ಮಾರ್ಗಕ್ಕೆ ನಿರ್ಧರಿಸಲಾಗಿದ್ದು, ಈಗಾಗಲೇ ಸರ್ವೆ ಮುಗಿದಿದೆ. ಶೀಘ್ರದಲ್ಲೇ ರೈಲ್ವೆ ಮಂಡಳಿ ಅನುಮೋದನೆಯೂ ಸಿಗಲಿದೆ. ಈ ಯೋಜನೆಯಿಂದ ಹೆಜ್ಜಾಲ, ಕಗ್ಗಲೀಪುರ, ಸೋಮನಹಳ್ಳಿ, ಕಬ್ಬಾಡಿ, ಹಾರೋಹಳ್ಳಿ, ಕನಕಪುರ, ಸಾತನೂರು, ಮಳವಳ್ಳಿ, ಕೊಳ್ಳೇಗಾಲ, ಯಳಂದೂರು, ಸಂತೆಮರಳ್ಳಿ, ಚಾಮರಾಜನಗರ ಭಾಗದ ಜನರಿಗೆ ತುಂಬಾ ಅನುಕೂಲವಾಗಲಿದೆ. ಇದಕ್ಕಾಗಿ ಪ್ರಧಾನಿ ಹಾಗೂ ರೈಲ್ವೆ ಸಚಿವರಿಗೆ ಜನತೆ ಪರವಾಗಿ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ರೈಲ್ವೆ ನಿಲ್ದಾಣಗಳು ಮೇಲ್ದರ್ಜೆಗೆ: ರಾಜ್ಯದಲ್ಲಿ ಪ್ರತಿವರ್ಷ 174 ಕಿ.ಮೀ. ರೈಲ್ವೆ ಮಾರ್ಗ ವಿಸ್ತರಿಸಲಾಗುತ್ತಿದೆ. ಪ್ರಯಾಣಿಕರಿಗೆ ಉತ್ತಮ ದರ್ಜೆಯ ಸೌಲಭ್ಯ ಕಲ್ಪಿಸುವುದರ ಜೊತೆಗೆ ಅಮೃತ್ ಭಾರತ್ ಯೋಜನೆಯಡಿ 1320 ರೈಲು ನಿಲ್ದಾಣಗಳ ಮೇಲ್ದರ್ಜೆಗೇರಿಸುವ ಯೋಜನೆ ಕೈಗೊಳ್ಳಲಾಗಿದ್ದು, ಸದ್ಯ ಮೈಸೂರು ವಿಭಾಗದ 15 ಸೇರಿದಂತೆ ದೇಶದ 61 ನಿಲ್ದಾಣಗಳನ್ನು ಸುಮಾರು 2 ಸಾವಿರ ಕೋಟಿ ರೂ. ವೆಚ್ಚದಲ್ಲಿ ಆಧುನೀಕರಣಗೊಳಿಸಲಾಗುತ್ತಿದ್ದು, 2025ರೊಳಗೆ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.

ವರ್ಕ್‌ಶಾಪ್ ಮೇಲ್ದರ್ಜೆಗೆ: ಮೈಸೂರಿನ ರೈಲ್ವೆ ವರ್ಕ್ ಶಾಪ್ ಮೇಲ್ದರ್ಜೆಗೇರಿಸಲು ಕಳೆದ ಆಗಸ್ಟ್‌ನಲ್ಲೇ 59.40 ಕೋಟಿ ರೂ. ಬಿಡುಗಡೆಯಾಗಿದ್ದು, ಅಧಿಕಾರಿಗಳು ಮೂರು ದಿನಗಳಲ್ಲಿ ಈ ಸಂಬಂಧ ವಿಸ್ತೃತ ಪ್ರಸ್ತಾವನೆ ಸಲ್ಲಿಸಬೇಕು. ಜನಸಾಮಾನ್ಯರ ಅನುಕೂಲಕ್ಕಾಗಿ ಮೈಸೂರು, ತುಮಕೂರು, ಬೆಂಗಳೂರು ಕಡೆಗೆ ಮೂರು ಹೊಸ ಮೆಮು ರೈಲುಗಳ ಸೇವೆ ಆರಂಭಿಸಲಾಗುವುದು. ಸೆ.27 ರಂದು ತುಮಕೂರು–ಬೆಂಗಳೂರು ಮೆಮು ರೈಲು ಸಂಚಾರಕ್ಕೆ ಚಾಲನೆ ನೀಡುತ್ತಿದ್ದೇನೆ. ಮತ್ತೆರಡು ಶೀಘ್ರದಲ್ಲೇ ಸಂಚಾರ ಆರಂಭಿಸಲಿವೆ. ಅಮೃತ್ ಯೋಜನೆ ಹೊರತಾಗಿ ಅಶೋಕಪುರಂ ರೈಲ್ವೆ ನಿಲ್ದಾಣವನ್ನು ನಿರೀಕ್ಷೆಗೂ ಮೀರಿ ಅಭಿವೃದ್ಧಿಪಡಿಸಿರುವುದಕ್ಕೆ ರೈಲ್ವೆ ಅಧಿಕಾರಿಗಳಿಗೆ ಅಭಿನಂದನೆ ತಿಳಿಸುತ್ತೇನೆ. ಅಲ್ಲಿನ ಸಂಪರ್ಕ ರಸ್ತೆ ಅಗಲೀಕರಣಕ್ಕೆ ಅಗತ್ಯ ಭೂಮಿ ನೀಡಿದರೆ ಇಲಾಖೆಯಿಂದಲೇ ರಸ್ತೆ ಅಭಿವೃದ್ಧಿಪಡಿಸಲಾಗುವುದು ಎಂದರು.

ಅಂಡರ್‌ಪಾಸ್ ನಿರ್ಮಾಣಕ್ಕೆ ಕ್ರಮ: ಮೈಸೂರು ವಿಭಾಗದಲ್ಲಿ 2004ರಿಂದ 2014ರವರೆಗೆ ಕೇವಲ 28 ರೈಲ್ವೆ ಓವರ್ ಬ್ರಿಡ್ಜ್(ಆರ್‌ಓಬಿ) ಹಾಗೂ ರೈಲ್ವೆ ಅಂಡರ್ ಬ್ರಿಡ್ಜ್(ಆರ್‌ಯುಬಿ) ಯೋಜನೆಗಳಾಗಿದ್ದವು. ನಂತರ ಈವರೆಗೆ 247 ಯೋಜನೆಗಳಾಗಿವೆ. 227 ಕಿ.ಮೀ. ಡಬ್ಲಿಂಗ್ ಯೋಜನೆ ನಡೆಯುತ್ತಿದೆ. ರಿಂಗ್ ರಸ್ತೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ನಡೆಸುತ್ತಿರುವ ಯೋಜನೆಗಳನ್ನು ಹೊರತುಪಡಿಸಿ, ಬೋಗಾದಿ ರಸ್ತೆ ಕುಕ್ಕರಹಳ್ಳಿ ಕೆರೆ ಬಳಿ ಸೇರಿದಂತೆ ಉಳಿದ ಎಲ್ಲಾ ಉದ್ದೇಶಿತ ಯೋಜನೆಗಳನ್ನು ಶೀಘ್ರ ಕೈಗೆತ್ತಿಕೊಳ್ಳಬೇಕು. ಬೆಂಗಳೂರು ಹೊರತುಪಡಿಸಿ ಉಳಿದೆಲ್ಲ ಕಡೆ ಕೇಂದ್ರ ಸರ್ಕಾರವೇ ಈ ಯೋಜನೆಗಳನ್ನು ನಿಭಾಯಿಸಲಿದೆ. ತುಮಕೂರು ಕ್ಷೇತ್ರದಲ್ಲಿ 699 ಕೋಟಿ ರೂ.ನಲ್ಲಿ ಕೈಗೊಂಡಿರುವ 8 ಯೋಜನೆಗಳಿಗೆ ಕಾರ್ಯಾದೇಶವಾಗಿದೆ ಎಂದು ತಿಳಿಸಿದರು.

ನ.15ಕ್ಕೆ ರೈಲ್ವೆ ಸಚಿವರ ಆಹ್ವಾನ: ಮಹಿಳಾ ಬೋಗಿಗಳ ಹೆಚ್ಚಳ, ಸಿಸಿ ಟಿವಿ ಕ್ಯಾಮರಾ ಅಳವಡಿಕೆ, ರೈಲ್ವೆ ಮ್ಯೂಸಿಯಂ ಅನ್ನು ಮೈಸೂರು ಪ್ರವಾಸಿ ತಾಣಗಳ ಪಟ್ಟಿಗೆ ಸೇರಿಸಲು ಕ್ರಮ, ಪ್ರಯಾಣಿಕರ ವಾಹನಗಳ ಪಾರ್ಕಿಂಗ್‌ಗೆ ದುಬಾರಿ ಶುಲ್ಕದ ಬಗ್ಗೆ ಪರಿಶೀಲನೆ, ಮೈಸೂರು–ತಿರುಪತಿ ನಡುವೆ ವಂದೇ ಭಾರತ್ ರೈಲು ಸಂಚಾರ ಹೆಚ್ಚಳ, ದೆಹಲಿಯಿಂದ ಮೈಸೂರು, ಬೆಂಗಳೂರು, ಮಂಗಳೂರು, ಮುಂಬೈ, ಚೆನ್ನೈನಂತಹ ನಗರಗಳನ್ನು ಸಂಪರ್ಕಿಸುವಂತೆ ಹೊಸ ರೈಲು ಸಂಚಾರಗಳಿಗೆ ಗಮನಹರಿಸಲಾಗಿದೆ. ನ.15ರಂದು ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ಅವರನ್ನು ಆಹ್ವಾನಿಸುತ್ತೇನೆ. ಅಂದು ಸಂವಾದ ಏರ್ಪಡಿಸಿ, ಅಮೂಲ್ಯವಾದ ಸಲಹೆಗಳು, ದೂರದೃಷ್ಟಿಯ ಚಿಂತನೆಗಳನ್ನು ಹಂಚಿಕೊಳ್ಳಬಹುದು ಎಂದು ಹೇಳಿದರು.

13 ವಂದೇ ಭಾರತ್ ರೈಲುಗಳಿಗೆ ಚಾಲನೆ

ದೇಶದಾದ್ಯಂತ ಹೊಸದಾಗಿ 13 ವಂದೇ ಭಾರತ್ ರೈಲು ಸಂಚಾರಕ್ಕೆ ಪ್ರಧಾನಿ ಮೋದಿ ಚಾಲನೆ ನೀಡಲಿದ್ದಾರೆ. ಸೆ.15ರಂದು 6 ಹಾಗೂ ಸೆ.16ರಂದು 7 ರೈಲುಗಳು ಸಂಚಾರ ಆರಂಭಿಸಲಿವೆ. ಜಾರ್ಖಂಡ್‌ನ ದೇವ್‌ಘರ್ ಹಾಗೂ ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಹಸಿರು ನಿಶಾನೆ ತೋರಲು ನನಗೆ ಅವಕಾಶ ಸಿಕ್ಕಿದೆ. ಅತ್ಯಾಧುನಿಕ ಸೌಕರ್ಯವುಳ್ಳ ವಂದೇ ಭಾರತ್ ರೈಲುಗಳು ಇನ್ನು ಮೂರು ತಿಂಗಳಲ್ಲಿ ಬರಲಿವೆ. ಕರ್ನಾಟಕಕ್ಕೂ ಒಂದು ರೈಲು ಸಿಗಲಿದೆ. ಸದ್ಯ ಸಂಚರಿಸುತ್ತಿರುವ 9 ವಂದೇ ಭಾರತ್ ರೈಲುಗಳ ಪಟ್ಟಿಗೆ ಮತ್ತೊಂದು ಸೇರ್ಪಡೆಯಾಗಲಿದೆ. ಮಹತ್ವದ ಸರ್ಕ್ಯುಲರ್ ರೈಲ್ವೆ ಸಂಪರ್ಕ ಯೋಜನೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರ ಕನಸು. ಸಂಚಾರ ದಟ್ಟಣೆ ಹಾಗೂ ಮಾಲಿನ್ಯ ನಿಯಂತ್ರಣದ ದೃಷ್ಟಿಯಲ್ಲಿ ಈ ಯೋಜನೆ ಪೂರಕವಾಗಿದೆ. 2026ರ ವೇಳೆಗೆ 72 ಕಿ.ಮೀ. ಸಬರ್ಬನ್ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಅಗತ್ಯ ಭೂಸ್ವಾಧೀನಕ್ಕೆ ಸುಮಾರು 80 ಸಾವಿರ ಕೋಟಿ ರೂ. ಬೇಕಾಗಬಹುದು ಎಂದು ಸಚಿವ ವಿ.ಸೋಮಣ್ಣ ತಿಳಿಸಿದರು.

ಮಹಾರಾಜರ ಹೆಸರು ಅಜರಾಮರ

ಮೈಸೂರು ರೈಲು ನಿಲ್ದಾಣಕ್ಕೆ ಮಹಾರಾಜರ ಹೆಸರನ್ನು ನಾಮಕರಣ ಮಾಡಬೇಕೆಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ವಿ.ಸೋಮಣ್ಣ, ಸೂರ್ಯ–ಚಂದ್ರ ಇರುವವರೆಗೂ ಮೈಸೂರು ಮಹಾರಾಜರ ಹೆಸರು ಅಜರಾಮರವಾಗಿರುತ್ತದೆ. ಇವರ ಹೆಸರನ್ನು ಮೈಸೂರು ರೈಲು ನಿಲ್ದಾಣಕ್ಕೆ ನಾಮಕರಣ ಮಾಡುವುದಾದರೆ ಯಾರು ಬೇಡ ಎನ್ನುತ್ತಾರೆ, ತುಂಬಾ ಸಂತೋಷದ ಸಂಗತಿ ಎಂದರು.

ಮಾಜಿ ಸಂಸದ ಪ್ರತಾಪ್ ಸಿಂಹ ಕಾರ್ಯ ವೈಖರಿ ಹಾಡಿ-ಹೊಗಳಿದ ಸೋಮಣ್ಣ



ಮೈಸೂರು, ಸೆ.13– ಕೇಂದ್ರ ಸಚಿವ ವಿ.ಸೋಮಣ್ಣ ಅವರು ರೈಲ್ವೆ ಅಭಿವೃದ್ಧಿ ವಿಷಯವಾಗಿ ಮಾಜಿ ಸಂಸದ ಪ್ರತಾಪ ಸಿಂಹ ಅವರನ್ನು ಹಾಲಿ ಸಂಸದರೆದುರೇ ಹಾಡಿ–ಹೊಗಳಿದರು.

ಮೈಸೂರಿನ ಡಿಆರ್‌ಎಂ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ, ಅಶೋಕಪುರಂ ರೈಲು ನಿಲ್ದಾಣದ ಅಭಿವೃದ್ಧಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ವೇಳೆ ಪ್ರತಾಪ್ ಸಿಂಹ ಅವರ ಕಾರ್ಯವೈಖರಿಯನ್ನು ಕೊಂಡಾಡಿದರು. ಪಕ್ಕದಲ್ಲೇ ಕುಳಿತಿದ್ದ ಹಾಲಿ ಸಂಸದ ಯದುವೀರ್ ಅವರು ತದೇಕಚಿತ್ತದಿಂದ ಸಚಿವರನ್ನೇ ನೋಡುತ್ತಿದ್ದರು.

ಅಶೋಕಪುರಂ ರೈಲು ನಿಲ್ದಾಣ ಬಹಳ ಹಳೆಯದಾಗಿತ್ತು, ತುಂಬಾ ಚಿಕ್ಕದಿತ್ತು. ಆದರೆ ಈಗ 6 ಪ್ಲಾಟ್‌ಫಾರ್ಮ್‌ಗಳೊಂದಿಗೆ ಅಭಿವೃದ್ಧಿಪಡಿಸಲಾಗಿದೆ. ಪ್ರವೇಶ ದ್ವಾರದಿಂದ ಹಿಡಿದು ಎಲ್ಲಾ ನಿರ್ಮಾಣಗಳೂ ಚೆನ್ನಾಗಿವೆ. ಮೈಸೂರಿನ ಚಿತ್ರಣ ಬದಲಾಗುವುದರಲ್ಲಿ ಹಿಂದಿನ ಸಂಸದ ಪ್ರತಾಪ್ ಸಿಂಹ ಅವರ ಕೊಡುಗೆ ಅಪಾರವಾದುದು. ರೈಲ್ವೆ ಅಭಿವೃದ್ಧಿಯಲ್ಲಿ ಅವರು ಉತ್ತಮ ಕೆಲಸಗಳನ್ನು ಮಾಡಿದ್ದಾರೆ ಎಂದು ಬಣ್ಣಿಸಿದರು.

ದಯಮಾಡಿ ಯಾರೂ ಅನ್ಯಥಾ ಭಾವಿಸಬಾರದು. ರಾಜಕಾರಣ ಹಾಗೂ ಅಧಿಕಾರ ಯಾರಿಗೂ ಶಾಶ್ವತವಲ್ಲ. ಆದರೆ ದೂರದೃಷ್ಟಿಯೊಂದಿಗೆ ಜನೋಪಯೋಗಿ ಸೇವೆ ಮಾಡುವುದು ಮುಖ್ಯ. 10 ವರ್ಷಗಳ ಹಿಂದೆ ಮೈಸೂರಿಗೆ 20 ರೈಲುಗಳು ಬರುತ್ತಿದ್ದವು. ಕಳೆದ 10 ವರ್ಷದಲ್ಲಿ 80 ರೈಲುಗಳು ನಿಲ್ಲುವಂತೆ ಆಗಿದೆ. ಇದಕ್ಕೆ ಪ್ರತಾಪ್ ಸಿಂಹ ಪರಿಶ್ರಮ ಕಾರಣ ಎಂದರು.

ಮುಂದುವರೆದು ಸ್ವಲ್ಪ ದೂರದಲ್ಲಿ ಕುಳಿತಿದ್ದ ರೈಲ್ವೆ ಅಧಿಕಾರಿಯನ್ನು ಹತ್ತಿರಕ್ಕೆ ಕರೆದ ಸೋಮಣ್ಣ, ಹತ್ತು ವರ್ಷದ ಹಿಂದೆ ಎಷ್ಟು ರೈಲುಗಳು ಮೈಸೂರು ಭಾಗದಲ್ಲಿ ಸಂಚಾರ ಮಾಡುತ್ತಿದ್ದವು, ಈಗ ಎಷ್ಟಿವೆ ಎಂದು ಪ್ರಶ್ನಿಸಿದರು. ಆ ಅಧಿಕಾರಿಯೂ ಈಗ 80 ರೈಲುಗಳು ಸಂಚರಿಸುತ್ತಿವೆ ಎಂದರು. ಇದಕ್ಕೆ ಯಾರು ಕಾರಣ ಎಂದು ಸೋಮಣ್ಣ ಮರುಪ್ರಶ್ನೆ ಹಾಕಿದರು. ಆಗ ಅಧಿಕಾರಿ, ಮೆಲು ಧ್ವನಿಯಲ್ಲಿ ನೀವು ಸಾರ್ ಎಂದರು. ತಕ್ಷಣವೇ ಪ್ರತಿಕ್ರಿಯಿಸಿದ ಸೋಮಣ್ಣ, ನಾನಲ್ಲ ಕಾರಣ. ಇಲ್ಲಿ ಸಂಸದರಾಗಿದ್ದವರು, ಸ್ಥಳೀಯ ಜನಪ್ರತಿನಿಧಿಗಳು ಎಂದು ಹೇಳಿದರು.

ಪಕ್ಕದಲ್ಲೇ ಕುಳಿತು ಸಚಿವರನ್ನೇ ನೋಡುತ್ತಾ, ಅವರ ಮಾತುಗಳನ್ನು ತದೇಕಚಿತ್ತದಿಂದ ಆಲಿಸುತ್ತಿದ್ದ ಹಾಲಿ ಸಂಸದ ಯದುವೀರ್, ಕಡೆಯಲ್ಲಿ ಸಚಿವರಿಗೆ ಕಿರುನಗೆ ಬೀರಿದರು. ಮಾತಿನ ಮಧ್ಯೆ ಸಚಿವರು, ಯದುವೀರ್ ಅವರನ್ನೂ ಮಹಾರಾಜರು, ಯುವರಾಜರು ಎಂದು ಸಂಬೋಧಿಸುತ್ತಿದ್ದರು.

ನ.15ರಂದು ಉನ್ನತೀಕರಿಸಿದ ಅಶೋಕಪುರಂ ರೈಲ್ವೆ ನಿಲ್ದಾಣ ಉದ್ಘಾಟನೆ

ಶೀಘ್ರ ಕಾಮಗಾರಿ ಪೂರ್ಣಗೊಳಿಸುವಂತೆ ಸೋಮಣ್ಣ ತಾಕೀತು



ಮೈಸೂರಿನ ಅಶೋಕಪುರಂ ರೈಲ್ವೆ ನಿಲ್ದಾಣಕ್ಕೆ ಶುಕ್ರವಾರ ಭೇಟಿ ನೀಡಿದ್ದ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಕಾಮಗಾರಿ ಕುರಿತಂತೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಮೈಸೂರು, ಸೆ.13(ಬಿಎಲ್‌ಯು)– ಮೈಸೂರಿನ ಅಶೋಕಪುರಂ ರೈಲ್ವೆ ನಿಲ್ದಾಣವನ್ನು ನವೆಂಬರ್ 15ರಂದು ಉದ್ಘಾಟಿಸಲು ದಿನಾಂಕ ನಿಗದಿ ಮಾಡಿದ್ದು, ಅಷ್ಟರಲ್ಲಿ ಎಲ್ಲಾ ಕಾಮಗಾರಿ ಪೂರ್ಣಗೊಳಿಸಿ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ನಗರದ ಅಶೋಕಪುರಂ ರೈಲ್ವೆ ನಿಲ್ದಾಣದ ಕಾಮಗಾರಿಗಳನ್ನು ಅವರು ಖುದ್ದು ಪರಿಶೀಲನೆ ನಡೆಸಿದರು.

ಅಶೋಕಪುರಂ ರೈಲ್ವೆ ನಿಲ್ದಾಣದ ಉದ್ಘಾಟನೆ ಸಂಬಂಧ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಜೊತೆ ಮಾತುಕತೆ ನಡೆಸುತ್ತೇನೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಂದ ಉದ್ಘಾಟಿಸಲಾಗುವುದು. ಅಷ್ಟರಲ್ಲಿ ಪ್ಲಾಟ್‌ಫಾರಂ ಸೇರಿದಂತೆ ಎಲ್ಲಾ ರೀತಿಯ ಕಾಮಗಾರಿಯನ್ನು ಪೂರ್ಣಗೊಳಿಸಿ ಎಂದು ಸೂಚನೆ ನೀಡಿದರು.

ಈ ವೇಳೆ ಮಾತನಾಡಿದ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್, ಅಶೋಕಪುರಂ ರೈಲ್ವೆ ನಿಲ್ದಾಣದಲ್ಲಿ ಒಟ್ಟು ಆರು ಪ್ಲಾಟ್ ಫಾರಂಗಳಿದ್ದು, 15 ರೈಲುಗಳ ಸಂಚಾರಕ್ಕೆ ಅವಕಾಶವಿದೆ ಎಂದು ತಿಳಿಸಿದರು.

ಈ ವೇಳೆ ಮಾತನಾಡಿದ ಸೋಮಣ್ಣ, ಮೈಸೂರಿನ ಕೇಂದ್ರ ರೈಲ್ವೆ ನಿಲ್ದಾಣದಲ್ಲಿ ರೈಲುಗಳು ನಿಲ್ಲಬಾರದು. ಅಶೋಕಪುರಂ ರೈಲ್ವೆ ನಿಲ್ದಾಣದ ತನಕ ಬಂದು ಹೋಗಬೇಕು ಎಂದು ಮತ್ತೊಮ್ಮೆ ತಾಕೀತು ಮಾಡಿದರು.

ಈ ವೇಳೆ ರೈಲ್ವೆ ನಿಲ್ದಾಣದ ನಕ್ಷೆ ಹಾಗೂ ವಿನ್ಯಾಸವನ್ನು ವೀಕ್ಷಣೆ ಮಾಡಿದ ಸೋಮಣ್ಣ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಇದೇ ವೇಳೆ ಮಾತನಾಡಿದ ಸಂಸದ ಯದುವೀರ್, ರೈಲ್ವೆ ಸಚಿವ ಸೋಮಣ್ಣ ಈ ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೈಸೂರಿನ ಎಲ್ಲಾ ರೈಲ್ವೆ ಕಾಮಗಾರಿಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ ನಾನು ಕೂಡ ಮನವಿ ಮಾಡಿದ್ದೇನೆ ಎಂದು ಹೇಳಿದರು.

ನಾಗಮಂಗಲದ ಗಲಾಟೆ ಬಗ್ಗೆ ಪ್ರತಿಕ್ರಿಯೆ ನೀಡಿದ ಯದುವೀರ್, ಈ ಘಟನೆ ಖಂಡನೀಯ. ಗಣೇಶ ಮೆರವಣಿಗೆ ಮಾಡುವ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ಇದೆ ಎಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಸೇರಿದಂತೆ ರೈಲ್ವೆ ಅಧಿಕಾರಿಗಳು ಹಾಜರಿದ್ದರು.

ಕನ್ನಡದಲ್ಲಿ ಮಾತನಾಡದ ರೈಲ್ವೆ ಅಧಿಕಾರಿಗಳಿಗೆ ಬೆವರಿಳಿಸಿದ ಸೋಮಣ್ಣ

ದೆಹಲಿಗೆ ಹೋಗಿ ನಾನು ಹಿಂದಿ ಕಲಿಯುತ್ತಿದ್ದೇನೆ. ಎರಡು ವರ್ಷದಿಂದ ಕರ್ನಾಟಕದಲ್ಲಿದ್ದೀರಾ ಕನ್ನಡ ಕಲಿತ್ತಿಲ್ಲವೇಕೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ಸೋಮಣ್ಣ ರೈಲ್ವೆ ಇಲಾಖೆಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಅಶೋಕಪುರಂ ರೈಲ್ವೆ ನಿಲ್ದಾಣದ ಪರಿಶೀಲನೆ ವೇಳೆ ಸೋಮಣ್ಣ ಅವರಿಗೆ ನಿಲ್ದಾಣದ ನಕ್ಷೆ ಹಾಗೂ ವಿನ್ಯಾಸದನ್ವಯ ಕಾಮಗಾರಿ ಬಗ್ಗೆ ಹಿಂದಿಯಲ್ಲಿ ವಿವರಿಸಲು ರೈಲ್ವೆ ಅಧಿಕಾರಿಗಳು ಮುಂದಾದರು. ಈ ವೇಳೆ ಆಕ್ರೋಶಗೊಂಡ ಸೋಮಣ್ಣ, ನಾನು ದೆಹಲಿಗೆ ಹೋಗಿ ಹಿಂದಿ ಕಲಿಯುತ್ತಿದ್ದೇನೆ. ನೀವು ಇಲ್ಲೇ ಎರಡು ವರ್ಷದಿಂದ ಇದ್ದೀರಾ, ಇನ್ನು ಕನ್ನಡ ಕಲಿತ್ತಿಲ್ಲವೇ ಎಂದು ಪ್ರಶ್ನಿಸಿದರು.

ಕನ್ನಡ ಭಾಷೆ ಕಲಿಯುವುದು ಬಹಳ ಸುಲಭ. ನಿಮಗೆ ಕಷ್ಟವಾದರೆ ಮೂರು ರೂಪಾಯಿ ಕೊಟ್ಟರೆ ಕನ್ನಡ ಕಲಿಕೆ ಪುಸ್ತಕ ತೆಗೆದುಕೊಳ್ಳಿ. ಅದನ್ನು ಕೊಂಡು ಓದಿಯಾದರೂ ಕನ್ನಡ ಕಲಿಯಿರಿ ಎಂದು ಸಲಹೆ ನೀಡಿದರು. ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ತಾವು ಹೇಳುತ್ತಿರುವುದು ಅರ್ಥವಾಗುತ್ತಿಲ್ಲ ಎಂಬುದು ಖಾತ್ರಿಯಾದ ನಂತರ ಸೋಮಣ್ಣ ಅವರೆ ಹಿಂದಿಯಲ್ಲಿ ಮಾತನಾಡಲು ಆರಂಭಿಸಿದರು. ರೈಲ್ವೆ ನಿಲ್ದಾಣದ ಬಗ್ಗೆ ಹಿಂದಿಯಲ್ಲೇ ಮಾತನಾಡುತ್ತಾ, ಕೊನೆಗೆ ಹಿಂದಿ ಭಾಷೆಯಲ್ಲೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಮೈಸೂರು ಪರಂಪರೆ ಪ್ರಚಾರಕ್ಕೆ ಸಹಕರಿಸಲು ಬ್ಲಾಗರ್‌ಗಳಿಗೆ ಸಂಸದ ಯದುವೀರ್ ಸಲಹೆ



ಅರಮನೆ ಮಂಡಳಿ ಸಭಾಂಗಣದಲ್ಲಿ ದೇಶದ ಬೇರೆ ಬೇರೆ ರಾಜ್ಯಗಳ ಬ್ಲಾಗರ್‌ಗಳೊಂದಿಗೆ ಸಂಸದ ಯದುವೀರ್ ಸಭೆ ನಡೆಸಿದರು.

ಮೈಸೂರು, ಸೆ.13(ಎಂಕೆ)– ಮೈಸೂರಿನ ಸಾಂಸ್ಕೃತಿಕ ಪರಂಪರೆ, ದಸರಾ ಮಹೋತ್ಸವ ಕುರಿತು ವ್ಯಾಪಕ ಪ್ರಚಾರಕ್ಕೆ ಬ್ಲಾಗರ್‌ಗಳು ಸಹಕಾರ ನೀಡುವಂತೆ ಸಂಸದರೂ ಆದ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಅರಮನೆ ಮಂಡಳಿ ಸಭಾಂಗಣದಲ್ಲಿ ಪ್ರವಾಸೋದ್ಯಮ ಇಲಾಖೆ ಸಹಯೋಗದೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಅತೀ ಹೆಚ್ಚು ಫಾಲೋವರ್ಸ್ ಹೊಂದಿರುವ ದೇಶದ ಬೇರೆ ಬೇರೆ ರಾಜ್ಯಗಳ ಬ್ಲಾಗರ್‌ಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರಿಗೆ ತನ್ನದೇ ಪಾರಂಪರಿಕ ಇತಿಹಾಸವಿದೆ. ಹಲವು ಪ್ರವಾಸಿತಾಣಗಳಿದ್ದು, ದಸರಾ ಸಮೀಪದ ಹಿನ್ನಲೆಯಲ್ಲಿ ವ್ಯಾಪಕ ಪ್ರಚಾರವಾಗಬೇಕಿದೆ ಎಂದರು.

ದಕ್ಷಿಣ ಭಾರತದಲ್ಲಿಯೇ ಮೈಸೂರು ಸಾಂಸ್ಕೃತಿಕ ನಗರವಾಗಿದೆ. ಇದರ ಸದುಪಯೋಗವನ್ನು ಪಡೆದುಕೊಂಡು ತಮ್ಮ ತಮ್ಮ ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚಾರ ನೀಡಿ ಪ್ರವಾಸೋದ್ಯಮ ಅಭಿವೃದ್ಧಿಗೂ ಸಹಕರಿಸ ಬೇಕು. ಆಧುನಿಕತೆಯ ಅಭಿರುಚಿಗೆ ತಕ್ಕಂತೆ ಪ್ರಚಾರ ಮಾಡಿ ಎಂದು ತಿಳಿಸಿದರು.

ಇದೇ ವೇಳೆ ಮೈಸೂರು ಇತಿಹಾಸ, ಅರಮನೆ, ಮೈಸೂರು ವಿಶ್ವವಿದ್ಯಾಲಯ, ರಾಜ ಮನೆತನದ ದಿನಚರಿ ಕುರಿತು ಮಾಹಿತಿ ಪಡೆದ ಬ್ಲಾಗರ್‌ಗಳು ರಾಜವಂಶಸ್ಥರು, ಜನಪ್ರತಿನಿಧಿಯಾಗಿ ಜನಸೇವೆ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಂಸದರು, ರಾಜರ ಆಳ್ವಿಕೆ ಇದ್ದಾಗಲೂ ರಾಜರು ಪ್ರಜೆಗಳ ಕೆಲಸ ಮಾಡುತ್ತಿದ್ದರು. ಹಾಗೆಯೇ ಜನಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದೇನೆ. ಜನರೊಂದಿಗೆ ಬೇರೆಯುತ್ತಿದ್ದೇನೆ. ಎಲ್ಲರ ಮನೆಯಲ್ಲಿ ನಡೆಯುವ ದಿನಚರಿಯೇ ನಮ್ಮ ಮನೆಯಲ್ಲೂ ನಡೆಯಲಿದೆ ಎಂದರು.

ನಟರಾಜ ಕಾಲೇಜಿನಲ್ಲಿ ಸಾಂಸ್ಕೃತಿಕ, ಕ್ರೀಡಾ ವೇದಿಕೆ ಉದ್ಘಾಟನೆ

ವಿದ್ಯಾರ್ಥಿಗಳು ದೇಶದ ಆಧಾರ ಸ್ತಂಭ: ಸಚಿವ ಸೋಮಣ್ಣ



ಮೈಸೂರಿನ ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ಮತ್ತು ಶ್ರೀ ನಟರಾಜ ಮಹಿಳಾ ಪದವಿ ಪೂರ್ವ ಕಾಲೇಜಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಯನ್ನು ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವ ವಿ.ಸೋಮಣ್ಣ ಉದ್ಘಾಟಿಸಿದರು.

ಮೈಸೂರು, ಸೆ.13(ಜಿಎ)–ಮೈಸೂರಿನ ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ಮತ್ತು ಶ್ರೀ ನಟರಾಜ ಮಹಿಳಾ ಪದವಿ ಪೂರ್ವ ಕಾಲೇಜಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಯನ್ನು ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವ ವಿ.ಸೋಮಣ್ಣ ಶುಕ್ರವಾರ ಉದ್ಘಾಟಿಸಿದರು.


ನಂತರ ಮಾತನಾಡಿದ ಅವರು, ವಿದ್ಯಾರ್ಥಿಗಳು ದೇಶದ ಆಧಾರ ಸ್ತಂಭವಾಗಿದ್ದಾರೆ. ಪೂಜ್ಯ ಶ್ರೀಗಳು ನೇರ ನಡೆ ನುಡಿಗೆ ಹೆಸರಾದವರು. ಸಮಾಜ ಸೇವೆಯಲ್ಲಿ ಸದಾ ತಮ್ಮನ್ನು ತೊಡಗಿಸಿಕೊಂಡು ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಒತ್ತು ಕೊಡುತ್ತಾ ಬಂದಿದ್ದಾರೆ. ಶ್ರೀಗಳ ಕಾರ್ಯ ಅತ್ಯಂತ ಶ್ಲಾಘನೀಯವಾಗಿದ್ದು, ಈ ಸಂಸ್ಥೆಯಲ್ಲಿ ಶಿಕ್ಷಣ ಪಡೆದಂತಹ ಎಷ್ಟೋ ವಿದ್ಯಾರ್ಥಿಗಳು ಹಲವಾರು ಉನ್ನತ ಸ್ಥಾನಗಳನ್ನು ಪಡೆದಿದ್ದಾರೆ. ಈ ವಿದ್ಯಾ ಸಂಸ್ಥೆಯಲ್ಲಿ ದೊರಕುತ್ತಿರುವ ಸೌಲಭ್ಯಗಳನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಂಡು ದೇಶದ ಸತ್ಪ್ರಜೆಗಳಾಗಿ ಬೆಳೆಯ ಬೇಕೆಂದು ಕರೆ ನೀಡಿದರು.

ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ. ದೇವೇಗೌಡ ವಾತ್ಸಲ್ಯ ತ್ರೈಮಾಸಿಕ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಶ್ರೀ ಚಿದಾನಂದ ಸ್ವಾಮೀಜಿ, ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಸಂಸದ ಪ್ರತಾಪ ಸಿಂಹ, ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಪ್ರಾಂಶುಪಾಲೆ ಡಾ.ಎಂ.ಶಾರದ, ಸುನೀತಾರಾಣಿ ಹಾಗೂ ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಿ, ಓಟ್ ಬ್ಯಾಂಕ್ ರಾಜಕಾರಣ ಬಿಡಲಿ

ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಕೇಂದ್ರ ಸಚಿವ ಸೋಮಣ್ಣ ಸಲಹೆ



ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಪತ್ರಕರ್ತರ ಜೊತೆ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮಾತನಾಡುತ್ತಿರುವುದು

ಮೈಸೂರು, ಸೆ.13(ಬಿಎಲ್‌ಯು)– ನಾಗಮಂಗಲದಲ್ಲಿ ನಡೆದ ಗಲಾಟೆ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಸರ್ಕಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು, ಓಟ್ ಬ್ಯಾಂಕ್ ರಾಜಕಾರಣ ಕೈ ಬಿಡಬೇಕು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ನಗರದ ಸರ್ಕಾರಿ ಅತಿಥಿ ಗೃಹದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಗೃಹ ಸಚಿವ ಡಾ.ಪರಮೇಶ್ವರ್ ಅನುಭವಿಗಳಾಗಿದ್ದಾರೆ, ಸಾಕಷ್ಟು ಬಾರಿ ಮಂತ್ರಿಗಳಾಗಿದ್ದಾರೆ. ಆದರೆ ನಾಗಮಂಗಲಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡದೆ ಅದೊಂದು ಸಣ್ಣ ಪ್ರಕರಣವೆಂದು ಹೇಳುತ್ತಿರುವುದು ಸರಿಯಲ್ಲ ಎಂದರು.

ಯಾರು ಎಷ್ಟೆ ಪ್ರಭಾವಿಗಳಾಗಿದ್ದರೂ ಸರ್ಕಾರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಮುಂದೆ ಇಂತಹ ಘಟನೆಗಳು ನಡೆಯದಂತೆ ಎಚ್ಚರ ವಹಿಸಬೇಕು. ಗಣೇಶ ನಮ್ಮ ಭಾವನೆಗಳ ಸಂಕೇತ. ಇದರಿಂದ ಮುಂದೆ ಗಣೇಶನ ಮೆರವಣಿಗೆಗೆ ಅಡ್ಡಿಯಾಗದಂತೆ ಸರ್ಕಾರ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು.

ದೇಶ ಮುಖ್ಯ ಎಂಬ ಭಾವನೆ ತಳೆಯಬೇಕು. ಓಟ್ ಬ್ಯಾಂಕ್ ರಾಜಕಾರಣ ಬಿಡಬೇಕು ಎಂದು ಮತ್ತೊಮ್ಮೆ ಆಗ್ರಹಿಸಿದರು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಡಾ.ಮನಮೋಹನ ಸಿಂಗ್ ಯಾವ ರೀತಿ ನಡೆದುಕೊಂಡರು ಎಂಬುದು ಎಲ್ಲರಿಗೂ ಗೊತ್ತಿದೆ ಎಂದು ಕೈ ನಾಯಕರಿಗೆ ತಿರುಗೇಟು ನೀಡಿದ ಸೋಮಣ್ಣ, ಮುಖ್ಯ ನ್ಯಾಯಾಧೀಶರ ಆಹ್ವಾನದ ಮೇರೆಗೆ ನರೇಂದ್ರ ಮೋದಿ ಅಲ್ಲಿಗೆ ಹೋಗಿದ್ದಾರೆಯೇ ಹೊರತು, ಇದರಲ್ಲಿ ಬೇರೆ ಯಾವುದೇ ಉದ್ದೇಶವಿಲ್ಲ ಎಂದು ಸ್ಪಷ್ಟಪಡಿಸಿದರು.

ಇದಕ್ಕೂ ಮುನ್ನ ಸೋಮಣ್ಣ ಚಾಮುಂಡಿ ಬೆಟ್ಟದಲ್ಲಿ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ಪತ್ನಿ ಸಮೇತ ವಿಶೇಷ ಪೂಜೆ ಸಲ್ಲಿಸಿದರು. ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಸೇರಿದಂತೆ ಇತರರು ಈ ವೇಳೆ ಹಾಜರಿದ್ದರು.

ನಾಗಮಂಗಲ ಗಲಭೆ ಕಾಂಗ್ರೆಸ್ ಪ್ರಾಯೋಜಿತ

● ಚನ್ನಪಟ್ಟಣದ ಉಪ ಚುನಾವಣೆಯಲ್ಲಿ ಒಂದು ಸಮುದಾಯದ ಓಲೈಕೆಗಾಗಿಯೇ ಈ ಸಂಚು ● ನಾಗಮಂಗಲದ ಸಂತ್ರಸ್ತ ಪ್ರದೇಶಕ್ಕೆ ಭೇಟಿ ನಂತರ ಕೇಂದ್ರ ಸಚಿವ ಕುಮಾರಸ್ವಾಮಿ ಗಂಭೀರ ಆರೋಪ ● 90ರ ದಶಕದಲ್ಲಿ ರಾಮನಗರ, ಚನ್ನಪಟ್ಟಣದಲ್ಲಿ ಕೋಮು ಗಲಭೆ ಮೂಲಕ ವೀರೇಂದ್ರ ಪಾಟೀಲ್ ಅಧಿಕಾರದಿಂದ ಇಳಿಸಿದವರಲ್ಲವೇ?

ನಾಗಮಂಗಲ, ಸೆ.13(ಮೋಹನ್‌ರಾಜ್/ಮಹೇಶ್)– ನಾಗಮಂಗಲದಲ್ಲಿ ಗಣೇಶೋತ್ಸವ ಮೆರವಣಿಗೆ ವೇಳೆ ನಡೆದ ಗಲಭೆ ಕಾಂಗ್ರೆಸ್ ಪ್ರಾಯೋಜಿತ ಎಂದು ಕೇಂದ್ರದ ಉಕ್ಕು ಹಾಗೂ ಭಾರೀ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.

ಪಟ್ಟಣದ ಗಲಭೆ ಪೀಡಿತ ಪ್ರದೇಶಗಳಿಗೆ ಶುಕ್ರವಾರ ಬೆಳಗ್ಗೆ ಭೇಟಿ ನೀಡಿ, ದುಷ್ಕರ್ಮಿಗಳ ದಾಳಿಗೆ ತುತ್ತಾದ ಅಂಗಡಿ, ಮಳಿಗೆಗಳನ್ನು ವೀಕ್ಷಿಸಿದ ನಂತರ ಮಾಜಿ ಶಾಸಕ ಕೆ.ಸುರೇಶ್‌ಗೌಡರ ನಿವಾಸದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ವ್ಯವಸ್ಥಿತವಾಗಿ ಗಲಭೆಗಳನ್ನು ಸೃಷ್ಟಿ ಮಾಡುವುದರಲ್ಲಿ ಕಾಂಗ್ರೆಸ್ ಎಕ್ಸ್‌ಪರ್ಟ್. 1990ರಲ್ಲಿ ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ರಾಮನಗರ, ಚನ್ನಪಟ್ಟಣದಲ್ಲಿ ಕೋಮುಗಲಭೆ ಸೃಷ್ಟಿಸಿ ಬೆಂಕಿ ಹಾಕಲಾಯಿತು. ಅದೇ ಮಾದರಿಯಲ್ಲಿ ನಾಗಮಂಗಲದಲ್ಲಿ ಗಲಭೆ ಮಾಡಿಸಲಾಗಿದೆ. ಡಿ.ಜಿ.ಹಳ್ಳಿ ಪೊಲೀಸ್ ಠಾಣೆಗೆ ಬೆಂಕಿ ಇಟ್ಟು ಸುಟ್ಟು ಹಾಕಲಾಯಿತು. ಅದಕ್ಕೂ ಕಾಂಗ್ರೆಸ್ ನಾಯಕರೇ ಕಾರಣ. ನಾಗಮಂಗಲದಲ್ಲಿ ಈಗ ಯಾವ ದುರುದ್ದೇಶ ಇಟ್ಟುಕೊಂಡು ಗಲಭೆ ಸೃಷ್ಟಿ ಮಾಡಲಾಗಿದೆಯೋ ಗೊತ್ತಿಲ್ಲ ಎಂದು ಮಾರ್ಮಿಕವಾಗಿ ಹೇಳಿದರು. ಈಗ ಚನ್ನಪಟ್ಟಣದಲ್ಲಿ ಉಪ ಚುನಾವಣೆ ಬರುತ್ತಿದೆ. ಹೀಗಾಗಿ ಒಂದು ಸಮುದಾಯದ ಓಲೈಕೆ ಮಾಡಲು ಈ ಸಂಚು ರೂಪಿಸಿರಬಹುದು. ಇಡೀ ಘಟನೆಯನ್ನು ನೋಡಿದರೆ ನಾಗಮಂಗಲದ ಕೃತ್ಯದ ಹಿಂದೆ ಕಾಂಗ್ರೆಸ್ ಇರಬಹುದು ಎಂದು ಅವರು ಶಂಕೆ ವ್ಯಕ್ತಪಡಿಸಿದರು.

ಕೇವಲ 100–150 ಜನ ಇದ್ದ ಮೆರವಣಿಗೆಗೆ ಸ್ಥಳೀಯ ಪೊಲೀಸರಿಗೆ ಭದ್ರತೆ ಒದಗಿಸಲು ಸಾಧ್ಯವಾಗಿಲ್ಲ. ಸ್ಥಳದಲ್ಲಿ ಗಲಾಟೆ ಆರಂಭವಾಗುವುದಕ್ಕೆ ಕೇವಲ ಹತ್ತು ನಿಮಿಷಗಳ ಮೊದಲು ಮೀಸಲು ಪೊಲೀಸ್ ಪಡೆಯನ್ನು ಬೇರೆಡೆಗೆ ಕಳಿಸಲಾಗಿದೆ. ಸ್ಥಳೀಯ ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ಡಿವೈಎಸ್ಪಿ ಸ್ಥಳದಲ್ಲಿಯೇ ಇರಲಿಲ್ಲ ಎಂದು ಸ್ಥಳೀಯರು ಹೇಳಿದ್ದಾರೆ. ಹಾಗಾದರೆ, ಈ ಇಬ್ಬರು ಅಧಿಕಾರಿಗಳು ಎಲ್ಲಿದ್ದರು? ಮೀಸಲು ಪಡೆಯನ್ನು ಬೇರೆಡೆಗೆ ಕಳಿಸಿದ್ದು ಯಾಕೆ? ಎಂದು ಪ್ರಶ್ನಿಸಿದರು.

ಮೆರವಣಿಗೆ ಹೊರಟಿದ್ದವರ ಮೇಲೆ ಕಲ್ಲು, ಚಪ್ಪಲಿ, ಪೆಟ್ರೋಲ್ ಬಾಂಬ್‌ಗಳನ್ನು ಎಸೆಯಲಾಗಿದೆ. ಕೇವಲ ಹತ್ತು ನಿಮಿಷದಲ್ಲಿ ಅಷ್ಟು ಪ್ರಮಾಣದ ಕಲ್ಲು, ಚಪ್ಪಲಿ, ಕಬ್ಬಿಣದ ಪೈಪ್‌ಗಳು, ಪೆಟ್ರೋಲ್ ಬಾಂಬ್‌ಗಳು ಎಲ್ಲಿಂದ ಬಂದವು? ಹತ್ತೇ ನಿಮಿಷದಲ್ಲಿ ಇವನ್ನೆಲ್ಲಾ ಸಂಗ್ರಹ ಮಾಡಿಕೊಳ್ಳಲು ಸಾಧ್ಯವೇ? ಇಡೀ ಗಲಭೆಯ ರೀತಿಯನ್ನು ನೋಡಿದರೆ ಹಿಂದೆ ದೊಡ್ಡ ಪಿತೂರಿ ಅಡಗಿರುವಂತೆ ತೋರುತ್ತದೆ ಎಂದು ಆರೋಪಿಸಿದರು.



ಗಲಭೆಯಿಂದ ಹಾನಿಗೊಳಗಾದ ಪ್ರದೇಶಕ್ಕೆ ಕೇಂದ್ರ ಸಚಿವ ಕುಮಾರಸ್ವಾಮಿ ಭೇಟಿ.

ನಾಗಮಂಗಲ ಗಲಭೆಯನ್ನು ಸಣ್ಣ, ಆಕಸ್ಮಿಕ ಘಟನೆ ಎಂದು ಕರೆದಿರುವ ಗೃಹ ಸಚಿವ ಜಿ.ಪರಮೇಶ್ವರ್ ಅವರನ್ನು ತರಾಟೆಗೆ ತೆಗೆದುಕೊಂಡ ಅವರು, ಇಷ್ಟೊಂದು ದೊಡ್ಡ ಗಲಭೆ ಆಗಿದೆ. ಯೋಜಿತವಾಗಿ ಅಂಗಡಿಗಳಿಗೆ ಬೆಂಕಿ ಹಚ್ಚಲಾಗಿದೆ. ಆದರೂ ಇವರೂ ಸಣ್ಣ, ಆಕಸ್ಮಿಕ ಘಟನೆ ಎನ್ನುತ್ತಾರೆ, ಇವರನ್ನು ಗೃಹ ಸಚಿವರು ಎಂದು ಕರೆಯಬೇಕೆ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗಲಭೆಗೆ ಸಂಬಂಧಿಸಿದಂತೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಸಂಪೂರ್ಣ ಲೋಪದಿಂದ ಕೂಡಿದೆ. ಗಣೇಶನ ಪ್ರತಿಷ್ಠಾಪಿಸಿದವನನ್ನೇ ಎ1 ಆರೋಪಿ ಮಾಡಲಾಗಿದೆ. ಪೊಲೀಸರ ವರ್ತನೆ ಸಂಶಯಾಸ್ಪದವಾಗಿದೆ. ದೂರು ನೀಡಿರುವ ಸಬ್ ಇನ್ಸ್‌ಪೆಕ್ಟರ್ ರವಿ ಅವರಿಗೆ ರಾತ್ರಿ 1.30ರಲ್ಲಿ ಎಫ್‌ಐಆರ್‌ನಲ್ಲಿ ಉಲ್ಲೇಖವಾಗಿರುವ ವ್ಯಕ್ತಿಗಳ ಹೆಸರುಗಳು ಹೇಗೆ ಗೊತ್ತು? ಪೆಟ್ಟು ತಿಂದು ಚಿಕಿತ್ಸೆ ಪಡೆಯುತ್ತಿದ್ದ ಅವರಿಗೆ ಅಷ್ಟು ಜನರ ಹೆಸರುಗಳು ನೆನಪಾಗಿದ್ದು ಹೇಗೆ? ಆತನಿಗೆ ಅಷ್ಟು ನೆನಪಿನ ಶಕ್ತಿ ಇದೆಯೇ? ಆತನೇನು ತ್ರಿಕಾಲ ಜ್ಞಾನಿಯೇ? ಎಂದು ಪ್ರಶ್ನಿಸಿದ ಅವರು, ಪ್ರತಿಯೊಂದರಲ್ಲಿಯೂ ಕಾಂಗ್ರೆಸ್ ರಾಜಕೀಯ ಮಾಡುತ್ತಿದೆ. ಇಲ್ಲಿ ಅಮಾಯಕ ಜನರ ಬದುಕು ಬೀದಿಗೆ ಬಂದಿದೆ. ಗಲಭೆಯಲ್ಲಿ ಪೊಲೀಸರನ್ನು ಕೊಲೆ ಮಾಡಲು ಬಂದಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಬರೆದಿದ್ದಾರೆ. ಪೊಲೀಸರಿಗೆ ಭದ್ರತೆ ನೀಡದ ದರಿದ್ರ ಸರ್ಕಾರ ರಾಜ್ಯದಲ್ಲಿದೆ ಎಂದು ಕಿಡಿಕಾರಿದರು.

ಇದೇ ವೇಳೆ ಕುಮಾರಸ್ವಾಮಿ ಅವರು ಗಲಭೆಯಲ್ಲಿ ಆಸ್ತಿಪಾಸ್ತಿ, ಜೀವನೋಪಾಯ ಕಳೆದುಕೊಂಡ ಅನೇಕರಿಗೆ 25 ಸಾವಿರದಿಂದ 2 ಲಕ್ಷ ರೂ.ವರೆಗೆ ವೈಯಕ್ತಿಕವಾಗಿ ಆರ್ಥಿಕ ನೆರವು ನೀಡಿದರು.

ಗಲಭೆಯಲ್ಲಿ ಆಗಿರುವ ನಷ್ಟವನ್ನು ಸರಕಾರ ಸರಿಯಾಗಿ ಅಂದಾಜು ಮಾಡಿ ಕನಿಷ್ಠ ಶೇ.70ರಿಂದ 80ರಷ್ಟು ಪರಿಹಾರ ಕೊಡಬೇಕು. ನಾನು ಕೊಡುವುದು ಆರಂಭದಲ್ಲಿ ಅವರ ಜೀವನೋಪಾಯಕ್ಕೆ ಮಾತ್ರ. ಅನೇಕ ವ್ಯಾಪಾರಿಗಳು ಇಡೀ ಅಸ್ತಿಯನ್ನೇ ಕಳೆದುಕೊಂಡಿದ್ದಾರೆ. ಅವರಿಗೆ ನನ್ನ ಕೈಲಾದ ಮಟ್ಟಿಗೆ ಸಹಾಯ ಮಾಡಿದ್ದೇನೆ. ಎರಡೂ ಸಮುದಾಯಗಳ ಜನರಿಗೂ ನೆರವಾಗಿದ್ದೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಕೆ.ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ, ಡಾ.ಕೆ.ಅನ್ನದಾನಿ, ಶಾಸಕ ಹೆಚ್.ಟಿ.ಮಂಜು, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ನಾಲೆ, ಕೆರೆಗಳಿಗೆ ನೀರು ಬಿಡದಿದ್ದರೆ ನಾನೇ ಕೆಆರ್‌ಎಸ್‌ಗೆ ಬಂದು ನೀರು ಬಿಡ್ತೀನಿ

ನೀರಾವರಿ ಇಲಾಖೆ ಅಧಿಕಾರಿಗಳಿಗೆ ಕೇಂದ್ರ ಸಚಿವ ಕುಮಾರಸ್ವಾಮಿ ಎಚ್ಚರಿಕೆ

ನಾಗಮಂಗಲ, ಸೆ.13– ಮಳವಳ್ಳಿ, ನಾಗಮಂಗಲ ಸೇರಿ ವಿವಿಧ ಭಾಗಗಳ ಕೆರೆ ಮತ್ತು ನಾಲೆಗಳನ್ನು ತುಂಬಿಸದಿದ್ದರೆ, ಕೊನೆಯ ಭಾಗದ ಪ್ರದೇಶಗಳ ನಾಲೆಗೆ ನೀರು ಹರಿಸದಿದ್ದರೆ ನಾನೇ ಬಂದು ಕೃಷ್ಣರಾಜ ಸಾಗರ ಸಾಗರದ ಗೇಟ್‌ಗಳನ್ನು ಎತ್ತಿ ನೀರು ಬಿಡ ಬೇಕಾಗುತ್ತದೆ ಎಂದು ನೀರಾವರಿ ಇಲಾಖೆ ಅಧಿಕಾರಿಗಳಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಎಚ್ಚರಿಕೆ ನೀಡಿದರು.

ಮಳವಳ್ಳಿ ಭಾಗಕ್ಕೆ ಇದುವರೆಗೂ ನೀರು ಕೊಟ್ಟಿಲ್ಲ. ಕುಮಾರಸ್ವಾಮಿಗೆ ವೋಟು ಹಾಕಿದ್ದೀರಿ, ನೀರು ಬೇಕಾದರೆ ಕುಮಾರಸ್ವಾಮಿಯನ್ನೇ ಹೋಗಿ ಕೇಳಿ ಎಂದು ಒಬ್ಬ ಶಾಸಕ ಹೇಳುತ್ತಿದ್ದಾರೆ. ಅಣೆಕಟ್ಟೆ ಇವರ ಅಪ್ಪನ ಮನೆಯ ಆಸ್ತಿಯೇ. ರೈತರಿಗೆ ನೀರು ಕೊಡಲು ಯೋಗ್ಯತೆ ಇಲ್ಲ. ಜಲಪಾತೋತ್ಸವ ಬೇರೆ ಮಾಡುತ್ತಿದ್ದಾರೆ. ನಾಚಿಕೆ ಆಗಬೇಕು ಇವರಿಗೆ ಎಂದು ಸಚಿವರು ಕಿಡಿಕಾರಿದರು. ಕೆರೆಕಟ್ಟೆಗಳಲ್ಲಿ ನೀರು ಇಲ್ಲ. ಮೆಟ್ಟೂರು ಜಲಾಶಯ ತುಂಬಿ ತುಳುಕುತ್ತಿದೆ. ನನ್ನನ್ನು ಭೇಟಿಯಾಗಿದ್ದ ತಮಿಳುನಾಡಿನ ಕೆಲ ನಾಯಕರು ಜಲಾಶಯದಿಂದ ಲಕ್ಷಾಂತರ ಕ್ಯೂಸೆಕ್ ನೀರು ಸಮುದ್ರಕ್ಕೆ ಹರಿದು ಹೋಗುತ್ತಿದೆ ಎಂದು ಹೇಳುತ್ತಾರೆ. ನಮ್ಮಲ್ಲಿ ಮಳೆ ಇಲ್ಲದೆ ಕೆರೆಗಳು ತುಂಬಿಲ್ಲ. ಮೊದಲೇ ತುಂಬಿಸುವ ಕೆಲಸ ಮಾಡಬೇಕಿತ್ತು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ಸಂಜೆಯೇ ನಾನು ದೆಹಲಿಯಿಂದ ಬರುವಾಗ ಕಾವೇರಿ ನೀರಾವರಿ ನಿಗಮದ ಮುಖ್ಯ ಎಂಜಿನಿಯರ್ ಆರ್.ಎಲ್.ವೆಂಕಟೇಶ್ ಜತೆ ಮಾತನಾಡಿದ್ದೇನೆ. ಅವರಿಗೆ ಸ್ಪಷ್ಟ ಎಚ್ಚರಿಕೆ ಕೊಟ್ಟಿದ್ದೇನೆ. ತಕ್ಷಣ ನಾಲೆಗೆ ನೀರು ಹರಿಸಿ, ಇಲ್ಲವಾದರೆ ಜನರ ಜೊತೆ ಬಂದು ನಾನೇ ಅಣೆಕಟ್ಟೆಯ ಗೇಟ್‌ಗಳನ್ನು ಎತ್ತಿ ನೀರು ಬಿಡುತ್ತೇನೆ ಎಂದು ಎಚ್ಚರಿಕೆ ನೀಡಿದ್ದೇನೆ. ತಕ್ಷಣ ಅವರು ನೀರು ಹರಿಸದಿದ್ದರೆ ನಾನೇ ರಸ್ತೆಗೆ ಇಳಿಯುತ್ತೇನೆ, ಹೇಳಿದ್ದನ್ನು ಮಾಡಿ ತೋರಿಸುತ್ತೇನೆ ಎಂದು ಎಚ್ಚರಿಸಿದರು.

ಮಂಡ್ಯ ವಿವಿ 1, 2ನೇ ಘಟಿಕೋತ್ಸವ ಸಮಾರಂಭ

ಪ್ರತಿಭಾವಂತ ಮಕ್ಕಳ ಕೌಶಲ್ಯ ವೃದ್ಧಿಸಿ ಉದ್ಯೋಗ ದೊರಕಿಸಲು ಹಲವು ಒಪ್ಪಂದ: ಸಚಿವ ಸುಧಾಕರ್



ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಕೆ.ಎಸ್. ರಾಜಣ್ಣ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಮಂಡ್ಯ, ಸೆ.13– ರಾಜ್ಯದ ಸರ್ಕಾರಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಗೆ ಒಳಪಡುವ ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಸೇರಿದಂತೆ ಉನ್ನತ ಶಿಕ್ಷಣ ಕೋರ್ಸ್‌ಗಳಲ್ಲಿ ವಿದ್ಯಾಭ್ಯಾಸ ಪಡೆಯುವ ಬಡ ಪ್ರತಿಭಾವಂತ ಮಕ್ಕಳ ಕೌಶಲ್ಯ ವೃದ್ಧಿಸಿ ಉದ್ಯೋಗ ದೊರಕಿಸುವ ನಿಟ್ಟಿನಲ್ಲಿ ಹಲವು ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ಶುಕ್ರವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಮಂಡ್ಯ ವಿಶ್ವವಿದ್ಯಾನಿಲಯದ 1 ಮತ್ತು 2ನೇ ವರ್ಷದ ಪದವಿ ಹಾಗೂ ಸ್ನಾತಕ ಪದವೀಧರ ಘಟಿಕೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಉನ್ನತ ಶಿಕ್ಷಣದ ಜೊತೆ ಕೌಶಲ್ಯಾಧಾರಿತ ಶಿಕ್ಷಣ ಬೋಧಿಸಿ ಶ್ರದ್ಧೆ ಹಾಗೂ ಶ್ರಮವಹಿಸಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಕಾಲೇಜು ಹಂತದಲ್ಲೇ ಉದ್ಯೋಗ ದೊರಕಿಸುವ ಚಿಂತನೆ ರಾಜ್ಯ ಸರ್ಕಾರಕ್ಕಿದ್ದು, ಈ ನಿಟ್ಟಿನಲ್ಲಿ ಟಯೋಟೋ ಕಿರ್ಲೋಸ್ಕರ್, ಟಾಟಾ, ಇನ್ಫೋಸಿಸ್ ಮತ್ತಿತರರ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದರು.

ರಾಜ್ಯದ 45 ಸರ್ಕಾರಿ ಕಾಲೇಜುಗಳಲ್ಲಿ ಕೌಶಲ್ಯಾಧಾರಿತ ಶಿಕ್ಷಣ ನೀಡಲು 1400 ವಿದ್ಯಾರ್ಥಿಗಳನ್ನು ನಿಯೋಜಿಸಲಾಗಿದ್ದು, ಅವರಿಗೆ ರಿಲಯನ್ಸ್, ಟಾಟಾ, ಕ್ರೋಮ್ ಔಟ್‌ಲೆಟ್‌ಗಳಲ್ಲಿ ಉದ್ಯೋಗ ಒದಗಿಸುವ ಚಿಂತನೆ ಸಾಗಿದ್ದು, ತರಬೇತಿ ಪಡೆದ ವಿದ್ಯಾರ್ಥಿಗಳಿಗೆ 7 ಸಾವಿರದಿಂದ 20 ಸಾವಿರದವರೆಗೆ ಸ್ಟೈಫಂಡ್ ನೀಡಿ ಉದ್ಯೋಗದಾತರಾಗಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಒಂದು ವರ್ಷದ ಆಳ್ವಿಕೆಯಲ್ಲಿ ಕಲಿಕೆ ಜತೆ ಕೌಶಲ್ಯ ವೃದ್ಧಿಸಲು ಹೆಚ್ಚು ಆಸಕ್ತಿ ತೋರಲಾಗಿದೆ. ಸೆಂಟರ್ ಫಾರ್ ಎಕ್ಸಲೆನ್ಸ್ ಯೋಜನೆ ಜಾರಿಗೊಳಿಸಿ ಕೈಗಾರಿಕಾ ಸ್ನೇಹಿ ಪಠ್ಯದ ಬೋಧನೆಗೆ ಉನ್ನತ ಶಿಕ್ಷಣ ಇಲಾಖೆ ಒತ್ತು ನೀಡಿದೆ. ಬ್ರಿಟೀಷ್ ಕೌನ್ಸಿಲ್ ಜೊತೆಗಿನ ಒಪ್ಪಂದದಿಂದ ಪ್ರತಿವರ್ಷ 13 ವಿದ್ಯಾರ್ಥಿಗಳನ್ನು ಲಂಡನ್‌ನ ದಂಡಿ ವಿಶ್ವವಿದ್ಯಾನಿಲಯದ ಅಧ್ಯಯನ ಪ್ರವಾಸಕ್ಕೆ ಅನುವು ಮಾಡಲಾಗಿದ್ದು, ಉಪನ್ಯಾಸಕರು, ಪ್ರಾಧ್ಯಾಪಕರಿಗೆ ತರಬೇತಿಯೂ ದೊರೆಯುತ್ತಿದೆ ಎಂದರು.

ನವೆಂಬರ್ ತಿಂಗಳಲ್ಲಿ 30 ವಿದ್ಯಾರ್ಥಿಗಳನ್ನು ವಿದೇಶಕ್ಕೆ ಕಳುಹಿಸಿ ಬುದ್ಧಿಮತ್ತೆ ವೃದ್ಧಿಸುವ ಮತ್ತು ಬ್ರಿಟಿಷ್ ಗ್ರಂಥಾಲಯದ ಮಾಹಿತಿ ಪಡೆಯುವ ಡಿಜಿಟಲ್ ಲೈಬ್ರರಿ ಯೋಜನೆಗೆ ಸರ್ಕಾರ ನೆರವು ನೀಡಿದ್ದು, ಜಾಗತಿಕ ಸ್ಪರ್ಧೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಿ ಭವಿಷ್ಯದ ಹೆಜ್ಜೆಯಲ್ಲಿ ಎದುರಾಗುವ ಆತಂಕದಿಂದ ಧೃತಿಗೆಡದೇ ನಿರಂತರ ಪ್ರಯತ್ನ, ಶ್ರಮ ವಹಿಸಿ ಯಶಸ್ಸುಗೊಳಿಸಲು ಸಜ್ಜುಗೊಳಿಸಲಾಗುವುದೆಂದು ಹೇಳಿದರು.

ನೂತನ ವಿಶ್ವವಿದ್ಯಾನಿಲಯ ಆರಂಭದ ವರ್ಷಗಳಲ್ಲಿ ಎದುರಾಗುವ ಸಂಕಷ್ಟಗಳ ಕ್ಲಿಷ್ಟ ಸ್ಥಿತಿಯಲ್ಲೂ ಶಕ್ತಿಮೀರಿ ಮಂಡ್ಯ ವಿಶ್ವವಿದ್ಯಾನಿಲಯ ಅಭಿವೃದ್ಧಿಗೆ ಶ್ರಮಿಸುತ್ತಿರುವ ಕುಲಪತಿ ಡಾ.ಪುಟ್ಟರಾಜು ಕಾರ್ಯವೈಖರಿಯನ್ನು ಪ್ರಶಂಸೆ ವ್ಯಕ್ತಪಡಿಸಿದ ಸಚಿವರು, ಹೊಸ ಶೈಕ್ಷಣಿಕ ಸಂಸ್ಥೆಯ ಆರಂಭದ ದಿನಗಳಲ್ಲ ಸಿಬ್ಬಂದಿ, ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರ ವಿಭಜನೆ ಅಥವಾ ನಿಯುಕ್ತಿ ಸುಲಭವಾಗಿರುವುದಿಲ್ಲ, ಕಾನೂನು ತೊಡಕು ಹಾಗೂ ಭಿನ್ನರಾಗದ ಬಗ್ಗೆ ಉಪ ಕುಲಪತಿಗಳು ಸಂಸ್ಥೆಯನ್ನು ಮುನ್ನಡೆಸುತ್ತಿರುವುದು ಶ್ಲಾಘನೀಯವೆಂದರು.

ಮೈಸೂರು ವಿ.ವಿಯ ಭಾಗವಾಗಿದ್ದ ಸ್ವಾಯತ್ತ ಕಾಲೇಜು ಪ್ರಸ್ತುತ ವಿ.ವಿಯಾಗಿ ರೂಪುಗೊಂಡಿದೆ. ಹಂತ–ಹಂತವಾಗಿ ಸೌಲಭ್ಯಗಳನ್ನು ನೀಡಿ ಮೈಸೂರು, ಬೆಂಗಳೂರು ಮತ್ತು ಧಾರವಾಡ ವಿಶ್ವ ವಿದ್ಯಾನಿಲಯಗಳಂತೆ ಅತ್ಯುತ್ತಮ ಶೈಕ್ಷಣಿಕ ಪ್ರಗತಿಯಲ್ಲಿ ಮಂಡ್ಯ ವಿವಿ ಅಭಿವೃದ್ಧಿ ಕಾಣಲಿ ಎಂದು ಹಾರೈಸಿದರು. ಇದೇ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಕೆ.ಎಸ್. ರಾಜಣ್ಣ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು. 2155 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ವೇದಿಕೆಯಲ್ಲಿ ವಿಧಾನ ಪರಿಷತ್ ಸದಸ್ಯ ಹಾಗೂ ವಿವಿಯ ಸಿಂಡಿಕೇಟ್ ಸದಸ್ಯ ಮಧು ಜಿ.ಮಾದೇಗೌಡ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ್, ವಿ.ವಿ.ಯ ಕುಲಪತಿ ಪ್ರೊ.ಪುಟ್ಟರಾಜು, ಕುಲ ಸಚಿವ ಪ್ರೊ.ಕೆ.ಯೋಗನರಸಿಂಹಚಾರಿ, ವಿವಿಯ ಡಾ.ಸುರೇಶ್ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

ಘಟಿಕೋತ್ಸವಕ್ಕೆ ಗವರ್ನರ್, ಚುಂಚಶ್ರೀ, ಪ್ರಮೋದಾದೇವಿ ಗೈರು

ಮಂಡ್ಯ: ಮಂಡ್ಯ ವಿಶ್ವವಿದ್ಯಾನಿಲಯದ ವತಿಯಿಂದ ನಡೆದ ಘಟಿಕೋತ್ಸವಕ್ಕೆ ಆಗಮಿಸಿ ಗೌರವ ಡಾಕ್ಟರೇಟ್ ಪ್ರದಾನ ಮಾಡಬೇಕಿದ್ದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಗೈರು ಹಾಜರಾದರು. ಜೊತೆಗೆ ಡಾಕ್ಟರೇಟ್ ಪಡೆಯಬೇಕಿದ್ದ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿ ನಿರ್ಮಲಾನಂದನಾಥಶ್ರೀ ಹಾಗೂ ರಾಜಮಾತೆ ಪ್ರಮೋದಾದೇವಿ ಒಡೆಯರ್ ಸಹ ಗೈರಾದರು. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿದ್ದ ಗವರ್ನರ್ ವಿರುದ್ಧ ಕಪ್ಪು ಬಾವುಟ ಪ್ರದರ್ಶನಕ್ಕೆ ಕಾಂಗ್ರೆಸ್ಸಿಗರು ಕರೆ ನೀಡಿದ್ದರು. ಜೊತೆಗೆ ಮಂಡ್ಯದ ನಾಗಮಂಗಲದಲ್ಲಿ ಎರಡು ಕೋಮಿನ ನಡುವೆ ಘರ್ಷಣೆಯಿಂದ ಜಿಲ್ಲೆಯಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿರುವುದು ಸಹ ರಾಜ್ಯಪಾಲರ ಆಗಮಿಸದಿರುವುದಕ್ಕೆ ಕಾರಣ ಎಂದು ವಿಶ್ಲೇಷಿಸಲಾಗಿದೆ. ಇನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಆಗಮಿಸದ ಹಿನ್ನಲೆಯಲ್ಲಿ ಚುಂಚಶ್ರೀ ಮತ್ತು ಪ್ರಮೋದಾ ದೇವಿ ಗೈರಾಗಿದ್ದು, ಮುಂದಿನ ದಿನಗಳಲ್ಲಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಸಾಧ್ಯತೆ ಇದೆ.

ನಾಗಮಂಗಲ ಘಟನೆ ಖಂಡಿಸಿ ಮಾನವ ಸರಪಳಿ



ಮಾನವ ಸರಪಳಿ ನಿರ್ಮಿಸಿ ಕನ್ನಡಪರ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸುತ್ತಿರುವುದು.

ಶ್ರೀರಂಗಪಟ್ಟಣ, ಸೆ.13– ಬುಧವಾರ ರಾತ್ರಿ ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ವೇಳೆ ಸಂಭವಿಸಿದ ಘರ್ಷಣೆಯನ್ನು ಖಂಡಿಸಿ ಹಿಂದುಪರ ಸಂಘಟನೆಗಳು ಪಟ್ಟಣದಲ್ಲಿ ಮಾನವ ಸರಪಳಿ ನಿರ್ಮಿಸಿ ಆಕ್ರೋಶ ವ್ಯಕ್ತಪಡಿಸಿದವು.

ಪಟ್ಟಣದ ತಾಲೂಕು ಕಚೇರಿ ಬಳಿಯ ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿದ ಹಿಂದು ಪರ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಮಾನವ ಸರಪಳಿ ನಿರ್ಮಿಸಿ ಕಿಡಿಗೇಡಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಗಣೇಶನ ವಿಸರ್ಜನೇ ವೇಳೆ ಒಂದು ಕೋಮಿನ ಕೆಲ ಯುವಕರ ಗುಂಪು ವಿರುದ್ಧ ಘೋಷಣೆ ಕೂಗಿ ಪೆಟ್ರೋಲ್ ಬಾಂಬ್, ತಲ್ವಾರ್ ಹಿಡಿದು ಕೃತ್ಯ ಎಸಗಿದ್ದಾರೆ ಎಂದು ಆರೋಪಿಸಿದರು. ಅಂಗಡಿ ಮುಂಗಟ್ಟುಗಳನ್ನು ಬೆಂಕಿ ಹಾಕಿ ಸುಟ್ಟಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದಲ್ಲದೆ ನಮ್ಮ ಕೋಮಿನ ಯುವಕರನ್ನು ಸರ್ಕಾರ ಪೊಲೀಸರ ಮೂಲಕ ಹಿಂದೂಗಳ ಟಾರ್ಗೆಟ್ ಮಾಡಿ 52 ಮಂದಿಯನ್ನು ವಶಕ್ಕೆ ಪಡೆದಿರುವುದು ಖಂಡಿಸುತ್ತೇವೆ. ಕೂಡಲೆ ಬೆಂಕಿಯಿಂದ ನಷ್ಟಗೊಳಗಾದ ಅಂಗಡಿ ಮಾಲೀಕರಿಗೆ ಪರಿಹಾರದ ಜೊತೆ ಬಂಧಿಸಿರುವ ಯುವಕರನ್ನು ಕೂಡಲೇ ಬಿಡಬೇಕು ಎಂದು ಒತ್ತಾಯಿಸಿದರು. ಇದೇ ಪ್ರವೃತ್ತಿ ಮುಂದುವರೆದರೆ ಜಿಲ್ಲೆಯಾದ್ಯಂತ ದಂಗೆ ಎದ್ದು, ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಈ ವೇಳೆ ಬಿಜೆಪಿಯ ಬೆಳಗೊಳ ಸುನೀಲ್, ಹಿಂದುಜಾಗರಣಾ ವೇದಿಕೆಯ ಚಂದನ್ ಸೇರಿದಂತೆ ಇತರ ಹಿಂದುಪರ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಮಾಜಿ ಶಾಸಕರಿಗೆ ಸನ್ಮಾನ

ಮೈಸೂರಿನ ದೇವರಾಜ ಮೊಹಲ್ಲಾ ಕಾಟಪ್ಪ ಗರಡಿ ರಸ್ತೆಯ ಭಜರಂಗಿ ಯುವಕರ ಭಕ್ತ ಮಂಡಳಿ ವತಿಯಿಂದ ಮಾಜಿ ಶಾಸಕ ಹಾಗೂ ಮೈಸೂರು ನಗರ ಬಿಜೆಪಿ ಅಧ್ಯಕ್ಷರಾದ ಎಲ್. ನಾಗೇಂದ್ರ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಮೈ.ಕ. ಪ್ರೇಮ್ ಕುಮಾರ್, ಪರಮೇಶ್ ಗೌಡ, ಹರ್ಷ, ಸುರೇಂದ್ರ, ಶ್ರೀನಿವಾಸ್, ಸಂಜಯ್, ಗೋಪಾಲ್ ಕೃಷ್ಣ, ಮಂಜುನಾಥ್, ದರ್ಶನ್, ದರ್ಶಿತ್, ಪ್ರವೀಣ್ ಶೆಟ್ಟಿ, ಶ್ರವಣ್ ಕುಮಾರ್ ಇತರರು ಉಪಸ್ಥಿತರಿದ್ದರು.



ನಾಳೆ ಮೈಸೂರು ಕೊಡವ ಸಮಾಜದ ವಾರ್ಷಿಕ ಮಹಾಸಭೆ

ಮೈಸೂರು, ಸೆ.13– ಮೈಸೂರು ಕೊಡವ ಸಮಾಜದ 46ನೇ ವಾರ್ಷಿಕ ಮಹಾಸಭೆ ಸೆ.15(ಭಾನುವಾರ) ಬೆಳಗ್ಗೆ 10 ಗಂಟೆಗೆ ವಿಜಯನಗರ ಮೊದಲ ಹಂತದಲ್ಲಿರುವ ಕೊಡವ ಸಮಾಜದ ಗುರುಮನೆ ಸಭಾಂಗಣದಲ್ಲಿ ಸಂಘದ ಅಧ್ಯಕ್ಷರಾದ ಪೊಂಜಂಡ ಎ.ಗಣಪತಿ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

'ಗಾಜನೂರಿನ ರಾಜರು' ಸಂಗೀತ ಸಂಜೆ ಕಾರ್ಯಕ್ರಮ

ಮೈಸೂರು, ಸೆ.13(ಎಂಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಸೆ.15ರ ಸಂಜೆ 5.30ಕ್ಕೆ ಗಾನ ಲಹರಿ ತಂಡದ ವತಿಯಿಂದ 'ಗಾಜನೂರಿನ ರಾಜರು' ಸಂಗೀತ ರಸಸಂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಡಾ.ರಾಜ್‌ಕುಮಾರ್, ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಚಿತ್ರದ ಗೀತೆಗಳನ್ನು ಪ್ರಸ್ತುತಪಡಿಸಲಿದ್ದು, ಗಾಯಕರಾದ ಡಾ.ಸೋಮನಾಥ್, ಡಾ.ಸೀತಾಲಕ್ಷ್ಮಿ, ರೂಪಶ್ರೀ, ಬಾಲಾಜಿ, ಆನಂದ್, ಮೀರಾ, ಶಾರದಾಂಬ, ಭುವನೇಶ್ವರಿ, ಡಾ.ಮಂಜುನಾಥ್, ಬಾಲು ಪ್ರಕಾಶ್, ಶ್ರೀನಿವಾಸ್, ಸಂದೇಶ್, ಪ್ರದೀಪ್, ಪ್ರಕಾಶ್, ಅಮೋಘ್ ಹಾಡಲಿದ್ದಾರೆ. ಗಾನಲಹರಿ ತಂಡದ ರೂಪಶ್ರೀ ಶೇಷಾದ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಮುಡಾ ನೀಡಿದ್ದು 14 ನಿವೇಶನ!!

ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿದ ಮುಡಾ ವಿಶೇಷ ತಹಸೀಲ್ದಾರ್, ಪ್ರತೀ ನಿವೇಶನಕ್ಕೆ 2,160 ರೂ. ವಾರ್ಷಿಕ ಕಂದಾಯ, 562 ರೂ. ಸೆಸ್ ಮತ್ತು ಖಾತಾ ಶುಲ್ಕ 200 ರೂ. ಸೇರಿ ಒಟ್ಟು 2,922 ರೂ. ನಿರ್ಧರಿಸಿದ್ದಾರೆ. ಅವರು 13 ನಿವೇಶನಗಳಿಗೆ ಕೋರಿದ್ದರೆ ಮುಡಾ ಅಧಿಕಾರಿಗಳು 14 ನಿವೇಶನಗಳಿಗೆ ಅರೇ ದಿನದಲ್ಲಿ ಖಾತಾ ನೋಂದಣಿ ಮಾಡಿ ಒಂದೇ ದಿನ ಕಂದಾಯ ಪತ್ರವನ್ನೂ ನೀಡಿದ್ದಾರೆ.

ತಿಳುವಳಿಗೆ ಪತ್ರವನ್ನೂ ಪಡೆದ ಕುಮಾರ್: 2014 ಆಗಸ್ಟ್ 18ರಂದು ಪಾರ್ವತಿ ಅವರಿಗೆ ಮುಡಾ ಆಯುಕ್ತರು ನೀಡಿದ ತಿಳುವಳಿಕೆ ಪತ್ರವನ್ನೂ ಸಿ.ಟಿ.ಕುಮಾರ್ ಅವರೇ ಮುಡಾ ಕಚೇರಿ ದಾಖಲೆಗೆ, ಕಚೇರಿ ಪ್ರತಿಗೆ ಸಹಿ ಮಾಡಿ, ಸ್ವೀಕರಿಸಿದ್ದಾರೆ. ಕೆಸರೆ ಸರ್ವೆ ನಂ. 464ರ 3.16 ಎಕರೆ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಸರ್ಕಾರ ಕೈಬಿಟ್ಟಿರುವುದರಿಂದ ಬದಲಿ ಜಮೀನು ನೀಡುವಂತೆ ಪಾರ್ವತಿ ಕೋರಿದ್ದರು.

ತಾಂತ್ರಿಕ ಶಾಖೆಗೆ ಗೊತ್ತೇ ಇಲ್ಲ!: ಸದರಿ ಜಮೀನಿಗೆ 1997ರ ಆಗಸ್ಟ್ 20ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತಾದರೂ, 1998ರ ಮೇ 18ರಂದು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟು ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಆದರೆ, ಡಿ ನೋಟಿಫಿಕೇಷನ್ ನಡಾವಳಿಯು ಪ್ರಾಧಿಕಾರದ ತಾಂತ್ರಿಕ ಶಾಖೆ ಗಮನಕ್ಕೆ ಬಾರದಿರುವುದರಿಂದ ಈ ಜಮೀನನ್ನು ಪೂರ್ಣ ಪ್ರಮಾಣದಲ್ಲಿ ಪ್ರಾಧಿಕಾರವು ಅಭಿವೃದ್ಧಿಪಡಿಸಿದೆ ಎಂದು ತಿಳುವಳಿಕೆ ಪತ್ರದಲ್ಲಿ ನಮೂದಿಸಲಾಗಿತ್ತು.

ತಮ್ಮ ಕೋರಿಕೆಯಂತೆ ಜಮೀನಿಗೆ ಸಮಾನಾಂತರವಾಗಿ ಜಮೀನನ್ನು ನೀಡಲು ಮುಡಾದಲ್ಲಿ ಜಮೀನು ಲಭ್ಯವಿಲ್ಲವಾದ್ದರಿಂದ ನಿಮ್ಮ ಜಮೀನಿಗೆ ಮಾರುಕಟ್ಟೆ ದರ ನಿಗದಿಪಡಿಸಿ ಪರಿಹಾರದ ಹಣ ಅಥವಾ 60:40ರ ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ತತ್ಸಮಾನ ಬಡಾವಣೆಗಳಲ್ಲಿ ನೀಡಲು ಪ್ರಾಧಿಕಾರವು ಪರಿಶೀಲಿಸುತ್ತದೆ. ಈ ವಿಚಾರದಲ್ಲಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಕೂಡಲೇ ತಿಳಿಸುವಂತೆ ಆಯುಕ್ತರು ಪಾರ್ವತಿ ಅವರಿಗೆ ತಿಳುವಳಿಕೆ ಪತ್ರದಲ್ಲಿ ಕೋರಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯರ ಆಪ್ತ ಸಹಾಯಕ ಕುಮಾರ್ ಹಾಗೂ ಮುಡಾ ಪ್ರಥಮ ದರ್ಜೆ ಸಹಾಯಕ ಕೆ.ಸಿ. ಉಮೇಶ ಅವರೇ ಪಾರ್ವತಿ ಅವರ ಜಮೀನು, ನಿವೇಶನಗಳಿಗೆ ಸಂಬಂಧಿಸಿದಂತೆ ಎಲ್ಲಾ ಹಂತದ ಪ್ರಕ್ರಿಯೆಗಳಲ್ಲೂ ಭಾಗಿಯಾಗಿರುವುದು ದಾಖಲೆಗಳಿಂದ ತಿಳಿದುಬಂದಿದೆ.

ಚಾರ್ಜ್‌ಶೀಟ್ ಸಲ್ಲಿಸಿ

ನ್ಯಾಯಾಲಯ ತೀರ್ಮಾನ ಕೈಗೊಳ್ಳುತ್ತೆ. ಬಿಜೆಪಿ ಆಡಳಿತದಲ್ಲಿ ನಡೆದ ಶೇಕಡ 40% ಕಮಿಷನ್ ಸೇರಿದಂತೆ ಕೆಲವು ಹಗರಣಗಳನ್ನು ಮುಂದಿಟ್ಟುಕೊಂಡು ನಾವು ಅಧಿಕಾರಕ್ಕೆ ಬಂದಿದ್ದೇವೆ. ಈಗಾಗಲೇ ಸರ್ಕಾರ ತನಿಖೆಗೆ ಆದೇಶ ಮಾಡಿದೆ. ದೇವರಾಜ ಅರಸ್ ಟ್ರಕ್ ಟರ್ಮಿನಲ್ ಭ್ರಷ್ಟಾಚಾರ ಹೊರತುಪಡಿಸಿ ಯಾವುದೇ ತನಿಖೆ ಪೂರ್ಣಗೊಳಿಸಿದ ಮಾಹಿತಿ ಇಲ್ಲ ಎಂದು ತಿಳಿಸಿದ ಗೃಹ ಸಚಿವರು, ಪ್ರತಿಯೊಂದು ಹಗರಣಗಳ ಬಗ್ಗೆಯೂ ಮಾಹಿತಿ ಪಡೆದುಕೊಂಡರು.

ಅದರಲ್ಲೂ ಕೋವಿಡ್–19 ಸಂದರ್ಭದ ಭ್ರಷ್ಟಾಚಾರ, ನೀರಾವರಿ ಮತ್ತು ಲೋಕೋಪಯೋಗಿ ಸೇರಿದಂತೆ ಶೇಕಡ 40% ಕಮಿಷನ್ ಆರೋಪಕ್ಕೆ ಸಂಬಂಧಿಸಿದಂತೆ ತ್ವರಿತ ನಿರ್ಧಾರ ಕೈಗೊಳ್ಳಿ ಎಂದು ಸಭೆ ಸೂಚಿಸಿತು.

ಇನ್ನಿತರ ನಿಗಮ ಮಂಡಳಿಯಲ್ಲೂ ಭ್ರಷ್ಟಾಚಾರ: ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಹಗರಣದ ಮಾದರಿಯಲ್ಲೇ ಬೋವಿ ಸೇರಿದಂತೆ ವಿವಿಧ ನಿಗಮಗಳಲ್ಲೂ ಭಾರೀ ಭ್ರಷ್ಟಾಚಾರ ನಡೆದಿದೆ. ಅವುಗಳಿಗೆ ಸಂಬಂಧಿಸಿದಂತೆ ಯಾವ ಹಂತದಲ್ಲಿ ತನಿಖೆ ನಡೆದಿದೆ ಎಂದು ಮಾಹಿತಿ ಪಡೆದ ಸಚಿವರ ಸಮಿತಿ, ಇವುಗಳಲ್ಲಿ ಕೆಲವು ಹಗರಣಗಳ ಬಗ್ಗೆ ಇನ್ನು ಎರಡು ವಾರಗಳಲ್ಲಿ ದೂರು ದಾಖಲಿಸಿ ಮುಂದಿನ ಕ್ರಮ ಕೈಗೊಳ್ಳಬೇಕು ಎಂದು ಕಟ್ಟುನಿಟ್ಟಿನ ಆದೇಶ ಮಾಡಿತು.

ಬಿಜೆಪಿಗೆ ಬಿಸಿ ಮುಟ್ಟಿಸಲು ಸರ್ಕಸ್: ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನ ಹಂಚಿಕೆ ಹಗರಣಗಳಿಂದ ಆಡಳಿತದ ವರ್ಚಸ್ಸಿಗೆ ಉಂಟಾಗಿರುವ ಧಕ್ಕೆ ಉಪಶಮನಕ್ಕೆ ಬಿಜೆಪಿ ಆಡಳಿತದಲ್ಲಿ ನಡೆದಿರುವ ಹಗರಣಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ಆ ಪಕ್ಷದ ಮುಖಂಡರಿಗೆ ಬಿಸಿ ಮುಟ್ಟಿಸಲು ಸರ್ಕಾರ ಇಂತಹ ಕ್ರಮಕ್ಕೆ ಮುಂದಾಗಿದೆ. ತಮ್ಮ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ನೀಡಿರುವ ಅನುಮತಿ ಸಂಬಂಧ ನ್ಯಾಯಾಲಯದ ತೀರ್ಪು ಹೊರಬರುವ ಮುನ್ನವೇ ಒಂದೆರಡು ಹಗರಣಗಳನ್ನು ಬಯಲು ಮಾಡಿ, ಬಿಜೆಪಿ ಜನಪ್ರತಿನಿಧಿಗಳ ಬಣ್ಣ ಬಯಲು ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದಾರೆ.

ಇದರ ಬೆನ್ನಲ್ಲೇ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ನೇಮಕಗೊಂಡಿದ್ದ ಸಚಿವರ ಸಮಿತಿ ಸಭೆ ಸೇರಿ ಕೆಲವು ಕಠಿಣ ತೀರ್ಮಾನಗಳನ್ನು ಕೈಗೊಂಡಿದೆ.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆದ ಸಭೆಯಲ್ಲಿ ಸಚಿವರಾದ ಎಚ್.ಕೆ.ಪಾಟೀಲ್, ಕೃಷ್ಣಬೈರೇಗೌಡ, ಪ್ರಿಯಾಂಕ್ ಖರ್ಗೆ ಹಾಗೂ ಸಂತೋಷ್ ಲಾಡ್ ಹಾಜರಿದ್ದರು.

ಸರ್ಕಲ್ ಇನ್ಸ್‌ಪೆಕ್ಟರ್ ಅಮಾನತು



ಮೆರವಣಿಗೆ ವೇಳೆ ಮುಂಜಾಗ್ರತಾ ಕ್ರಮ ಕೈಗೊಂಡಿಲ್ಲ. ಇಂಥಹ ಘಟನೆ ನಡೆಯಬಹುದೆಂಬ ನಿರೀಕ್ಷೆಯಿಂದ ಬಂದೋಬಸ್ತ್ ಹೆಚ್ಚಿಸಿಕೊಂಡಿಲ್ಲ ಹಾಗೂ ಗಲಭೆ ನಿಯಂತ್ರಿಸಲು ವಿಫಲರಾಗಿದ್ದಾರೆ ಎಂಬ ಆರೋಪದ ಮೇರೆಗೆ ನಾಗಮಂಗಲ ಸರ್ಕಲ್ ಇನ್ಸ್‌ಪೆಕ್ಟರ್ ಅಶೋಕ್‌ಕುಮಾರ್ ಅವರನ್ನು ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ ಇಂದು ಅಮಾನತು ಪಡಿಸಿ ಆದೇಶ ಹೊರಡಿಸಿದ್ದಾರೆ.

ಆರದ ಕಿಚ್ಚು: ಅಂಗಡಿ–ಮುಂಗಟ್ಟುಗಳಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿ ಎರಡು ದಿನವಾಗುತ್ತಿದ್ದರೂ, ಇನ್ನೂ ಅದರ ಕಿಚ್ಚು ಆರಿಲ್ಲ. ನಾಗಮಂಗಲದ ಪಂಚರ್ ಶಾಪ್‌ನಲ್ಲಿ ಇಂದೂ ಕೂಡ ಬೆಂಕಿ ಧಗಧಗಿಸುತ್ತಿತ್ತು. ದುಷ್ಕರ್ಮಿಗಳು ಬೆಂಕಿ ಹಚ್ಚುವಾಗ ಅಂಗಡಿಯ ಶೆಟ್ಟರ್ ಜಖಂಗೊಳಿಸಿದ್ದರಿಂದ ಬೆಂಕಿ ನಂದಿಸಲು ಅಗ್ನಿಶಾಮಕ ದಳ ಸಿಬ್ಬಂದಿಗೆ ಅಡ್ಡಿಯುಂಟಾಗಿತ್ತು. ಸಿಬ್ಬಂದಿಯು ಅಂಗಡಿಯ ಮೇಲ್ಛಾವಣಿ ತೆಗೆದು ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದರು. ಕೊನೆಗೆ ಜಖಂಗೊಂಡು ತೆರೆಯಲು ಸಾಧ್ಯವಾಗದೇ ಜಾಮ್ ಆಗಿದ್ದ ರೋಲಿಂಗ್ ಶೆಟ್ಟರ್ ಅನ್ನು ಸುತ್ತಿಗೆಯಿಂದ ಹೊಡೆದು ಕಳಚಿದ ನಂತರ ಅಗ್ನಿಶಾಮಕ ದಳದ ಸಿಬ್ಬಂದಿ ತಮ್ಮ ಕಾರ್ಯಾಚರಣೆ ಮುಂದುವರೆಸಿದರು. ಇಂದು ಸಂಜೆ ವೇಳೆಗೆ ಅಗ್ನಿಶಾಮಕ ದಳ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯವನ್ನು ಪೂರ್ಣಗೊಳಿಸಿದ್ದಾರೆ.

ಆರೋಪಿ ಮಾವ ಸಾವು: ಗಲಭೆಗೆ ಸಂಬಂಧಿಸಿದಂತೆ ಬಂಧಿಸಲ್ಪಟ್ಟು ಜೈಲಿನಲ್ಲಿರುವ ಆರೋಪಿ ದಿವಾಕರ್ ಎಂಬಾತನ ಮಾವ ಇಂದು ಮೈಸೂರಿನ ಕ್ಯಾತಮಾರನಹಳ್ಳಿಯಲ್ಲಿ ನಿಧನರಾದರು. ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ನ್ಯಾಯಾಲಯದಿಂದ ಅನುಮತಿ ಪಡೆದ ನಂತರ ಪೊಲೀಸರು ಆತನನ್ನು ಮೈಸೂರಿನ ಕ್ಯಾತಮಾರನಹಳ್ಳಿಗೆ ಕರೆದೊಯ್ದು ಅಂತ್ಯಕ್ರಿಯೆ ನಡೆದ ನಂತರ ವಾಪಸ್ ಜೈಲಿಗೆ ಕರೆದೊಯ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಆರೋಪಿ ದಿವಾಕರ್ ಪತ್ನಿ, ಮಧ್ಯರಾತ್ರಿ ಮನೆಯಲ್ಲಿದ್ದ ಪತಿಯನ್ನು ಪೊಲೀಸರು ಬಂಧಿಸಿ ಕರೆದೊಯ್ದರು. ಗಲಾಟೆಯ ವೀಡಿಯೋದಲ್ಲಿ ಅವರು ಇಲ್ಲದಿದ್ದರೆ ಬಿಟ್ಟು ಕಳುಹಿಸುತ್ತೇವೆ ಎಂದು ಪೊಲೀಸರು ತಿಳಿಸಿದ್ದರು. ಆದರೆ ಪತಿಯನ್ನು ಜೈಲಿಗೆ ಹಾಕಿದ್ದಾರೆ. ಇದೇ ಆಘಾತದಲ್ಲಿ ನನ್ನ ತಂದೆ ಸಾವಿಗೀಡಾಗಿದ್ದಾರೆ. ನನ್ನ ತಂದೆಯ ಸಾವಿಗೆ ಪೊಲೀಸರೇ ಕಾರಣ ಎಂದು ಕಿಡಿಕಾರಿದರು.

ಶಾಲಾ–ಕಾಲೇಜು ಪುನರಾರಂಭ: ನಿನ್ನೆ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತಾದರೂ, ಇಂದು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಶಾಲಾ–ಕಾಲೇಜುಗಳನ್ನು ಪುನರಾರಂಭಿಸಲಾಗಿದೆ. ವಿದ್ಯಾರ್ಥಿಗಳು ಆತಂಕದಲ್ಲಿ ಶಾಲೆಗಳಿಗೆ ಹೋಗುತ್ತಿದ್ದ ದೃಶ್ಯ ಕಂಡುಬಂತು. ಶಾಲಾ–ಕಾಲೇಜುಗಳಲ್ಲಿ ಹಾಜರಾತಿ ಕಡಿಮೆ ಇತ್ತು.

ಬೂದಿ ಮುಚ್ಚಿದ ಕೆಂಡ: ಪರಿಸ್ಥಿತಿ ನಿಯಂತ್ರಣದಲ್ಲಿದ್ದರೂ ನಾಗಮಂಗಲ ಬೂದಿ ಮುಚ್ಚಿದ ಕೆಂಡದಂತಿದೆ. ಇಂದು ಪಟ್ಟಣದಲ್ಲಿ ಸುಮಾರು ಶೇ.40ರಷ್ಟು ಅಂಗಡಿ–ಮುಂಗಟ್ಟುಗಳು ತೆರೆದಿದ್ದವು. ಗಲಭೆ ನಡೆದ ಮೈಸೂರು, ಮಂಡ್ಯ ರಸ್ತೆಗಳಲ್ಲಿನ ಅಂಗಡಿಗಳು ಸಂಪೂರ್ಣ ಬಂದ್ ಆಗಿದ್ದವು. ಪೊಲೀಸರ ಸರ್ಪಗಾವಲು ಮುಂದುವರೆದಿದೆ.

ಮೆರವಣಿಗೆಗೆ ನಿರ್ಬಂಧ: ನಾಗಮಂಗಲದಲ್ಲಿ ಗಲಭೆ ನಡೆದ ಹಿನ್ನೆಲೆಯಲ್ಲಿ ಪೊಲೀಸರು ಗಣೇಶೋತ್ಸವ ಮೆರವಣಿಗೆಗೆ ನಿರ್ಬಂಧ ಹೇರಿದ್ದಾರೆ ಎಂದು ಭಜರಂಗ ಸೇನೆ ರಾಜ್ಯಾಧ್ಯಕ್ಷ ಮಂಜುನಾಥ್ ಆರೋಪಿಸಿದ್ದಾರೆ. ಮಂಡ್ಯ ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಗಣೇಶ ವಿಸರ್ಜನೆ ಮೆರವಣಿಗೆಯಲ್ಲಿ ಡಿಜೆ ಹಾಗೂ ತಮಟೆ ಬಳಕೆಯನ್ನು ಪೊಲೀಸರು ನಿಷೇಧಿಸಿದ್ದಾರೆ. ಈದ್ ಮಿಲಾದ್ ಒಳಗಾಗಿ ಗಣೇಶನನ್ನು ವಿಸರ್ಜಿಸಬೇಕು ಎಂದು ತಾಕೀತು ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರ ಹಿಂದೂಗಳ ಭಾವನೆಗೆ ಧಕ್ಕೆ ತರುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

ಹಸ್ತಾಂತರಿಸಿಕೊಳ್ಳಬಾರದು

ಸಂಸ್ಥೆಗಳು ಪರಿತ್ಯಾಜನ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳಬೇಕು. ಭೂ ಮಾಲೀಕರು ಸಮ್ಮತಿಸಿದರೂ, ಡಿಸಿ ಅನುಮತಿ ಇಲ್ಲದೇ ರಿಲಿಂಕ್ವಿಷ್ ಡೀಡ್ ಮಾಡಿಕೊಳ್ಳುವಂತಿಲ್ಲ ಎಂದು ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಮುಡಾ ಅಧಿಕಾರಿಗಳು ಶೇ. 50:50ರ ಅನುಪಾತದಡಿ ಅಕ್ರಮವಾಗಿ ನಿವೇಶನ ಹಂಚುವ ಸಲುವಾಗಿ ಸರ್ಕಾರದ ಆದೇಶವನ್ನು ಧಿಕ್ಕರಿಸಿ ಕೃಷಿ ಭೂಮಿ ಯನ್ನು ಪರಿತ್ಯಾಜನ ಪತ್ರ ನೋಂದಣಿ ಮಾಡಿಸಿ, ಹಸ್ತಾಂತರಿಸಿಕೊಂಡು ಬ್ರಹ್ಮಾಂಡ ಭ್ರಷ್ಟಾಚಾರ ಮಾಡಿರುವುದು ಬಟಾಬಯಲಾಗಿದೆ.

ಮೈಸೂರು ಮಿತ್ರ ಶನಿವಾರ 14 ಸೆಪ್ಟೆಂಬರ್ 2024

ಒಡನಾಡಿ ಸಂಸ್ಥೆಯಲ್ಲಿ 'ಮಂತ್ರ ಮಾಂಗಲ್ಯ' ಸರಳ ವಿವಾಹ



ಮೈಸೂರು, ಸೆ.13(ಬಿಎಲ್‌ಯು)– ಮೈಸೂರಿನ ಒಡನಾಡಿ ಸಂಸ್ಥೆಯಲ್ಲಿ ಇಂದು ನಡೆದ ಸರಳ ವಿವಾಹದಲ್ಲಿ ಗಂಗೆ ಮತ್ತು ಶಶಿಕುಮಾರ್ ಮಂತ್ರ ಮಾಂಗಲ್ಯದ ಮೂಲಕ ಸತಿ ಪತಿಗಳಾದರು.

ಇದಕ್ಕೆ ಸಾಕ್ಷಿಯಾದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಸಮಾಜದಲ್ಲಿ ಸದ್ದಿಲ್ಲದೆ ನಡೆಯುತ್ತಿರುವ ಇಂತಹ ವಿವಾಹ ಕಾರ್ಯಕ್ರಮ ಕ್ರಾಂತಿಯ ಧ್ಯೋತಕವಾಗಿದೆ. 12 ನೇ ಶತಮಾನದ ಶರಣರ ಆಶಯಗಳನ್ನು ಈ ಸರಳ ವಿವಾಹದಲ್ಲಿ ಕಾಣಬಹುದಾಗಿದೆ ಎಂದರು.

ಇಂತಹ ಮದುವೆಗಳು ನಮ್ಮ ಸಮಾಜಕ್ಕೆ ಅಗತ್ಯವಾಗಿದೆ. ಈ ಮದುವೆಯಲ್ಲಿ ಭಾಗವಹಿಸಿರುವುದರಿಂದ ನನ್ನ ಗೌರವ ಮತ್ತು ಘನತೆ ಹೆಚ್ಚಾಗಿದೆ ಎಂದು ಭಾವಿಸಿದ್ದೇನೆ. ಒಬ್ಬ ಮಂತ್ರಿಯಾಗಿ ಜಾತ್ಯಾತೀತ ಮತ್ತು ಧರ್ಮಾತೀತ ಸಂಸ್ಕಾರ ಉತ್ತೇಜಿಸುವುದು ನನ್ನ ಆದ್ಯ ಕರ್ತವ್ಯ ಎಂದು ಡಾ.ಮಹದೇವಪ್ಪ ಅಭಿಪ್ರಾಯಪಟ್ಟರು.

ಪ್ರೊ.ಶಶಿಕಲಾ ಸರಳ ವಿವಾಹದಲ್ಲಿ ನವ ವಧು ವರರಿಗೆ ಮಂತ್ರ ಮಾಂಗಲ್ಯ ಪ್ರಮಾಣ ವಚನ ಬೋಧಿಸಿದರು.

ಒಡನಾಡಿ ಸಂಸ್ಥೆ ನಿರ್ದೇಶಕರಾದ ಸ್ಟಾನ್ಲಿ, ಪರುಶುರಾಮ್, ಎಸಿಪಿ ಗಜೇಂದ್ರ ಪ್ರಸಾದ್, ಮಹಾರಾಜ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಲತಾ ಕೆ.ಬಿದ್ದಪ್ಪ, ಶ್ರೀದೇವಿ, ಸುಶೀಲ, ಮೊಹಮ್ಮದ್ ಅಲಿ, ಅಯ್ಯಪ್ಪ ಹೂಗಾರ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಆದಿಚುಂಚನಗಿರಿ ಮಠದಲ್ಲಿ ಮೊದಲ ವಾರ್ಷಿಕೋತ್ಸವ



ಮೈಸೂರು, ಸೆ.13(ಎಂಟಿವೈ)–ಮೈಸೂರಿನ ಲಕ್ಷ್ಮಿಕಾಂತನಗರದಲ್ಲಿರುವ ಶ್ರೀ ಆದಿಚುಂಚನಗಿರಿ ಶಾಖಾ ಮಠದಲ್ಲಿ ಮೊದಲನೇ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ನಡೆದ ಚಂಡಿಕಾ ಹೋಮ ಕಾರ್ಯಕ್ರಮದಲ್ಲಿ ಶ್ರೀ ಆದಿಚುಂಚನಗಿರಿ ಮಠದ ಡಾ. ನಿರ್ಮಲಾನಂದ ಸ್ವಾಮೀಜಿ ಭಾಗವಹಿಸಿ ಪೂಜಾ ವಿಧಿ–ವಿಧಾನಗಳನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶೇಖರ್ ಸ್ವಾಮೀಜಿ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ. ಮಾದೇಗೌಡ, ವಿದ್ಯಾವರ್ಧಕ ವಿದ್ಯಾಸಂಸ್ಥೆ ಅಧ್ಯಕ್ಷ ಗುಂಡಪ್ಪಗೌಡ, ಪ್ರೊ. ಕೃಷ್ಣೇಗೌಡ, ಎನ್.ಜಿ.ನಾರಾಯಣ್, ಜಿ.ಪಂ. ಮಾಜಿ ಸದಸ್ಯೆ ಚಂದ್ರಿಕಾ ಸುರೇಶ್, ಕಾಲೇಜು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಸಂಗೀತದಿಂದ ಮೆದುಳಿನ ಆರೋಗ್ಯ ಸುಧಾರಣೆ

ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಶೇಖರ್ ಅಭಿಮತ



ಮೈಸೂರು, ಸೆ.13(ಎಂಕೆ)– ಸಂಗೀತ ಕೇಳುವುದರಿಂದ ಮೆದುಳಿನ ಆರೋಗ್ಯ ವೃದ್ಧಿಯಾಗುವುದಲ್ಲದೆ ಮರೆಗುಳಿತನ ಕಡಿಮೆಯಾಗಲಿದೆ ಎಂದು ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ.ಎಂ.ಎ.ಶೇಖರ್ ಅಭಿಪ್ರಾಯಿಸಿದರು.

ಮೈಸೂರಿನ ಎಂಜಿ ರಸ್ತೆಯಲ್ಲಿರುವ ಜೆಎಸ್‌ಎಸ್ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಆಲ್ಜೈಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ (ಎಆರ್‌ಡಿಎಸ್‌ಐ), ಮೈಸೂರು ಚಾಪ್ಟರ್ ಹಾಗೂ ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಮ್ಯೂಸಿಕ್ ಫಾರ್ ಮೆಮೊರಿ' ಸಂಗೀತ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯನ ಮೆದುಳನ್ನು ಮೀರಿಸುವ ಯಾವುದೇ ಸೂಪರ್ ಕಂಪ್ಯೂಟರ್‌ಗಳಿಲ್ಲ. ಆದರೆ ಮೆದುಳನ್ನು ಒತ್ತಡದಿಂದ ಮುಕ್ತಗೊಳಿಸಿ ಆರೋಗ್ಯವಾಗಿಟ್ಟುಕೊಳ್ಳುವುದು ಮುಖ್ಯವಾಗಿದೆ ಎಂದರು.

ಮರೆಗುಳಿತನಕ್ಕೆ ಸಂಗೀತ ಸಹಕಾರಿ. ಶಾಸ್ತ್ರೀಯ ಸಂಗೀತ ಮಾತ್ರವಲ್ಲದೆ ಹಳೆಯ ಸುಮಧುರ ಗೀತೆಗಳನ್ನು ಕೇಳಿದರೂ ಮಾನಸಿಕ ಒತ್ತಡ ಕಡಿಮೆಯಾಗಲಿದೆ. ಸಂಗೀತ ಆಲಿಸುವಿಕೆಯಿಂದ ಏಕಾಗ್ರತೆ ವೃದ್ಧಿಯಾಗಲಿದೆ. ಮೆದುಳಿನ ಆರೋಗ್ಯಕ್ಕೆ ಸದಾ ಸಕಾರಾತ್ಮಕ ಚಿಂತನೆ ಇರಬೇಕು ಎಂದು ಸಲಹೆ ನೀಡಿದರು.

ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪಾಂಶುಪಾಲರೂ ಆದ ಆಲ್ಜೈಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ, ಮೈಸೂರು ಚಾಪ್ಟರ್ ಅಧ್ಯಕ್ಷ ಡಾ.ಹನುಮಂತಚಾರ್ ಜೋಶಿ ಮಾತನಾಡಿ, ಮರೆಗುಳಿತನಕ್ಕೆ ಒಳಗಾಗುವವರ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದಕ್ಕೆ ಒತ್ತಡದ ಜೀವನ ಶೈಲಿ ಮುಖ್ಯ ಕಾರಣವಾಗಿದೆ. ಕೆಲವೊಮ್ಮೆ ಒಂಟಿ ತನದಿಂದಲೂ ತೊಂದರೆಯಾಗಲಿದೆ. ಮರೆಗುಳಿತನ ವಯೋವೃದ್ಧರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳಲಿದ್ದು, ಅವರೊಂದಿಗೆ ಯಾರಾದರೊಬ್ಬರು ಇರಬೇಕು ಎಂದು ತಿಳಿಸಿದರು.

ನಂತರ ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ ಅಧ್ಯಕ್ಷ ಸುಬ್ರಹ್ಮಣ್ಯಂ ಕುಮಾರ್ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಜೆಎಸ್‌ಎಸ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ಪ್ರತಿಭಾ ಪಿರೇರಾ ಮತ್ತಿತರರು ಉಪಸ್ಥಿತರಿದ್ದರು.

ಮುಡಾ ಮಾಜಿ ಆಯುಕ್ತ ದಿನೇಶ್ ಕುಮಾರ್ ಅಮಾನತು ವಿಷಯದಲ್ಲಿ ಸರ್ಕಾರದ ಕಣ್ಣುಮುಚ್ಚಾಲೆ

● ಅಮಾನತು ಆದೇಶ ಹಿಂಪಡೆದ ಬಗ್ಗೆ ಕೋರ್ಟ್‌ನಲ್ಲಿ ಎಜಿ ಮಾಹಿತಿ ● ಕೆಲವೇ ದಿನದಲ್ಲಿ ಅಧಿಕಾರಿಗೆ ಸರ್ಕಾರದಿಂದ ರಿಲೀಫ್! ● ಅನುಮಾನಕ್ಕೆ ಆಸ್ಪದ ಮಾಡಿಕೊಟ್ಟಿರುವ ಅಧಿಕಾರಿಯ 'ಅಮಾನತು' ಶಾಸ್ತ್ರ!

ಮೈಸೂರು, ಸೆ.13–50:50 ಅನುಪಾತದಡಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ಸೇರಿದಂತೆ ಇನ್ನಿತರ ಕಾರಣಗಳನ್ನು ಉಲ್ಲೇಖಿಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಹಿಂದಿನ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರನ್ನು ಅಮಾನತುಪಡಿಸಿದ್ದ ಸೆ.2ರ ಆದೇಶವನ್ನು ರಾಜ್ಯ ಸರ್ಕಾರ ಸದ್ದಿಲ್ಲದೇ ಹಿಂಪಡೆದಿದೆ.

ದಿನೇಶ್ ಕುಮಾರ್ ಅವರ ಅಮಾನತು ಆದೇಶ ಯಾವಾಗ ಹಿಂಪಡೆಯಲಾಯಿತು? ಅವರಿಗೆ ಯಾವುದೇ ಜಾಗ ತೋರಿಸಿಲ್ಲವೇ? ಅಥವಾ ಯಾವುದಾದರೂ ಹುದ್ದೆಗೆ ನಿಯೋಜಿಸಲಾಗಿದೆಯೇ? ಎಂಬುದರ ಬಗ್ಗೆ ಸರ್ಕಾರ ಬಹಿರಂಗಪಡಿಸಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ ಅವರಿಗೆ 50:50 ಅನುಪಾತದಡಿ 14 ನಿವೇಶನಗಳನ್ನು ಮುಡಾದಿಂದ ನೀಡಿರುವುದು ತೀವ್ರ ವಿವಾದಕ್ಕೆ ಕಾರಣವಾಗಿ ಕೊನೆಗೆ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ಸಿದ್ದರಾಮಯ್ಯರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ. ರಾಜ್ಯಪಾಲರ ಈ ಆದೇಶವನ್ನು ಪ್ರಶ್ನಿಸಿ ಸಿದ್ದರಾಮಯ್ಯ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಸೆ.2ರಂದು ದಿನೇಶ್ ಕುಮಾರ್ ಅವರನ್ನು ಸರ್ಕಾರ ಅಮಾನತುಪಡಿಸಿದಾಗ ವಿರೋಧ ಪಕ್ಷಗಳು ಸಿದ್ದರಾಮಯ್ಯ ಪತ್ನಿಯವರಿಗೆ 50:50 ಅನುಪಾತದಡಿ ನಿವೇಶನ ನೀಡಿರುವುದು ಅಕ್ರಮ ಎಂಬುದು ದಿನೇಶ್ ಕುಮಾರ್ ಅಮಾನತಿನಿಂದಾಗಿ ಸರ್ಕಾರವೇ ಒಪ್ಪಿಕೊಂಡಂತಾಗಿದೆ ಎಂದು ಹೇಳುತ್ತಿದ್ದವು. ಈ ಮಧ್ಯೆ ದಿನೇಶ್ ಕುಮಾರ್ ಅಮಾನತು ಹಿಂಪಡೆಯಲಾಗಿದೆ.



ಮುಡಾ ಕಚೇರಿ



ದಿನೇಶ್ ಕುಮಾರ್

ಹೈಕೋರ್ಟ್‌ನಲ್ಲಿ ಬಹಿರಂಗ: ದಿನೇಶ್ ಕುಮಾರ್ ಅಮಾನತು ಹಿಂಪಡೆದಿರುವ ವಿಚಾರ ನಿನ್ನೆ ಹೈಕೋರ್ಟ್‌ನಲ್ಲಿ ಬಹಿರಂಗವಾಗಿದೆ. ತಮ್ಮ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ಆದೇಶ ಪ್ರಶ್ನಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಅರ್ಜಿಯ ವಾದ–ಪ್ರತಿವಾದದ ಕೊನೆಯ ದಿನವಾದ ಗುರುವಾರ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರು, ದಿನೇಶ್ ಕುಮಾರ್ ಅವರ ಅಮಾನತು ಆದೇಶವನ್ನು ಸರ್ಕಾರ ಹಿಂಪಡೆದಿರುವ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಿದರು.

ಸ್ನೇಹಮಯಿ ಕೃಷ್ಣ ಪರ ವಕೀಲ ರಾಘವನ್ ಅವರು ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಸಮರ್ಥಿಸಿ ವಾದ ಮಂಡಿಸುತ್ತಾ 50:50 ಅನುಪಾತದಡಿ ಅಕ್ರಮವಾಗಿ ನಿವೇಶನ ಮಂಜೂರು ಮಾಡಲಾಗಿದೆ ಎಂಬ ಆರೋಪದ ಮೇರೆಗೆ ಮುಡಾ ಹಿಂದಿನ ಆಯುಕ್ತ ದಿನೇಶ್ ಕುಮಾರ್ ಅವರನ್ನು ರಾಜ್ಯ ಸರ್ಕಾರ ಸೆ.2ರಂದು ಅಮಾನತುಪಡಿಸಿದೆ. ಈ ಮೂಲಕ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ 50:50 ಅನುಪಾತದಡಿ ನಿವೇಶನ ಪಡೆದಿರುವುದೂ ಕೂಡ ಅಕ್ರಮ ಎಂಬುದನ್ನು ಸಿದ್ದರಾಮಯ್ಯ ಸರ್ಕಾರ ಒಪ್ಪಿಕೊಂಡಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ನಾಗಪ್ರಸನ್ನ ಅವರ ಮುಂದೆ ಪ್ರಸ್ತಾಪಿಸಿದರು.

ತಕ್ಷಣವೇ ಮಧ್ಯ ಪ್ರವೇಶಿಸಿದ ಸಿದ್ದರಾಮಯ್ಯ ಪರ ವಕೀಲ ರವಿವರ್ಮ ಕುಮಾರ್ ಅವರು, ಈ ಪ್ರಕರಣಕ್ಕೂ ದಿನೇಶ್ ಕುಮಾರ್ ಅಮಾನತಿಗೂ ಯಾವುದೇ ಸಂಬಂಧವಿಲ್ಲ. ಕೆಲವು ಕಾರಣಗಳಿಂದಾಗಿ ಅವರನ್ನು ಅಮಾನತುಪಡಿಸಿದ್ದು ನಿಜ. ಈಗ ಪ್ರಕರಣದಲ್ಲಿ ಅವರ ಪಾತ್ರ ಏನೂ ಇಲ್ಲ ಎಂಬುದು ಸರ್ಕಾರಕ್ಕೆ ಮನವರಿಕೆ ಆಗಿದ್ದರಿಂದ ಅವರ ಅಮಾನತು ಆದೇಶವನ್ನು ಹಿಂಪಡೆಯಲಾಗಿದೆ ಎಂದರು. ಅವರಿಗೆ ಧ್ವನಿಗೂಡಿಸಿದ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರೂ ಕೂಡ ದಿನೇಶ್ ಕುಮಾರ್ ಅಮಾನತು ಆದೇಶವನ್ನು ಹಿಂಪಡೆದಿರುವುದನ್ನು ಖಚಿತಪಡಿಸಿದ್ದಲ್ಲದೇ ಈ ಪ್ರಕರಣಕ್ಕೂ ಅವರ ಅಮಾನತಿಗೂ ಸಂಬಂಧವಿಲ್ಲ ಎಂದು ಸಮರ್ಥಿಸಿಕೊಂಡರು.

ಅಮಾನತು ಆದೇಶ ಹಿಂಪಡೆದಿರುವ ಬಗ್ಗೆ ಸಂಬಂಧಪಟ್ಟವರಿಗೆ ಮಾಹಿತಿ ಒದಗಿಸಲಾಗಿದೆಯೇ? ಎಂದು ನ್ಯಾಯಮೂರ್ತಿ ನಾಗಪ್ರಸನ್ನ ಅವರು ಪ್ರಶ್ನಿಸಿದಾಗ ಶಶಿಕಿರಣ್ ಶೆಟ್ಟಿ, ಯಾರಿಗೆ ಮಾಹಿತಿ ನೀಡಬೇಕೋ ಅವರಿಗೆ ನೀಡಲಾಗಿದೆ ಎಂದು ಉತ್ತರಿಸಿದರು. ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ತಮ್ಮ ಅಂತಿಮ ವಾದ ಮುಂದುವರೆಸಿದರು.

ಮುಡಾ ಹಿಂದಿನ ಆಯುಕ್ತ ದಿನೇಶ್ ಕುಮಾರ್ ಅವರ ಅಮಾನತು ಆದೇಶದಲ್ಲಿ ಸರ್ಕಾರ 50:50 ಅನುಪಾತದಡಿ ಅಕ್ರಮವಾಗಿ ನಿವೇಶನ ಮಂಜೂರು ಮಾಡಲಾಗಿದೆ ಎಂಬುದನ್ನು ಸ್ಪಷ್ಟವಾಗಿ ಉಲ್ಲೇಖಿಸಿತ್ತು. ಈ ಆದೇಶ ವಿಪಕ್ಷಗಳಿಗೆ ಪ್ರಬಲ ಅಸ್ತ್ರವಾಗಿ ದೊರೆತಿದ್ದರಿಂದ ಸರ್ಕಾರ ಉತ್ತರಿಸಲಾಗದೇ ತೀವ್ರ ಮುಜುಗರಕ್ಕೆ ಒಳಗಾಗಿತ್ತು. ಅದೇ ವೇಳೆ ದಿನೇಶ್ ಕುಮಾರ್ ಅಮಾನತು ಆದೇಶವೇ ಮುಖ್ಯಮಂತ್ರಿಗಳ ಪತ್ನಿ ಶ್ರೀಮತಿ ಪಾರ್ವತಿ ಅವರು 50:50 ಅನುಪಾತದಡಿ ನಿವೇಶನ ಪಡೆದಿರುವುದು ಅಕ್ರಮ ಎಂದು ಹೈಕೋರ್ಟ್‌ನಲ್ಲಿ ಪ್ರತಿವಾದಿಗಳ ಪರ ವಕೀಲರು ಅಸ್ತ್ರವಾಗಿ ಬಳಸಬಹುದು ಎಂಬುದು ಮನವರಿಕೆಯಾದ ನಂತರ ಸರ್ಕಾರ ದಿನೇಶ್ ಕುಮಾರ್ ಅಮಾನತು ಆದೇಶವನ್ನು ಗುಟ್ಟಾಗಿಯೇ ಹಿಂಪಡೆದಿತ್ತು. ಸರ್ಕಾರದ ನಿರೀಕ್ಷೆಯಂತೆ ಸ್ನೇಹಮಯಿ ಕೃಷ್ಣ ಪರ ವಕೀಲ ರಾಘವನ್ ಅವರು ಈ ಅಮಾನತು ಆದೇಶವನ್ನು ಅಸ್ತ್ರವಾಗಿ ಪ್ರಯೋಗಿಸಿದಾಗ ಸಿದ್ದರಾಮಯ್ಯ ಪರ ವಕೀಲರು ಮತ್ತು ಅಡ್ವೋಕೇಟ್ ಜನರಲ್ ಅವರುಗಳು ದಿನೇಶ್ ಕುಮಾರ್ ಅಮಾನತಿಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ. ಅವರ ಅಮಾನತು ಆದೇಶ ಹಿಂಪಡೆಯಲಾಗಿದೆ ಎಂಬ ವಿಚಾರವನ್ನು ಹೈಕೋರ್ಟ್‌ನಲ್ಲಿ ದಾಖಲಿಸಿದ್ದಾರೆ ಎಂದು ಕಾನೂನು ಪಂಡಿತರು ವಿಶ್ಲೇಷಿಸಿದ್ದಾರೆ.

ವರ್ಗಾವಣೆಗೊಂಡ ಕಂದಾಯ ಇಲಾಖೆ ಸಿಬ್ಬಂದಿಗೆ ಸನ್ಮಾನ

ಮೈಸೂರು, ಸೆ.13(ಎಂಟಿವೈ)– ನೌಕರರು ತಮ್ಮ ವೃತ್ತಿಯನ್ನು ಗೌರವಿಸಿ, ಬದ್ಧತೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಭೂದಾಖಲೆಗಳ ಸಹಾಯಕ ನಿರ್ದೇಶಕ ಹೆಚ್.ಮಂಜುನಾಥ್ ಸಲಹೆ ನೀಡಿದ್ದಾರೆ.

ಮೈಸೂರಿನ ನಜರ್‌ಬಾದ್‌ನ ಮಿನಿ ವಿಧಾನಸೌಧದ ಸಭಾಂಗಣದಲ್ಲಿ ವರ್ಗಾವಣೆಗೊಂಡ ಸಿಬ್ಬಂದಿ ಸನ್ಮಾನಿಸಿ, ಮಾತನಾಡಿದ ಅವರು, ಜನಸಾಮಾನ್ಯರ ನೋವಿಗೆ ಸ್ಪಂದಿಸಿ, ಅವರಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿ, ಇಲಾಖೆಗೆ ಒಳ್ಳೆ ಹೆಸರು ಬರುವಂತೆ ಕರ್ತವ್ಯ ನಿರ್ವಹಿಸಬೇಕು ಎಂದರು.

ಇದೇ ವೇಳೆ ಮೈಸೂರಿಂದ ವರ್ಗಾವಣೆಗೊಂಡ ಇಲಾಖೆಯ ಅಧೀಕ್ಷಕ ಕೆ.ಬಿ.ಸಿದ್ದಯ್ಯ, ಪರ್ಯಾವೇಕ್ಷಕರಾದ ನಂಜುಂಡೇಗೌಡ, ಭೂಮಾಪಕರಾದ ನಾಗಭೂಷಣ್.ಕೆ.ಬಿ, ರವಿ.ಎನ್.ಎಂ, ವೆಂಕಟೇಶ್.ಬಿ.ಕೆ ಅವರನ್ನು ಸನ್ಮಾನಿಸಲಾಯಿತು.



ಮೈಸೂರಿನ ಮಿನಿ ವಿಧಾನಸೌಧ ಸಭಾಂಗಣದಲ್ಲಿ ವರ್ಗಾವಣೆಗೊಂಡ ಭೂಮಾಪನ ಇಲಾಖೆಯ ಸಿಬ್ಬಂದಿಗೆ ಸನ್ಮಾನಿಸಿ, ಬೀಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಅಧೀಕ್ಷಕ ನಾಗೇಶ್, ಪರ್ಯಾವೇಕ್ಷಕರದಾರ ಬೀರೇಗೌಡ, ನಾಗರಾಜು, ಸ್ವಾಮಿ, ಕೀರ್ತಿಕುಮಾರ್, ಜಿಲ್ಲಾಧ್ಯಕ್ಷ ಜಯಪ್ಪ, ಭೂಮಾಪಕರಾದ ಎಂ.ಕೆ.ಪ್ರಕಾಶ್, ಕಂಚಿನಕೆರೆ ದೇವರಾಜು, ಶಾಂತಮಲ್ಲಪ್ಪ, ಮಲ್ಲೇಶ್, ಪ್ರದೀಪ್‌ಕುಮಾರ್, ರೂಪ, ಜಯಪಾಲ್, ಕಂಚೀರಾಯ, ರಾಘವೇಂದ್ರಸ್ವಾಮಿ, ಲೋಕೇಶ್, ನಾಗೇಂದ್ರ ಕುಮಾರ್, ಜಗ್ಗು, ದಿನಕರ್, ಗೋಪಾಲಕೃಷ್ಣ ನವೀನ್‌ಕುಮಾರ್, ಶಾಂತರಾಜು, ಚೇತನ್ ಇತರರು ಉಪಸ್ಥಿತರಿದ್ದರು.

ಆದರ್ಶ್‌ಗೆ ಪಿಹೆಚ್.ಡಿ ಪದವಿ

ಮೈಸೂರು, ಸೆ.13–ವಿದ್ಯಾವಿಕಾಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರಭಾರ ಮುಖ್ಯಸ್ಥ ಹಾಗೂ ಸಹಾಯಕ ಪ್ರಾಧ್ಯಾಪಕ ಡಾ.ಎಸ್.ಆದರ್ಶ್ ಇದೇ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ.ಎಂ.ಎನ್.ಶೇಷಪ್ರಕಾಶ್ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಮಂಡಿಸಿದ್ದ 'ಸಿಂಪಲ್ & ಅಕ್ಯೂರೇಟ್ ಫ್ಲೋ ಮೆಸರಿಂಗ್ ಡಿವೈಸಸ್ ಇನ್ ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಫೀಲ್ಡ್' ಸಂಶೋಧನಾ ಮಹಾಪ್ರಬಂಧವನ್ನು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.



ಪುಂಡರ ನಿಯಂತ್ರಿಸದಿದ್ದರೆ ನಾವೂ ಪೆಟ್ರೋಲ್ ಬಾಂಬ್, ತಲ್ವಾರ್ ಹಿಡಿಯಬೇಕಾಗುತ್ತದೆ

● ಸರ್ಕಾರಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಎಚ್ಚರಿಕೆ ● ನಮ್ಮ ರಕ್ಷಣೆ ನಾವೇ ಮಾಡಿಕೊಳ್ಳಬೇಕಾಗುತ್ತದೆ ● ಕಾನೂನು ಸುವ್ಯವಸ್ಥೆ ಹದಗೆಟ್ಟರೆ ಸರ್ಕಾರ ಹೊಣೆ ● ರಾಜ್ಯದಲ್ಲಿರುವುದು ತಾಲಿಬಾನ್ ಸಂಸ್ಕೃತಿ ಸರ್ಕಾರ ● ಸಿದ್ದರಾಮಯ್ಯಗೆ ವಾಲ್ಮೀಕಿ ಹಗರಣದ ಉರುಳು



ಮೈಸೂರು, ಸೆ.13(ಬಿಎಲ್‌ಯು)– ಪುಂಡರ ಮೇಲೆ ಸರ್ಕಾರ ನಿಯಂತ್ರಣ ಹೇರದಿದ್ದರೆ ರಾಜ್ಯದ ಬೇರೆ ಕಡೆ ನಡೆಯುವ ಗಣೇಶ ಮೆರವಣಿಗೆಯಲ್ಲಿ ನಾವು ಕೂಡ ಪೆಟ್ರೋಲ್ ಬಾಂಬ್ ಹಾಗೂ ತಲ್ವಾರ್ ಹಿಡಿದು ನಮ್ಮ ರಕ್ಷಣೆಯನ್ನು ನಾವೇ ಮಾಡಿಕೊಳ್ಳಬೇಕಾಗುತ್ತದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಎಚ್ಚರಿಸಿದ್ದಾರೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ನಾಗಮಂಗಲ ಘರ್ಷಣೆ ತಡೆಯಲು ವಿಫಲವಾಗಿರುವ ಸರ್ಕಾರದ ವಿರುದ್ಧ ಕಿಡಿಕಾರಿದರು.

ಸರ್ಕಾರ ಮೊದಲು ಒಂದು ಸಮುದಾಯದ ಪುಂಡರ ಕೈಯ್ಯಲ್ಲಿರುವ ಪೆಟ್ರೋಲ್ ಬಾಂಬ್ ಹಾಗೂ ತಲ್ವಾರ್ ಅನ್ನು ಕಿತ್ತುಕೊಳ್ಳಬೇಕು. ಈ ಮೂಲಕ ಅವರ ಮೇಲೆ ನಿಯಂತ್ರಣ ಹೇರಬೇಕು ಎಂದು ಆಗ್ರಹಿಸಿದರು.

ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ಮುಂದೆ ಅದ್ಧೂರಿ ಗಣೇಶ ಮೆರವಣಿಗೆ ನಡೆಯಲಿದೆ. ಅಷ್ಟರಲ್ಲಿ ಸರ್ಕಾರ ಪುಂಡರ ಬಳಿ ಇರುವ ಪೆಟ್ರೋಲ್ ಬಾಂಬ್ ಹಾಗೂ ತಲ್ವಾರ್ ಕಿತ್ತುಕೊಳ್ಳಬೇಕು. ಇಲ್ಲದಿದ್ದರೆ ನಾವು ಕೂಡ ಪೆಟ್ರೋಲ್ ಬಾಂಬ್ ಹಾಗೂ ತಲ್ವಾರ್ ಹಿಡಿದು ನಮ್ಮ ರಕ್ಷಣೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಇದರಿಂದ ಕಾನೂನು ಸುವ್ಯವಸ್ಥೆ ಹದಗೆಟ್ಟರೆ ಅದಕ್ಕೆ ಸರ್ಕಾರವೇ ನೇರ ಹೊಣೆ ಎಂದು ಪ್ರತಾಪ್ ಸಿಂಹ ಪುನರ್ ಎಚ್ಚರಿಸಿದರು.

ನಾಗಮಂಗಲದಲ್ಲಿ ಗಲಾಟೆ ಆರಂಭ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಆದರೆ ಗಲಾಟೆ ಮಾಡಿದವರನ್ನು ಬಿಟ್ಟು ಅಮಾಯಕ ಹಿಂದುಗಳನ್ನು ಬಂಧಿಸುತ್ತಿದ್ದಾರೆ. ಇದು ಹೀಗೆ ಮುಂದುವರೆದರೆ ಮತ್ತೆ ನಾವು ನಾಗಮಂಗಲಕ್ಕೆ ಬರಬೇಕಾಗುತ್ತದೆ, ಪೊಲೀಸ್ ಠಾಣೆಗೂ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಹೇಳಿದರು.

ಪೊಲೀಸರಿಗೆ ಸರ್ಕಾರ ಸ್ವಾತಂತ್ರ್ಯ ನೀಡಿಲ್ಲ ಸರ್ಕಾರದ ತಾಲಿಬಾನ್ ಮನಸ್ಥಿತಿಯಡಿ ಪೊಲೀಸರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರ ಹೇಗೆ ಇದೆಯೊ ಹಾಗೆ ಪೊಲೀಸ್ ಇಲಾಖೆ ಇದೆ ಅದಕ್ಕೆ ಆಳುವವನು ಮೊದಲು ನೆಟ್ಟಗಿರಬೇಕು. ಓಲೈಕೆ ಮಾಡುವವರೇ ಒಂದು ಸಮುದಾಯದ ಓಲೈಕೆಗಿಳಿದರೆ ಇಂತಹ ಸ್ಥಿತಿ ಬರುವುದು ಸಹಜ ಎಂದು ಅಭಿಪ್ರಾಯಪಟ್ಟರು.

ವಾಲ್ಮೀಕಿ ನಿಗಮ ಹಗರಣದಲ್ಲಿ ಸಿದ್ದರಾಮಯ್ಯ ತಲೆದಂಡ ಖಚಿತ

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಂಬಂಧಿಸಿದ ಮುಡಾ ಹಗರಣ ವಿಚಾರ ನ್ಯಾಯಾಲಯದಲ್ಲಿದೆ. ಇದು ಬೇರೆ ವಿಚಾರ, ಆದರೆ ವಾಲ್ಮೀಕಿ ಹಗರಣದಲ್ಲಿ ಮಾತ್ರ ಸಿದ್ದರಾಮಯ್ಯ ತಲೆದಂಡವಾಗುವುದು ನಿಶ್ಚಿತ. ವಾಲ್ಮೀಕಿ ಹಗರಣದಲ್ಲಿ 88 ಕೋಟಿ ಅವ್ಯವಹಾರ ಆಗಿರುವುದು ನಿಜ ಎಂದು ಸ್ವತಃ ಸಿದ್ದರಾಮಯ್ಯ ಅವರೇ ಒಪ್ಪಿಕೊಂಡಿದ್ದಾರೆ. ವಾಲ್ಮೀಕಿ ನಿಗಮದ ಹಣವನ್ನು ಲೋಕಸಭಾ ಚುನಾವಣೆಯಲ್ಲಿ ಹೆಂಡ ಖರೀದಿಗೆ ಬಳಕೆ ಮಾಡಿಕೊಂಡಿದ್ದಾರೆ. ಇದರಿಂದ ಹಣಕಾಸು ಖಾತೆ ಹೊತ್ತಿರುವ ಸಿದ್ದರಾಮಯ್ಯ ಅವರೇ ಹಗರಣದ ಹೊಣೆಗಾರಿಕೆ ಹೊರಬೇಕು. ಈ ಹಿನ್ನೆಲೆಯಲ್ಲಿ ಸದರಿ ಹಗರಣದಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದು ಗ್ಯಾರಂಟಿ ಎಂದು ಭವಿಷ್ಯ ನುಡಿದರು.

ತಮ್ಮ ಮಕ್ಕಳು ಮಹಿಷನಂತೆ ಹುಟ್ಟಲೆಂದು ಪೂಜಿಸಲಿ

ತಮ್ಮ ಮಕ್ಕಳು ಕೂಡ ಮಹಿಷನಂತೆ ಹುಟ್ಟಲಿ ಎಂದು ಮಹಿಷ ದಸರಾ ಆಚರಣೆ ಮಾಡುವವರು ಪೂಜೆ ಮಾಡಲಿ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ವ್ಯಂಗ್ಯ ರೀತಿ ಸಲಹೆ ನೀಡಿದ್ದಾರೆ. ಮಹಿಷ ದಸರಾ ನಡೆಸುವವರು ತಮ್ಮ ಮನೆಯಲ್ಲಿ ಮಹಿಷನ ಆಚರಣೆ ಮಾಡಿಕೊಳ್ಳಲಿ. ಅದು ಬಿಟ್ಟು ಚಾಮುಂಡಿಬೆಟ್ಟದಲ್ಲಿ ನಡೆಸಲು ನಾವು ಬಿಡುವುದಿಲ್ಲ ಎಂದು ಸವಾಲು ಹಾಕಿದರು.

ನಾನು ಈಗ ಸಂಸದನಾಗಿಲ್ಲದಿರಬಹುದು ಆದರೆ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ಅವಮಾನ ಆಗುವುದಕ್ಕೆ, ಚಾಮುಂಡಿಬೆಟ್ಟದಲ್ಲಿ ಮಹಿಷ ದಸರಾ ಆಚರಣೆ ಮಾಡಲು ಬಿಡುವುದಿಲ್ಲ. ಈ ವಿಚಾರದಲ್ಲಿ ಯಾರ ನಿಲುವು ಏನೇ ಇರಬಹುದು, ಆದರೆ ನನ್ನ ನಿಲುವು ಇದೇ ಆಗಿದೆ ಎಂದು ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ಬೆಂಗಳೂರಿನಲ್ಲಿ ನಿನ್ನೆ ಆರ್ ಎಸ್ ಎಸ್ ನಡೆಸಿದ ಸಮನ್ವಯ ಸಭೆಯಲ್ಲಿ ನಾನು ಭಾಗವಹಿಸಿದ್ದೆ ಕೊನೆಯ ಬೆಂಚ್‌ನಲ್ಲಿ ಕುಳಿತು ಅವರು ಹೇಳಿದ್ದನ್ನು ಕೇಳಿಕೊಂಡು ಬಂದಿದ್ದೇನೆ ಎಂದರು. ಆರ್‌ಎಸ್‌ಎಸ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸುವಷ್ಟು ನಾನು ದೊಡ್ಡವನಲ್ಲ. ನನ್ನ ಜ್ಞಾನಾರ್ಜನೆಗೆ ಆರ್‌ಎಸ್‌ಎಸ್ ಪಾತ್ರ ದೊಡ್ಡದಿದೆ ಇದರಿಂದ ನಾನೇಕೆ ಆರ್‌ಎಸ್‌ಎಸ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಲಿ ಎಂದು ಪ್ರತಾಪ್ ಸಿಂಹ ಸ್ಪಷ್ಟನೆ ನೀಡಿದರು.

ದೇಶ – ವಿದೇಶ

ಅತ್ಯಾಚಾರಕ್ಕೆ ಯತ್ನಿಸಿದ ಕಾಮುಕ ವೈದ್ಯನ ಗುಪ್ತಾಂಗ ಕಟ್ ಮಾಡಿದ ನರ್ಸ್!

ಸಮಸ್ತಿಪುರ(ಬಿಹಾರ): ಬಿಹಾರದ ಖಾಸಗಿ ಆಸ್ಪತ್ರೆಯೊಂದರಲ್ಲಿ ನರ್ಸ್ ಮೇಲೆ ಸಾಮೂಹಿಕ ಅತ್ಯಾಚಾರದ ಯತ್ನ ನಡೆದಿದ್ದು, ಇದರಿಂದ ಬಚಾವ್ ಆಗಲು ಆಕೆ ಬ್ಲೇಡ್‌ನಿಂದ ವೈದ್ಯನ ಖಾಸಗಿ ಭಾಗವನ್ನು ಕತ್ತರಿಸಿದ್ದಾಳೆ. ನಂತರ ಆಕೆ ಸ್ಥಳದಿಂದ ತಪ್ಪಿಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಮಸ್ತಿಪುರ ಜಿಲ್ಲೆಯ ಮುಸ್ರಿಘರಾರಿ ಪೊಲೀಸ್ ಠಾಣೆ ವ್ಯಾಪ್ತಿಯ ಗಂಗಾಪುರದಲ್ಲಿ ಘಟನೆ ನಡೆದಿದೆ.

ನರ್ಸ್ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದವರಲ್ಲಿ ಒಬ್ಬ ವೈದ್ಯನಾಗಿದ್ದಾನೆ. ಆರೋಪಿಗಳು ಆರ್‌ಬಿಎಸ್ ಹೆಲ್ತ್ ಕೇರ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದರು. ಡಾಕ್ಟರ್ ಸಂಜಯ್ ಕುಮಾರ್ ಮತ್ತು ಅವರ ಇಬ್ಬರು ಸಹಾಯಕರು ಮದ್ಯದ ಅಮಲಿನಲ್ಲಿ ನರ್ಸ್ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿದ್ದಾರೆ.

ಬ್ಲೇಡ್‌ನಿಂದ ವೈದ್ಯರ ಗುಪ್ತಾಂಗ ಕತ್ತರಿಸಿದ ನಂತರ ಆಕೆ ತನ್ನನ್ನು ಆರೋಪಿಯ ಕಪಿಮುಷ್ಠಿಯಿಂದ ಬಿಡಿಸಿಕೊಂಡು, ಓಡಿ ಹೋಗಿದ್ದಾಳೆ. ನಂತರ ಆಕೆ ಪೊಲೀಸರಿಗೆ ಕರೆ ಮಾಡಿದ್ದಾಳೆ. ನರ್ಸ್‌ನ ಸುರಕ್ಷಿತವಾಗಿ ಕಸ್ಟಡಿಗೆ ತೆಗೆದುಕೊಂಡ ನಂತರ ಮೂವರನ್ನು ಬಂಧಿಸಲಾಗಿದೆ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಸಂಜಯ್ ಕುಮಾರ್ ಪಾಂಡೆ ತಿಳಿಸಿದ್ದಾರೆ.


ಕಳ್ಳಸಾಗಾಣಿಕೆದಾರರಿಗೆ ನೆರವು: ಡ್ರಗ್ ಇನ್ಸ್‌ಪೆಕ್ಟರ್ ಬಂಧನ

ಚಂಡೀಗಢ: ಅಕ್ರಮವಾದ ಔಷಧ ಕಂಪನಿಗಳು ಮತ್ತು ಮೆಡಿಕಲ್ ಸ್ಟೋರ್‌ಗಳಿಗೆ ಸಂಬಂಧಿಸಿದ ಮಾದಕವಸ್ತು ಕಳ್ಳಸಾಗಣೆ ಕಾರ್ಯಾಚರಣೆಯಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಪಂಜಾಬ್ ಪೊಲೀಸ್‌ನ ಮಾದಕ ದ್ರವ್ಯ ನಿಗ್ರಹ ಕಾರ್ಯಪಡೆ (ಎಎನ್‌ಟಿಎಫ್) ಡ್ರಗ್ ಇನ್ಸ್‌ಪೆಕ್ಟರ್ ಶಿಶನ್ ಮಿತ್ತಲ್ ಅವರನ್ನು ಬಂಧಿಸಿದ್ದು, ರೂ. 149 ಕೋಟಿ ನಗದು, 260 ಗ್ರಾಂ ಚಿನ್ನ ಮತ್ತು ವಿದೇಶಿ ಕರೆನ್ಸಿಯನ್ನು ವಶಪಡಿಸಿಕೊಂಡಿದೆ. ಜೊತೆಗೆ 7.09 ಕೋಟಿ ರೂ. ನಗದು ಹೊಂದಿರುವ ಹೊಂದಿರುವ 24 ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ.

ಮಿತ್ತಲ್ ಜೈಲಿನೊಳಗಿರುವ ಕಳ್ಳಸಾಗಣೆದಾರರೊಂದಿಗೆ ಸಮನ್ವಯದಿಂದ ಮಾದಕವಸ್ತು ಹಣವನ್ನು ವರ್ಗಾವಣೆ ಮಾಡಿದ್ದಾರೆ. ಹೊರಗಡೆ ಅವರ ಜಾಲ ಸಕ್ರಿಯವಾಗುವಲ್ಲಿಯೂ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ರಾಜ್ಯ ಪೊಲೀಸರು ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಗಂಭೀರ ಆರ್ಥಿಕ ಅವ್ಯವಹಾರಗಳನ್ನು ಗಮನಿಸಲಾಗಿದ್ದು, 7.09 ಕೋಟಿ ರೂ. ಹಣವಿರುವ 24 ಬ್ಯಾಂಕ್ ಖಾತೆಗಳನ್ನು ಗುರುತಿಸಿ ಅವುಗಳನ್ನು ಸ್ಥಗಿತಗೊಳಿಸಿದೆ. ಇದರ ಜೊತೆಗೆ ಎರಡು ಬ್ಯಾಂಕ್ ಲಾಕರ್‌ಗಳನ್ನು ವಶಪಡಿಸಿಕೊಂಡಿದ್ದು, 1.49 ಕೋಟಿ ರೂ. ನಗದು, 260 ಗ್ರಾಂ ಚಿನ್ನ ಮತ್ತು ವಿದೇಶಿ ಕರೆನ್ಸಿ ವಶಪಡಿಸಿಕೊಂಡಿದೆ.

ಪತಿಯಿಂದಲೇ ಮಿಸ್ ಸ್ವಿಟ್ಜರ್ಲ್ಯಾಂಡ್ ಫೈನಲಿಸ್ಟ್ ಹತ್ಯೆ



ಸ್ವಿಟ್ಜರ್ಲ್ಯಾಂಡ್: ಸ್ವಿಟ್ಜರ್ಲೆಂಡ್‌ನ ಮಾಡೆಲ್ ಹಾಗೂ ಮಿಸ್ ಫೈನಲಿಸ್ಟ್ ಆಗಿದ್ದ ಸುಂದರಿಯೋರ್ವರನ್ನು ಅವರ ಪತಿಯೇ ಕತ್ತು ಹಿಸುಕಿ ಕೊಂದು ಬಳಿಕ ಆರೋಪಿ ಮೃತದೇಹವನ್ನು ತುಂಡು ತುಂಡುಗಳಾಗಿ ಕತ್ತರಿಸಿ ಮಿಕ್ಸಿ ಜಾರಿಗೆ ಹಾಕಿ ರುಬ್ಬಿದ್ದಾನೆ. ಕ್ರಿಸ್ಟಿನಾ ಜೊಕ್ಸಿಮೊವಿಕ್ ಕೊಲೆಯಾದ ಮಹಿಳೆ. 38 ವರ್ಷದ ಈ ಮಾಡೆಲ್ ಕ್ರಿಸ್ಟಿನಾ ಜೊಕ್ಸಿಮೊವಿಕ್ ಅವರ ಶವವು ಸ್ವಿಟ್ಜರ್ಲೆಂಡ್‌ನ ಬಿನ್ನಿನ್ಗೆನ್‌ನಲ್ಲಿರುವ ಅವರ ಮನೆಯ ಲ್ಯಾಂಡ್ರಿ ರೂಮ್‌ನಲ್ಲಿ ಪತ್ತೆಯಾಗಿತ್ತು.

ಪತ್ನಿಯನ್ನು ಕೊಲೆ ಮಾಡಿದ ಪತಿ ಥಾಮಸ್ ಬಳಿಕ ಶವವನ್ನು ಗರಗಸ ಹಾಗೂ ಚಾಕುವಿನಿಂದ ಕತ್ತರಿಸಿ ಸಣ್ಣ ಸಣ್ಣ ತುಂಡು ಗಳನ್ನಾಗಿ ಮಾಡಿದ್ದಾನೆ. ಬಳಿಕ ಮಿಕ್ಸಿ ಜಾರ್‌ಗೆ ಹಾಕಿ ಹುಡಿ ಮಾಡಿ ಅದಕ್ಕೆ ರಾಸಾಯನಿಕ ಸುರಿದು ಶವ ಪೂರ್ತಿಯಾಗಿ ಕರಗಿ ಹೋಗುವಂತೆ ಮಾಡಿದ್ದಾನೆ. ಈ ಪ್ರಕರಣದ ತನಿಖೆ ಆರಂಭಿಸಿದ ಪೊಲೀಸರಿಗೆ ಕ್ರಿಸ್ಟಿನಾ ಅವರನ್ನು ಉಸಿರುಗಟ್ಟಿಸಿ ಹತ್ಯೆ ಮಾಡಲಾಗಿದೆ ಎಂಬುದು ಖಚಿತವಾಗಿತ್ತು. ಆಕೆಯ 41 ವರ್ಷದ ಪತಿ ಥಾಮಸ್‌ನನ್ನು ನಂತರ ಬಂಧಿಸಿ ವಿಚಾರಣೆ ನಡೆಸಿದಾಗ ಆತ ತಾನು ಮಾಡಿದ ತಪ್ಪನ್ನು ಒಪ್ಪಿಕೊಂಡಿದ್ದ. ಹೀಗಾಗಿ ಪೊಲೀಸರು ನ್ಯಾಯಾಲಯಕ್ಕೆ ಆತನ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದ್ದರು.

ಪಾಕಿಸ್ತಾನಕ್ಕೆ ಕ್ಷಿಪಣಿ ತಯಾರಿಸಲು ಸಹಾಯ ಮಾಡಿದ 3 ಚೀನಾ ಕಂಪನಿ ಮೇಲೆ ನಿರ್ಬಂಧ

ನ್ಯೂಯಾರ್ಕ್: ಪಾಕಿಸ್ತಾನದ ಬ್ಯಾಲಿಸ್ಟಿಕ್ ಕ್ಷಿಪಣಿ ಯೋಜನೆಗೆ ಸಹಾಯ ಮಾಡಿದ್ದಕ್ಕಾಗಿ ಅಮೆರಿಕವು ಮೂರು ಚೀನೀ ಮತ್ತು ಒಂದು ಪಾಕಿಸ್ತಾನಿ ಕಂಪನಿ ಹಾಗೂ ಓರ್ವ ಚೀನಾದ ಪ್ರಜೆಯ ಮೇಲೆ ನಿರ್ಬಂಧಗಳನ್ನು ವಿಧಿಸಿದೆ ಎಂದು ವಿದೇಶಾಂಗ ಇಲಾಖೆಯ ವಕ್ತಾರ ಮ್ಯಾಥ್ಯೂ ಮಿಲ್ಲರ್ ಪ್ರಕಟಿಸಿದ್ದಾರೆ.

ಶಾಹೀನ್–3 ಮತ್ತು ಅಬಾಬೀಲ್ ಕ್ಷಿಪಣಿಗಳಲ್ಲಿ ಬಳಸಲಾಗುವ ದೊಡ್ಡ ವ್ಯಾಸದ ರಾಕೆಟ್ ಮೋಟರ್‌ಗಳನ್ನು ಪರೀಕ್ಷಿಸಲು ಅಗತ್ಯವಾದ ಉಪಕರಣಗಳನ್ನು ಪಡೆಯಲು ಪಾಕಿಸ್ತಾನದ ರಾಷ್ಟ್ರೀಯ ಅಭಿವೃದ್ಧಿ ಸಂಕೀರ್ಣ (ಎನ್‌ಡಿಸಿ)ದೊಂದಿಗೆ ಕೆಲಸ ಮಾಡಿದ್ದಕ್ಕಾಗಿ ಬೀಜಿಂಗ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಆಟೋಮೇಷನ್ ಫಾರ್ ಮೆಷಿನ್ ಬಿಲ್ಡಿಂಗ್ ಇಂಡಸ್ಟ್ರಿ (ಆರ್‌ಐಎಎಂಬಿ) ಸಂಸ್ಥೆಯ ಮೇಲೆ ನಿರ್ಬಂಧ ವಿಧಿಸಲಾಗಿದೆ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಚೀನಾದ ಪ್ರಜೆ ಲುವೊ ಡೊಂಗ್ಮೆ ಮತ್ತು ಪಾಕಿಸ್ತಾನ ಮೂಲದ ಇನ್ನೋವೇಟಿವ್ ಇಕ್ವಿಪ್‌ಮೆಂಟ್ ಕಂಪನಿಗೆ ಸಹ ಇದೇ ಕಾರಣಗಳಿಗಾಗಿ ನಿಷೇಧ ಹೇರಲಾಗಿದೆ ಎಂದು ಅವರು ಹೇಳಿದರು.

ಕೆಮಿಕಲ್ ಫ್ಯಾಕ್ಟರಿಯಲ್ಲಿ ಅನಿಲ ಸೋರಿಕೆ; ಇಡೀ ನಗರಕ್ಕೆ ಹಬ್ಬಿದ ವಿಷಕಾರಿ ಅನಿಲ



ಮುಂಬೈ: ಕೆಮಿಕಲ್ ಫ್ಯಾಕ್ಟರಿಯಲ್ಲಿ ಉಂಟಾದ ಅನಿಲ ಸೋರಿಕೆ ಬಳಿಕ ಇಡೀ ನಗರಕ್ಕೆ ವ್ಯಾಪಿಸಿರುವ ಘಟನೆ ಮಹಾರಾಷ್ಟ್ರದಲ್ಲಿ ನಡೆದಿದೆ. ಮಹಾರಾಷ್ಟ್ರದ ಅಂಬರನಾಥದಲ್ಲಿ ಕೆಮಿಕಲ್ ಕಾರ್ಖಾನೆಯಿಂದ ಅನಿಲ ಸೋರಿಕೆ ಸಂಭವಿಸಿ ಆತಂಕ ಸೃಷ್ಟಿಸಿದೆ. ಕೆಲವೇ ಗಂಟೆಗಳಲ್ಲಿ ವಿಷಕಾರಿ ಅನಿಲ ಇಡೀ ನಗರವನ್ನು ವ್ಯಾಪಿಸಿದ್ದು, ಹಲವು ನಿವಾಸಿಗಳಲ್ಲಿ ಆರೋಗ್ಯ ಏರುಪೇರಾಗಿದೆ ಎಂದು ಹೇಳಲಾಗಿದೆ.

ಅಂಬರನಾಥ್ ನಗರದಲ್ಲಿ ಗ್ಯಾಸ್ ಲೀಕ್‌ನಿಂದಾಗಿ ಕಣ್ಣುಗಳು ಮತ್ತು ಗಂಟಲಿಗೆ ಕಿರಿಕಿರಿಯನ್ನು ಉಂಟುಮಾಡುತ್ತಿದೆ ಎಂದು ನಿವಾಸಿಗಳು ಆರೋಪಿಸಿದ್ದಾರೆ. ಅಲ್ಲದೆ ಇದು 1984ರ ಭೋಪಾಲ್ ಅನಿಲ ದುರಂತದ ನೆನಪುಗಳನ್ನು ಮರಳಿ ತರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಸೋರಿಕೆಯಾಗಿರುವ ವಿಷಾನಿಲ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ತಜ್ಞರೊಂದಿಗೆ ಚರ್ಚೆ ನಡೆಸಲಾಗುತ್ತಿದೆ. ಪರಿಸ್ಥಿತಿಯನ್ನು ನಿಯಂತ್ರಿಸಲು ತಂಡಗಳನ್ನು ಸಹ ಕಳುಹಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಜನರು ಮನೆಯೊಳಗೆ ಇರುವಂತೆ ಅಧಿಕಾರಿಗಳು ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾಫಿ ಬೆಳೆಗೆ ಸ್ಪಂದಿಸುವಂತೆ ಒತ್ತಾಯಿಸಿ ಪ್ರತಿಭಟನೆ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಎದುರು ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ಕಾಫಿ ರೈತರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಮಡಿಕೇರಿ, ಸೆ.13–ಕೊಡಗಿನ ಆರ್ಥಿಕ ಆಧಾರ ಸ್ತಂಭವಾಗಿರುವ ಕಾಫಿ ಕೃಷಿ ಸಂಕಷ್ಟಗಳನ್ನು ಅರಿತು ಸೂಕ್ತ ಸ್ಪಂದನೆ ನೀಡುವಂತೆ ಹಾಗೂ ಸಿ ಮತ್ತು ಡಿ ಜಮೀನನ್ನು ಅರಣ್ಯವೆಂದು ಘೋಷಿಸಿ, ಅಲ್ಲಿನ ಬಡವರನ್ನು ಒಕ್ಕಲೆಬ್ಬಿಸದಂತೆ ಆಗ್ರಹಿಸಿ ಕರ್ನಾಟಕ ಕಾಫಿ ರೈತರ ಸಂಘದ ಕೊಡಗು ಘಟಕದಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಸಂಘದ ಕೊಡಗು ಘಟಕದ ಸಂಚಾಲಕ ಕೆ.ಹೆಚ್. ಹನೀಫ್ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಜಮಾಯಿಸಿ, ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಸಂಘದ ಪದಾಧಿಕಾರಿ ಡಾ.ಇ.ರ.ದುರ್ಗಾ ಪ್ರಸಾದ್ ಮಾತನಾಡಿ, ಕಾಫಿ ಬೆಳೆಗಾರರ ಪ್ರಮುಖ 6 ಬೇಡಿಕೆಗಳನ್ನು ಮುಂದಿಟ್ಟುಕೊಂಡು ಸರ್ಕಾರದ ಗಮನ ಸೆಳೆಯಲು ಹೋರಾಟ ರೂಪಿಸಲಾಗಿದೆ. ಇದಕ್ಕೆ ಸರ್ಕಾರ ಸೂಕ್ತ ಸ್ಪಂದನೆ ನೀಡದಿದ್ದಲ್ಲಿ ಮತ್ತಷ್ಟು ದೊಡ್ಡ ಮಟ್ಟದ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಸಿದರು.

ಅತಿವೃಷ್ಟಿಯಿಂದ ಜಿಲ್ಲೆಯ ಕಾಫಿ, ಕರಿಮೆಣಸು, ಭತ್ತ, ಅಡಕೆ, ಏಲಕ್ಕಿ ಕೃಷಿಗೆ ಅಪಾರ ಹಾನಿ ಸಂಭವಿಸಿದೆ. ಇದರಿಂದ ಇದನ್ನೇ ನಂಬಿರುವ ಸಣ್ಣ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರಸ್ತುತ ಇಂತಹ ಬೆಳೆ ಹಾನಿಗೆ ಅತ್ಯಂತ ಕನಿಷ್ಠ ಪ್ರಮಾಣದ ಪರಿಹಾರ ನೀಡಲಾಗುತ್ತಿದ್ದು, ಸರ್ಕಾರ ಬೆಳೆಗಾರರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿದರು.

ಕಾಫಿ ಬೆಳೆಗಾರರೆಲ್ಲರಿಗೂ ಪ್ರಸ್ತುತ ಉತ್ತಮ ಧಾರಣೆ ಲಭ್ಯವಾಗುತ್ತಿದೆ ಎನ್ನುವ ಭಾವನೆ ಇದೆ. ಆದರೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾಫಿಗೆ ಇರುವ ಉತ್ತಮ ಧಾರಣೆ ಸ್ಥಳೀಯ ಬೆಳೆಗಾರರಿಗೆ ಸಿಗುತ್ತಿಲ್ಲ. ಬಹುತೇಕ ಲಾಭವನ್ನು ವರ್ತಕರು ಮತ್ತು ಮಧ್ಯವರ್ತಿಗಳು ಪಡೆಯುತ್ತಿದ್ದಾರೆ. ಬೆಳೆಗಾರರನ್ನು ಅನ್ಯಾಯದಿಂದ ರಕ್ಷಿಸಬೇಕು. ಪ್ರಸ್ತುತ ಕಾಫಿ, ಅಡಕೆ ಹೊರದೇಶಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಕಳ್ಳ ಸಾಗಣೆಯಾಗುತ್ತಿದ್ದು, ಇದನ್ನು ತಡೆಯಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು. ಜಿಲ್ಲೆಯಲ್ಲಿ ಕಾಡಾನೆ ಹಾವಳಿಯಿಂದ ಕಾಫಿ ಕೃಷಿ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಕಾಫಿ ಫಸಲನ್ನು ರಕ್ಷಿಸಿಕೊಳ್ಳಲಾಗದ ಪರಿಸ್ಥಿತಿ ಹಾಗೂ ಜೀವ ಹಾನಿ ಘಟನೆಗಳು ನಡೆಯುತ್ತಿವೆ. ಇದರಿಂದ ಬೆಳೆಗಾರಿಗೆ ಸೂಕ್ತ ರಕ್ಷಣೆ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ರೈತರ ಸ್ವಾಧೀನದಲ್ಲಿದ್ದು, ಅದರಲ್ಲಿ ಕೃಷಿ ಮಾಡಿಕೊಂಡು ಬರುತ್ತಿರುವ ಸಿ ಮತ್ತು ಡಿ ದರ್ಜೆ ಜಮೀನನ್ನು ಅರಣ್ಯವೆಂದು ಏಕ ಪಕ್ಷೀಯವಾಗಿ ಘೋಷಿಸಿ ಅದನ್ನು ಮೀಸಲು ಅರಣ್ಯವನ್ನಾಗಿ ಪರಿವರ್ತಿಸುವ ಹೆಸರಿನಲ್ಲಿ ರೈತರನ್ನು ಒಕ್ಕಲೆಬ್ಬಿಸುವ ಯೋಜನೆ ಕೈಬಿಡಬೇಕು. ಸರಕಾರಿ ಜಾಗಗಳಲ್ಲಿ ಕೃಷಿ ಮಾಡಿಕೊಂಡು ಬರುತ್ತಿರುವ ಬಡ ರೈತರಿಗೆ 5 ಎಕರೆ ಜಾಗ ನೀಡುವುದರೊಂದಿಗೆ ಆರ್‌ಟಿಸಿ ಒದಗಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು. ನಂತರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಸಂಘದ ಪ್ರಮುಖರಾದ ವಸಂತ ಕುಮಾರ್ ಹೊಸಮನೆ, ನೆಲ್ಲಿಹುದಿಕೇರಿಯ ಉದಯ ಕುಮಾರ್, ಚಿಟ್ಟಿಡ ಹಮೀದ್ ಉಪಸ್ಥಿತರಿದ್ದರು.

ರಾಹುಲ್ ಗಾಂಧಿ ಸದಸ್ಯತ್ವ ರದ್ದುಗೊಳಿಸುವಂತೆ ಆಗ್ರಹಿಸಿ

ಬಿಜೆಪಿ ಎಸ್‌ಸಿ ಮೋರ್ಚಾ ಪ್ರತಿಭಟನೆ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಎದುರು ರಾಹುಲ್ ಗಾಂಧಿ ಸದಸ್ಯತ್ವ ರದ್ದುಗೊಳಿಸುವಂತೆ ಆಗ್ರಹಿಸಿ ಬಿಜೆಪಿ ಎಸ್‌ಸಿ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಸೆ.13–ಮೀಸಲಾತಿ ತೆಗೆಯುತ್ತೇವೆ ಎನ್ನುವ ಸಂವಿಧಾನ ವಿರೋಧಿ ಹೇಳಿಕೆಯನ್ನು ವಿದೇಶದಲ್ಲಿ ನೀಡಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸದಸ್ಯತ್ವ ರದ್ದುಗೊಳಿಸಬೇಕೆಂದು ಆಗ್ರಹಿಸಿ ಜಿಲ್ಲಾ ಬಿಜೆಪಿ ಎಸ್‌ಸಿ ಮೋರ್ಚಾದಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಪಿ.ಎಂ.ರವಿ ಮೊಗೇರ ನೇತೃತ್ವದಲ್ಲಿ ಪಕ್ಷದ ಪ್ರಮುಖರು, ಕಾರ್ಯಕರ್ತರು ಸಮಾವೇಶಗೊಂಡು, ರಾಹುಲ್ ಗಾಂಧಿ ವಿರುದ್ಧ ಘೋಷಣೆ ಕೂಗಿದರು.

ಪಿ.ಎಂ.ರವಿ ಮಾತನಾಡಿ, ಅಮೆರಿಕದ ವಿಶ್ವವಿದ್ಯಾನಿಲಯದಲ್ಲಿ ನಡೆದ ಸಂವಾದದಲ್ಲಿ ಭಾರತದಲ್ಲಿ ಮೀಸಲಾತಿ ರದ್ದುಪಡಿಸುವ ಕುರಿತು ರಾಹುಲ್ ಗಾಂಧಿ ನೀಡಿರುವ ಹೇಳಿಕೆ ಖಂಡನೀಯ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಮೀಸಲಾತಿ ರದ್ದು ಮಾಡಲು ಬಯಸುತ್ತದೆ ಎಂದು ಹೇಳುವ ಮೂಲಕ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಎಚ್ಚರಿಕೆ ನೀಡಿದಂತಾಗಿದೆ ಎಂದು ಆರೋಪಿಸಿದರು.

ದೇಶದಲ್ಲಿ ಸುದೀರ್ಘ ಕಾಲ ಆಡಳಿತ ನಡೆಸಿದ ಕಾಂಗ್ರೆಸ್, ಆ ಅವಧಿಯುದ್ದಕ್ಕೂ ಶೋಷಿತ ಸಮುದಾಯಗಳನ್ನು ತೇಜೋವಧೆ ಮಾಡುತ್ತಲೇ ಬಂದಿದೆ. ಪರಿಶಿಷ್ಟರಿಗೆ ತನ್ನ ಆಡಳಿತದ ಅವಧಿಯಲ್ಲಿ ಸೂಕ್ತ ಸ್ಥಾನಮಾನ ನೀಡಿಲ್ಲ. ಅದೇ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ ಶೋಷಿತ ಸಮುದಾಯಗಳನ್ನು ಗುರುತಿಸಿ ಉನ್ನತ ಹುದ್ದೆ ನೀಡಿದೆ. ಅಂಬೇಡ್ಕರ್ ಅವರು ಬರೆದ ಸಂವಿಧಾನದಿಂದ ಪರಿಶಿಷ್ಟ ಸಮುದಾಯಗಳು ಸಮಾಜದಲ್ಲಿ ಉನ್ನತಿ ಕಾಣಲು ಸಾಧ್ಯವಾಗಿದೆ. ಇದೀಗ ಮೀಸಲಾತಿ ತೆಗೆದುಹಾಕುವ ಮಾತನಾಡಿರುವ ರಾಹುಲ್ ಗಾಂಧಿಯನ್ನು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳಿಸಬೇಕೆಂದು ಆಗ್ರಹಿಸಿದರು.

ಗಡಿಪಾರಿಗೆ ಒತ್ತಾಯ: ಎಂಎಲ್‌ಸಿ ಸುಜಾ ಕುಶಾಲಪ್ಪ ಮಾತನಾಡಿ, ವಿದೇಶಗಳಲ್ಲಿ ನಮ್ಮ ದೇಶದ ಆಗು–ಹೋಗು ಹಾಗೂ ಆಂತರಿಕ ವಿಚಾರಗಳನ್ನು ಪ್ರಶ್ನಿಸುವ ರಾಹುಲ್ ಗಾಂಧಿಗೆ ಇದೇ ವಿಚಾರಗಳನ್ನು ಸಂಸತ್‌ನಲ್ಲಿ ಚರ್ಚಿಸಲು ಅವಕಾಶವಿದೆ. ಆದರೆ, ಈ ಕೆಲಸ ಮಾಡದೆ ಮನಬಂದಂತೆ ಮಾತನಾಡುತ್ತಿರುವ ರಾಹುಲ್ ಗಾಂಧಿ, ನಮ್ಮ ವಿರೋಧಿ ದೇಶ ಚೀನಾವನ್ನು ಹೊಗಳುವ ಕೆಲಸಕ್ಕೆ ಮುಂದಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರನ್ನು ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು. ನಂತರ ಪ್ರತಿಭಟನಾಕಾರರು ರಾಹುಲ್ ಗಾಂಧಿ ಸದಸ್ಯತ್ವ ರದ್ದುಗೊಳಿಸಬೇಕೆಂದು ಒತ್ತಾಯಿಸಿ ಜಿಲ್ಲಾಡಳಿತದ ಮೂಲಕ ಲೋಕಸಭಾ ಸ್ಪೀಕರ್‌ಗೆ ಮನವಿ ನೀಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಕ್ತಾರ ಬಿ.ಕೆ.ಅರುಣ್ ಕುಮಾರ್, ಉಪಾಧ್ಯಕ್ಷ ಮನು ಮಂಜುನಾಥ್, ನಗರಾಧ್ಯಕ್ಷ ಉಮೇಶ್ ಸುಬ್ರಮಣಿ, ಮಾಜಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ, ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ಅಪ್ರು ರವೀಂದ್ರ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ, ಸುವಿನ್ ಗಣಪತಿ, ಆರ್.ಕೆ.ಚಂದ್ರು, ಕನ್ನಿಕೆ, ಸಬಿತಾ, ಮನು ಮಂಜುನಾಥ್, ಬೊಳ್ಳಜಿರ ಅಯ್ಯಪ್ಪ, ಕಾಂಗೀರ ಸತೀಶ್, ವಿ.ಕೆ.ಲೋಕೇಶ್, ಉಮಾ ಪ್ರಭು, ಉಮೇಶ್ ಸುಬ್ರಮಣಿ ಉಪಸ್ಥಿತರಿದ್ದರು.

ಸೆ.20ಕ್ಕೆ ಕೊಡಗು ಜಿಲ್ಲಾ ಮಾರಾಟ ಮಹಾಮಂಡಳ ವಾರ್ಷಿಕ ಸಭೆ


ಸುದ್ದಿಗೋಷ್ಠಿಯಲ್ಲಿ ಕೊಡಗು ಜಿಲ್ಲಾ ಮಾರಾಟ ಮಹಾಮಂಡಳ ಅಧ್ಯಕ್ಷ ವಾಟೇರಿರ ಬೋಪಣ್ಣ ಮಾತನಾಡಿದರು.

ವಿರಾಜಪೇಟೆ, ಸೆ.13– ಕೊಡಗು ಜಿಲ್ಲಾ ಮಾರಾಟ ಮಹಾಮಂಡಳ ವಾರ್ಷಿಕ ಸಭೆ ಸೆ.20ರಂದು ಪಟ್ಟಣದ ಮಹಿಳಾ ಸಮಾಜ ಸಭಾಂಗಣದಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ವಾಟೇರಿರ ಬೋಪಣ್ಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾಮಂಡಳ 81ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದೆ. ಕಂಜಿತಂಡ ಕೆ.ಕುಶಾಲಪ್ಪ ಸ್ಥಾಪಕ ಅಧ್ಯಕ್ಷರಾಗಿದ್ದು, ಜಿಲ್ಲೆಯಾದ್ಯಂತ ಕಾರ್ಯವ್ಯಾಪ್ತಿ ಹೊಂದಿ ಪ್ರಸ್ತುತ 2938 ಸದಸ್ಯರಿದ್ದಾರೆ. 58.90 ಲಕ್ಷ ಪಾಲು ಬಂಡವಾಳ ಹೊಂದಿದೆ. 2023–24ನೇ ಸಾಲಿನಲ್ಲಿ 12.76 ಕೋಟಿ ರೂ. ವಾರ್ಷಿಕ ವಹಿವಾಟು ನಡೆಸಿದ್ದು, ವ್ಯಾಪಾರದಲ್ಲಿ 85.31 ಲಕ್ಷ ಲಾಭ ಗಳಿಸಿದೆ. ಕಾಯ್ದಿಸಿದ ಬಾಪ್ತು ಕಳೆದು 25.27 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ. ಸದಸ್ಯರಿಗೆ ಶೇ.15ರಂತೆ ಲಾಭಾಂಶ ನೀಡಲು ನಿರ್ಧರಿಸಲಾಗಿದೆ ಎಂದು ಮಾಹಿತಿ ನೀಡಿದರು.

ವಿರಾಜಪೇಟೆ, ಗೋಣಿಕೊಪ್ಪ, ಸಿದ್ದಾಪುರ, ಶ್ರೀಮಂಗಲ ಮತ್ತು ಆರ್ಜಿ ಗ್ರಾಮದಲ್ಲಿ ಮಹಾಮಂಡಳ ಶಾಖೆಗಳನ್ನು ಹೊಂದಿದ್ದು, ಸದಸ್ಯರು ಮತ್ತು ಸದಸ್ಯೇತರರಿಗೆ ಗ್ರಾಹಕ ವಸ್ತು, ರಸಗೊಬ್ಬರ, ಕ್ರಿಮಿನಾಶಕ, ಕೃಷಿ ಉಪಕರಣ ಮತ್ತು ಕೋವಿ ತೋಟಾಗಳ ಮೂಲಕ ವಾರ್ಷಿಕ ವಹಿವಾಟು ನಡೆಸುತ್ತಿದೆ. ವ್ಯಾಪಾರಾಭಿವೃದ್ಧಿಯೇ ಸಂಘದ ಧ್ಯೇಯೋದ್ದೇಶವಾಗಿದೆ. ವಿರಾಜಪೇಟೆ ಮುಖ್ಯ ರಸ್ತೆಯ ಖಾಲಿ ನಿವೇಶನದಲ್ಲಿ 5 ಕೋಟಿ ರೂ. ಹಾಗೂ ಆರ್ಜಿ ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸುವುದಾಗಿ ತಿಳಿಸಿದರು.

ಉಪಾಧ್ಯಕ್ಷ ತಾತಂಡ ಕಾವೇರಪ್ಪ ಮಾತನಾಡಿ, ಮಹಾಮಂಡಳ ಬ್ಯಾಂಕಿಂಗ್ ವಿಭಾಗದಲ್ಲಿ ಗ್ರಾಹಕರಿಗೆ ಕಡಿಮೆ ಬಡ್ಡಿ ದರದಲ್ಲಿ ಆಭರಣ ಸಾಲ ನೀಡಿದೆ. ಜೊತೆಗೆ ನಿಖರ ಠೇವಣಿ ಮೇಲೆ ಆಕರ್ಷಕ ಬಡ್ಡಿ ನೀಡಲಾಗುತ್ತಿದೆ. ವಿರಾಜಪೇಟೆಯಲ್ಲಿ ಆಧುನಿಕ ಅಕ್ಕಿಗಿರಣಿ ಹೊಂದಿದ್ದು, ಗಿರಣಿಯಲ್ಲಿ ಸದಸ್ಯರಿಗೆ ಭತ್ತ ದಾಸ್ತಾನಿಗೆ ಗೋದಾಮು ವ್ಯವಸ್ಥೆ ಮಾಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಿರ್ದೇಶಕರಾದ ಕಂಜಿತಂಡ ಮಂದಣ್ಣ, ಮುಲ್ಲೇಂಗಡ ಕುಟ್ಟಪ್ಪ, ಮಾಚಿಮಂಡ ವಸಂತ್, ಕೊಕ್ಕಂಡ ಬಿದ್ದಪ್ಪ, ಚೇನಂಡ ಗಿರೀಶ್ ಪೂಣಚ್ಚ, ಮೂಕೊಂಡ ಶಶಿ ಸುಬ್ರಮಣಿ, ಕುಂಬೇರ ಮನುಕುಮಾರ್, ಅಂಜಪರವಂಡ ಮಂದಣ್ಣ, ಕೂತಂಡ ಸಚಿನ್ ಕುಟ್ಟಯ್ಯ, ಪುಲಿಯಂಡ ಪೊನ್ನಣ್ಣ, ಕೆ.ಆರ್.ವಿನೋದ್, ಕರ್ತಚ್ಚಿರ ಲತಾ, ಮಟ್ಟಿಚಂಡ ವೀಣಾ ಮಹೇಶ್, ಹೆಚ್.ಎನ್.ಶೇಖರ್, ಹೆಚ್.ಜಿ.ಆನಂದ, ಸಹ ಕಾರ್ಯದರ್ಶಿ ಕೆ.ಎಂ.ಚಂದ್ರಕಾಂತ್ ಉಪಸ್ಥಿತರಿದ್ದರು.

ದಸರಾ ಯಶಸ್ವಿಗೆ ಉಪ ಸಮಿತಿಗಳ ನಿರ್ವಹಣೆ ಮುಖ್ಯ


ಗೋಣಿಕೊಪ್ಪ ದಸರಾ ಉಪ ಸಮಿತಿ ಪ್ರಮುಖರ ಸಭೆಯಲ್ಲಿ ಕಾವೇರಿ ದಸರಾ ಸಮಿತಿ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ ಮಾತನಾಡಿದರು.

ಗೋಣಿಕೊಪ್ಪ, ಸೆ.13–ಗೋಣಿಕೊಪ್ಪ ದಸರಾ ಯಶಸ್ವಿಗೆ ಉಪ ಸಮಿತಿಗಳ ನಿರ್ವಹಣೆ ಮುಖ್ಯ ಎಂದು ಕಾವೇರಿ ದಸರಾ ಸಮಿತಿ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ ಹೇಳಿದರು.

ಇಲ್ಲಿನ ಗ್ರಾಮ ಪಂಚಾಯಿತಿ ಹಳೇ ಕಟ್ಟಡ ಸಭಾಂಗಣದಲ್ಲಿ ಆಯೋಜಿಸಿದ್ದ ದಸರಾ ಉಪ ಸಮಿತಿಗಳ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ಆರಾಧನೆಯೊಂದಿಗೆ ಆಚರಿಸುವ ದಸರಾ ಜನೋತ್ಸವ ಯಶಸ್ವಿಗೆ ಎಲ್ಲರ ಸಹಕಾರ ಅಗತ್ಯ. ಈಗಾಗಲೇ ಬಹುತೇಕ ಸಮಿತಿಗಳ ರಚನೆಯಾಗಿದ್ದು, ತಂಡವಾಗಿ ಕಾರ್ಯಪ್ರವೃತ್ತವಾಗಿದೆ. ಉಳಿದ ಸಮಿತಿಗಳಿಗೆ ಸಂಚಾಲಕರ ಆಯ್ಕೆ ಮಾಡಲಾಗುವುದು. ತಂಡವಾಗಿ ದಸರಾ ಯಶಸ್ವಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಕಾವೇರಿ ದಸರಾ ಸಮಿತಿ ಪ್ರಧಾನ ಕಾರ್ಯದರ್ಶಿ ಕಂದಾ ದೇವಯ್ಯ, ಉಪಾಧ್ಯಕ್ಷ ಶಿವಾಜಿ, ಸ್ವಾಗತ ಸಮಿತಿ ಸಂಚಾಲಕ ಶರತ್‌ಕಾಂತ್, ಮಹಿಳಾ ದಸರಾ ಅಧ್ಯಕ್ಷೆ ಮಂಜುಳಾ, ಖಜಾಂಚಿ ಚೆಪ್ಪುಡೀರ ದ್ಯಾನ್ ಸುಬ್ಬಯ್ಯ, ಸಲಹೆಗಾರ ಬಿ.ಎನ್.ಪ್ರಕಾಶ್, ಪೂಜಾ ಸಮಿತಿ, ಸಾಂಸ್ಕೃತಿಕ, ಪ್ರಚಾರ, ಆಹಾರ, ಸ್ವಚ್ಛತೆ, ವೇದಿಕೆ ಸಮಿತಿ ಸೇರಿದಂತೆ ವಿವಿಧ ಸಮಿತಿಗಳ ಪ್ರಮುಖರು ಭಾಗವಹಿಸಿದ್ದರು.

ಸೆ.16ರಂದು ಹುದಿಕೇರಿಯಲ್ಲಿ ಜನಜಾಗೃತಿ


ಎನ್.ಯು.ನಾಚಪ್ಪ

ಮಡಿಕೇರಿ, ಸೆ.13–ಕೊಡಗು ಜಿಲ್ಲೆಯ ವಿವಿಧೆಡೆ ನಡೆಯುತ್ತಿರುವ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಸ್ಥಗಿತಗೊಳಿಸುವಂತೆ ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಸೆ.16ರಂದು ಬೆಳಗ್ಗೆ 10.30ಕ್ಕೆ ಹುದಿಕೇರಿಯಲ್ಲಿ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಜನಜಾಗೃತಿ ಕಾರ್ಯಕ್ರಮದಲ್ಲಿ ಮಾನವ ಸರಪಳಿ ನಿರ್ಮಿಸಿ ಹಕ್ಕೊತ್ತಾಯ ಮಂಡಿಸಲಾಗುವುದು. ಸರ್ವ ಕೊಡವರು ಪಾಲ್ಗೊಳ್ಳುವ ಮೂಲಕ ಬೃಹತ್ ಭೂ ಪರಿವರ್ತನೆ ವಿರುದ್ಧ ಸಿಎನ್‌ಸಿ ನಡೆಸುತ್ತಿರುವ ಹೋರಾಟಕ್ಕೆ ಕೈಜೋಡಿಸಬೇಕೆಂದು ಮನವಿ ಮಾಡಿದ್ದಾರೆ.

ವಿವಿಧ ಅಭಿವೃದ್ಧಿಗೆ 20 ಲಕ್ಷ ಅನುದಾನ


ಚಾಮರಾಜನಗರದಲ್ಲಿ ಜಗಜೀವನ ರಾಂ ಭವನದ ಕಾಮಗಾರಿಗೆ ಅನುದಾನ ನೀಡುವಂತೆ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರಿಗೆ ಡಾ.ಬಾಬು ಜಗಜೀವನರಾಂ ಸಂಘಗಳ ಒಕ್ಕೂಟದಿಂದ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ, ಸೆ.13–ಜಿಲ್ಲೆಯ ವಿವಿಧ ಅಭಿವೃದ್ಧಿಗೆ ವಿಧಾನಪರಿಷತ್ ಅನುದಾನದಡಿ 20 ಲಕ್ಷ ರೂ. ಬಿಡುಗಡೆಯಾಗಿದ್ದು, ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧನಾಗಿರುವುದಾಗಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ತಮ್ಮ ಕಚೇರಿಯಲ್ಲಿ ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸಿ, ಜಿಲ್ಲೆಯ ಸಮಸ್ಯೆಗಳ ಕುರಿತು ಮುಖಂಡರೊಂದಿಗೆ ಚರ್ಚಿಸಿ ಮಾತನಾಡಿದ ಅವರು, ಇನ್ನೂ 30 ಲಕ್ಷ ರೂ. ಅನುಮೋದನೆಗೆ ಬಾಕಿ ಇದೆ. ನಾನು ಮೈಸೂರು ಮತ್ತು ಚಾಮರಾಜನಗರ ವಿಧಾನಪರಿಷತ್ ಸದಸ್ಯನಾಗಿ ಎರಡು ಜಿಲ್ಲೆಗಳ ಅಭಿವೃದ್ಧಿಗೆ ಒತ್ತು ನೀಡುವ ಜೊತೆಗೆ ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಹಂಚಿಕೆ ಮಾಡಲಾಗುತ್ತಿದೆ ಎಂದರು.

ತಮ್ಮ ಅನುದಾನದಲ್ಲಿ ನಂಜೆದೇವನಪುರ ಗ್ರಾಮದ ಬಸವ ಭವನ ಮುಂದುವರಿದ ಕಾಮಗಾರಿಗೆ 5 ಲಕ್ಷ ರೂ., ಕಾಗಲವಾಡಿ ಗ್ರಾಮದ ಗ್ರಂಥಾಲಯ ಹಾಗೂ ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಮುಂದುವರಿದ ಕಾಮಗಾರಿಗೆ 3 ಲಕ್ಷ ರೂ., ದೊಡ್ಡಿಂದುವಾಡಿ ಗ್ರಾಮದ ಬಾಬು ಜಗಜೀವನ ರಾಂ ಭವನದ ಮುಂದುವರಿದ ನಿರ್ಮಾಣಕ್ಕೆ 3 ಲಕ್ಷ ರೂ. ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕೇಂದ್ರದಲ್ಲಿ ನಿರ್ಮಾಣವಾಗುತ್ತಿರುವ ಡಾ.ಬಾಬು ಜಗಜೀವನ ರಾಂ ಭವನದ ಮುಂದುವರಿದ ಕಾಮಗಾರಿಗೆ 1.50 ಕೋಟಿ ರೂ. ಅನುದಾನ ನೀಡುವಂತೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರಿಗೆ ಡಾ.ಬಾಬು ಜಗಜೀವನರಾಂ ಸಂಘಗಳ ಒಕ್ಕೂಟದ ಅಧ್ಯಕ್ಷ ಶಿವಮೂರ್ತಿ ಹಾಗೂ ಮುಖಂಡರು ಮನವಿ ಸಲ್ಲಿಸಿದರು.

ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಎಂ.ಶಿವಮೂರ್ತಿ, ಮುಖಂಡರಾದ ಬಾಲರಾಜು, ನಿಟ್ರೆ ಮಹದೇವು, ಜಯಶಂಕರ್, ಗ್ರಾಪಂ ಸದಸ್ಯ ಗೋವಿಂದ ಹಾಲಹಳ್ಳಿ, ಮಾಜಿ ಅಧ್ಯಕ್ಷ ಮಹದೇವಯ್ಯ, ಲಿಂಗರಾಜು ಬಸವನಪುರ, ನಾಗರಾಜು, ನರಸಿಂಹ, ನಾಗಯ್ಯ, ರಾಜು ಸಂತೇಮರಹಳ್ಳಿ, ರಂಗಸ್ವಾಮಿ, ಮಂಜು, ಸೌರಭ್, ಪ್ರವೀಣ್, ಕಾಗಲವಾಡಿ ಚಂದ್ರ, ಶಿವಸ್ವಾಮಿ, ಆರ್.ಕೆ.ಶಿವಕುಮಾರ್, ಮಹದೇವಸ್ವಾಮಿ ಅಮಚವಾಡಿ, ಪ್ರಸಾದ್, ಪ್ರವೀಣ್, ಲತಾ ಸತ್ತೇಗಾಲ ಹಾಜರಿದ್ದರು.

ಮಾನವ ಸರಪಳಿ ರಚನೆಗೆ ಸಿದ್ಧತೆ

ಚಾಮರಾಜನಗರ, ಸೆ.13– ಮಾನವ ಹಕ್ಕುಗಳ ರಕ್ಷಣೆ, ಅಭಿವೃದ್ಧಿ, ಶಾಂತಿ ಮತ್ತು ಸ್ಥಿರತೆ ಮೂಲಕ ಪ್ರಜಾಪ್ರಭುತ್ವ ಬಲಪಡಿಸಲು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಸೆ.15ರಂದು ಆಚರಿಸಲಾಗುತ್ತಿದ್ದು, ಜಿಲ್ಲೆಯಲ್ಲಿ ಅರ್ಥಪೂರ್ಣ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ನಡೆಸಲಾಗಿದೆ. ಗಡಿಜಿಲ್ಲೆ ಚಾಮರಾಜನಗರದ ಮೂಗೂರು ಕ್ರಾಸ್‌ನಿಂದ ಮಾನವ ಸರಪಳಿ ಆರಂಭವಾಗಲಿದೆ. 24 ಕಿ.ಮೀ.ನಷ್ಟು ಉದ್ದದ ಮಾನವ ಸರಪಳಿ ಜಿಲ್ಲಾ ವ್ಯಾಪ್ತಿ ರಚನೆಯಾಗಲಿದ್ದು, 19,200 ಜನರು ಭಾಗವಹಿಸಲಿದ್ದಾರೆ.

ರಘು ಎಂಎಂಸಿಆರ್‌ಐ ಪ್ರಭಾರ ಮುಖ್ಯ ಆಡಳಿತಾಧಿಕಾರಿ


ಎ.ಈ.ರಘು

ಹನೂರು, ಸೆ.13–ಮಲೆಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಈ. ರಘು ಅವರನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಎಂಎಂಸಿಆರ್‌ಐ) ಪ್ರಭಾರ ಮುಖ್ಯ ಆಡಳಿತಾಧಿಕಾರಿಯಾಗಿ ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ಎಚ್.ಕೇಶವಪ್ರಸಾದ್ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಎ.ಈ.ರಘು ಅವರು ಶ್ರೀಕ್ಷೇತ್ರ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿಯಾಗಿ ಏಳು ತಿಂಗಳಿನಿಂದ ಅತ್ಯುತ್ತಮವಾಗಿ ಸೇವೆ ಸಲ್ಲಿಸುತ್ತಿದ್ದು, ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಪ್ರಭಾರ ಮುಖ್ಯ ಆಡಳಿತಾಧಿಕಾರಿಯಾಗಿ ನೇಮಿಸಲಾಗಿದೆ.

ಮೀಸಲಾತಿ ರದ್ದುಪಡಿಸುವ ರಾಹುಲ್ ಗಾಂಧಿ ಹೇಳಿಕೆ ಖಂಡಿಸಿ

ಚಾಮರಾಜನಗರದಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ



ಚಾ.ನಗರದಲ್ಲಿ ರಾಹುಲ್ ಗಾಂಧಿ ಸಂಸತ್ ಸದಸ್ಯತ್ವ ರದ್ದುಗೊಳಿಸುವಂತೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಸೆ.13–ಮೀಸಲಾತಿ ರದ್ದುಪಡಿಸುವ ಹೇಳಿಕೆ ನೀಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಂಸತ್ ಸದಸ್ಯತ್ವ ರದ್ದುಗೊಳಿಸುವಂತೆ ಒತ್ತಾಯಿಸಿ ಬಿಜೆಪಿ ಎಸ್‌ಸಿ, ಓಬಿಸಿ ಮೋರ್ಚಾ ಹಾಗೂ ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನ ಎದುರು ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ್ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಕೆಲಕಾಲ ರಸ್ತೆ ಸಂಚಾರ ತಡೆ ನಡೆಸಿ, ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗಿದರು.

ಎನ್.ಮಹೇಶ್ ಮಾತನಾಡಿ, ಮೀಸಲಾತಿ ರದ್ದುಪಡಿಸುವ ರಾಹುಲ್ ಗಾಂಧಿ ಹೇಳಿಕೆ ಖಂಡಿಸಿ ಬಿಜೆಪಿ ವತಿಯಿಂದ ಕಾಂಗ್ರೆಸ್ ಹಠವೋ ಮೀಸಲಾತಿ ಬಚಾವೋ ಚಳವಳಿ ಹಮ್ಮಿಕೊಳ್ಳಲಾಗಿದೆ. ಮೀಸಲಾತಿ ರಕ್ಷಣೆಗಾಗಿ ನಿರಂತರ ಹೋರಾಟ ನಡೆಸಲಾಗುವುದು. ಅಮೆರಿಕ ಪ್ರವಾಸಲ್ಲಿರುವ ರಾಹುಲ್ ಗಾಂಧಿ ಜಾರ್ಜ್‌ಟೌನ್ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಸಂವಾದದಲ್ಲಿ ಭಾರತದ ಮೀಸಲಾತಿ ವಿಚಾರ ಪ್ರಸ್ತಾಪಿಸಿದ್ದಾರೆ. ಅಲ್ಲದೆ, ಕಾಂಗ್ರೆಸ್‌ನಿಂದ ಮೀಸಲಾತಿ ತೆಗೆಯಲು ಸಾಧ್ಯ ಎಂಬ ಹೇಳಿಕೆ ನೀಡಿರುವುದು ದುರದೃಷ್ಟಕರ. ಇಂಥ ನಾಯಕರು ಹಾಗೂ ಕಾಂಗ್ರೆಸ್ ಮೀಸಲಾತಿಪರ ಎಂದು ಹೇಳಿಕೊಂಡು ಆ ವರ್ಗಗಳ ಮತಗಳನ್ನು ಪಡೆದು ಅನ್ಯಾಯ ಮಾಡುತ್ತಲೇ ಬಂದಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಸ್ವಾತಂತ್ರ್ಯಪೂರ್ವ ಹಾಗೂ ನಂತರ ಮೀಸಲಾತಿ ವಿರುದ್ಧವಾಗಿತ್ತು ಮಹಾತ್ಮ ಗಾಂಧಿ ಹಾಗೂ ಜವಾಹರಲಾಲ್ ನೆಹರು ಮೀಸಲಾತಿ ನೀಡುವುದನ್ನು ವಿರೋಧಿಸಿದ್ದರು. ಜೊತೆಗೆ ಅಂಬೇಡ್ಕರ್ ಆಶಯದ ವಿರುದ್ಧವಾಗಿದ್ದವರು. ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ಮಂಡಲ ಕಮೀಷನ್ ಆಯೋಗ ಜಾರಿಗೊಳಿಸಿದ ಕಾಂಗ್ರೆಸ್ ಸರ್ಕಾರದ ವಿರುದ್ಧ ಅಂದು ಸಚಿವರಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅಸಮಾಧಾನಿತರಾಗಿ ಸಂಪುಟ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರ ಬಂದಿದ್ದರು ಎಂದರು.

ಅಲ್ಲಿಂದಲೂ ಕಾಂಗ್ರೆಸ್ ಮೀಸಲಾತಿ ವಿರುದ್ಧದ ನಿಲುವು ಹೊಂದಿದೆ. ಇದನ್ನು ಅರ್ಥ ಮಾಡಿಕೊಳ್ಳದ ಸಮುದಾಯದ ಬಂಧುಗಳು ಹಾಗೂ ಓಬಿಸಿ ವರ್ಗದವರು ಕಾಂಗ್ರೆಸ್ ಬೆಂಬಲಿಸುವ ಮೂಲಕ ಮೋಸ ಹೋಗುತ್ತಿದ್ದಾರೆ. ರಾಜ್ಯ ಸರ್ಕಾರದಲ್ಲಿ ಪ್ರಭಾವಿ ಸಚಿವರಾಗಿರುವ ನಮ್ಮ ಡಾ.ಹೆಚ್.ಸಿ.ಮಹದೇವಪ್ಪ ಏನು ಹೇಳುತ್ತಾರೆ. ಅವರದೆ ಪಕ್ಷದ ನಾಯಕರು ಇಂಥ ಹೇಳಿಕೆ ನೀಡುತ್ತಿದ್ದಾರೆ. ಇದರಿಂದ ಕಾಂಗ್ರೆಸ್‌ನ ಮೀಸಲಾತಿ ಪರರ ಬಣ್ಣ ಬಯಲಾಗಿದೆ. ಆದ್ದರಿಂದ ರಾಹುಲ್ ಗಾಂಧಿ ಸಂಸತ್ ಸದಸ್ಯತ್ವ ರದ್ದುಗೊಳಿಸುವಂತೆ ಒತ್ತಾಯಿಸಿದರು.


ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಉಪಾಧ್ಯಕ್ಷರಾದ ವಿರಾಟ್ ಶಿವು, ಅರಕಲವಾಡಿ ನಾಗೇಂದ್ರ ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಜನಧ್ವನಿ ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಸೋಮಣ್ಣ ಉಪ್ಪಾರ್, ಎಸ್‌ಟಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಜಯಸುಂದರ್, ಜಿಲ್ಲಾಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಬುಲೆಟ್ ಚಂದ್ರ, ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಹಿರಿಯ ಮುಖಂಡ ಆರ್.ಪುಟ್ಟಮಲ್ಲಪ್ಪ, ನಗರಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಕೂಸಣ್ಣ, ಮಹೇಶ್, ಕೊಳ್ಳೇಗಾಲ ನಗರಸಭೆ ಮಾಜಿ ಸದಸ್ಯ ಮೂರ್ತಿ, ಯುವ ಮೋರ್ಚಾ ಅಧ್ಯಕ್ಷ ಸೂರ್ಯಕುಮಾರ್ ಇತರರು ಭಾಗವಹಿಸಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಚಾ.ನಗರ, ಹರದನಹಳ್ಳಿ, ಸಂತೇಮರಹಳ್ಳಿ ಮತ್ತು ಬೇಗೂರು ಉಪವಿಭಾಗ ವ್ಯಾಪ್ತಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಸೆ.14ರಂದು ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಚಾ.ನಗರ, ಕೋಡಿಮೋಳೆ, ರಾಮಸಮುದ್ರ, ಮಾದಾಪುರ, ಕಾಗಲವಾಡಿ, ಸೋಮವಾರಪೇಟೆ, ಹರದನಹಳ್ಳಿ, ಬೇಡರಪುರ, ಟಿ.ಕೆ.ಮೋಳೆ, ಶಿವಪುರ, ಗೂಳಿಪುರ ಎನ್‌ಜೆವೈ, ಉಮ್ಮತ್ತೂರು, ಬಾಗಳಿ, ಲಿಂಗಣಾಪುರ, ಜನ್ನೂರು, ಜನ್ನೂರು ಹೊಸೂರು, ಹಳ್ಳಿಕೆರೆಹುಂಡಿ, ಗಣಗನೂರು, ಗಣಗನೂರುಪುರ, ನವಿಲೂರು, ಆಲ್ದೂರು, ಬಿಎಂಕೆ ಹುಂಡಿ, ಗೊದ್ದಲೆ ಹುಂಡಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಸ್ಪತ್ರೆ ರಸ್ತೆ ಅಭಿವೃದ್ಧಿಗೆ ಚಾಲನೆ...


ಗುಂಡ್ಲುಪೇಟೆ ತಾಲೂಕಿನ ಬೇಗೂರಿನಲ್ಲಿ 50 ಲಕ್ಷ ರೂ. ವೆಚ್ಚದ ಆಸ್ಪತ್ರೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಭೂಮಿಪೂಜೆ ನೆರವೇರಿಸಿದರು. ಗ್ರಾಪಂ ಅಧ್ಯಕ್ಷೆ ಜಯಮ್ಮ, ಉಪಾಧ್ಯಕ್ಷ ಬಿ.ಆರ್.ಮಹದೇವಸ್ವಾಮಿ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ಎಸ್.ನಂಜುಂಡಪ್ರಸಾದ್, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಬಸವರಾಜು, ಗ್ರಾಪಂ ಸದಸ್ಯರಾದ ಬಿ.ಎನ್.ಪುನೀತ್ ಕುಮಾರ್, ಗುರುಸ್ವಾಮಿ, ಮಾಜಿ ಅಧ್ಯಕ್ಷ ಎ.ರವಿ, ಮಾಜಿ ಉಪಾಧ್ಯಕ್ಷ ಕೆ.ಮಹದೇವಶೆಟ್ಟಿ ಇದ್ದರು.

ಅಧಿಕಾರಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮನವಿ ಸಲ್ಲಿಕೆ


ಗ್ರಾಮ ಆಡಳಿತಾಧಿಕಾರಿ ಸಿ.ಮಹೇಶ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಬಿಎಸ್‌ಪಿಯಿಂದ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ, ಸೆ.13–ತಾಲೂಕಿನ ಕಸಬಾ ಹೋಬಳಿ ಚಾಮರಾಜನಗರ ಸರ್ವೆ ನಂ.295/4ಸಿರಲ್ಲಿ 8 ಗುಂಟೆ ಜಮೀನನ್ನು ಅಕ್ರಮವಾಗಿ ಖಾತೆ ಮಾಡಿರುವ ಚಾಮರಾಜನಗರ ವೃತ್ತದ ಗ್ರಾಮ ಆಡಳಿತಾಧಿಕಾರಿ ಸಿ.ಮಹೇಶ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿ ಬಹುಜನ ಸಮಾಜ ಪಕ್ಷದ ವತಿಯಿಂದ ಅಪರ ಜಿಲ್ಲಾಧಿಕಾರಿ ಗೀತಾಹುಡೇದ ಅವರಿಗೆ ಮನವಿ ಸಲ್ಲಿಸಲಾಯಿತು.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಎಸ್.ಪಿ.ಮಹೇಶ್ ನೇತೃತ್ವದಲ್ಲಿ ಮನವಿ ಸಲ್ಲಿಸಲಾಗಿದ್ದು, ಆದಿಕರ್ನಾಟಕ ಜನಾಂಗಕ್ಕೆ ಸೇರಿದ ಆಸ್ತಿಯಾಗಿದ್ದರೂ ಪರಿಶೀಲನೆ ನಡೆಸದೆ, ಅಕ್ರಮ ಖಾತೆ ಮಾಡಿರುವ ಅಧಿಕಾರಿ ವಿರುದ್ಧ ಇದುವರೆಗೆ ಯಾವುದೇ ಕ್ರಮವಹಿಸಿಲ್ಲ. ಆದ್ದರಿಂದ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಅಧಿಕಾರಿ ಸಿ.ಮಹೇಶ ಅವರನ್ನು ತಕ್ಷಣ ಸೇವೆಯಿಂದ ವಜಾಗೊಳಿಸಬೇಕು. ಇಲ್ಲದಿದ್ದರೆ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳ ಕಂದಾಯಾಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸುದಾಗಿ ಮನವಿಯಲ್ಲಿ ಎಚ್ಚರಿಸಲಾಗಿದೆ.

ಈ ಸಂದರ್ಭದಲ್ಲಿ ದೊಡ್ಡರಾಯಪೇಟೆ ಸಿದ್ದರಾಜು, ಹೊಂಡರಬಾಳು ವಾಸು, ಮಲ್ಲೇಶ್ ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
Goods Auto Driver & Computer Operator FMCG Goods ಸಪ್ಲೈಮಾಡಲು Auto Driver ಬೇಕಾಗಿದ್ದಾರೆ. Xerox ಅಂಗಡಿಯಲ್ಲಿ ಕೆಲಸ ಮಾಡಲು Computerನಲ್ಲಿ Online Application ಭರ್ತಿ ಮಾಡಲು ಬೇಕಾಗಿದ್ದಾರೆ.
9972258425

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು, ಯುವಕ/ಯುವತಿಯರು,ಬೇಕಾಗಿದ್ದಾರೆ ಮಹಿಳಾ ಅಡುಗೆ ಭಟ್ಟರು, ಮತ್ತು ಸಹಾಯಕರು, ಹೌಸ್ ಕೀಪಿಂಗ್ ಕೆಲಸಕ್ಕೆ ನಮ್ಮಲ್ಲೇ ಉಳಿದುಕೊಂಡು ಕೆಲಸ ಮಾಡುವಂತಹವರು ತಕ್ಷಣ ಬೇಕಾಗಿದ್ದಾರೆ. ಸಂಬಳ 15,000 ರಿಂದ 20,000ವರೆಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
9632039123

ಪಿ.ಜಿ. ಕಟ್ಟಡ ಕಡಿಮೆಗೆ ಬಾಡಿಗೆಗೆ ಇದೆ
ಮೈಸೂರು ಅಪೋಲೋ ಆಸ್ಪತ್ರೆ ರಸ್ತೆ ಪೂರ್ವ ದಿಕ್ಕಿಗೆ 1900 ಚದರ ಅಡಿಯ 8 ರೂಮುಗಳುಳ್ಳ 10x20 ಪಿಜಿ ಪಿಠೋಪಕರಣದೊಂದಿಗೆ ಬಿಸಿನೀರಿನ ಸಮೇತ 33,000ಕ್ಕೆ ಬಾಡಿಗೆಗೆ ಇದೆ
8197609290

ಬೇಕಾಗಿದ್ದಾರೆ
ಶ್ರೀ ಲಕ್ಷ್ಮಿ ಮೆಟಲ್ ಸ್ಟೋರ್ ಹೋಂ ಅಪ್ಲೈಯನ್ಸ್ ಗೆ ಸೇಲ್ಸ್ ಮ್ಯಾನೇಜರ್ ಹಾಗೂ ಟಾಟಾ ಏಸ್ ಡ್ರೈವರ್ ಬೇಕಾಗಿದ್ದಾರೆ. ಹುಣಸೂರು ರಸ್ತೆ, ಹಿನಕಲ್ ಮೈಸೂರು
9342118940

VILLA PLOTS FOR SALE
30x40 & 30x50
READY FOR CONSTRUCTION
Beside Suvarna Nagara, Bogadi - Gaddige Road, Mysore
Free Site Visit Call Now
88614 40528 / 97314 00249

ಕೆಲಸಕ್ಕೆ ಬೇಕಾಗಿದ್ದಾರೆ
ಅನುಭವವುಳ್ಳ ಸ್ಟಾಫ್ ನರ್ಸ್ ಬೇಕಾಗಿದ್ದಾರೆ. ಶ್ರೀ ಮಹದೇಶ್ವರ ನರ್ಸಿಂಗ್ ಹೋಂ ಸಿದ್ಧಾರ್ಥನಗರ, ಮೈಸೂರು
9740589309

ಮನೆ ಮಾರಾಟಕ್ಕಿದೆ
NEW HOUSE FOR SALE
30x40 ಅಳತೆಯಲ್ಲಿ ನಿರ್ಮಿಸಿರುವ ಹಾಗೂ ವಾಸ್ತು ಮತ್ತು ಆರ್ಕಿಟೆಕ್ಟ್ ಡಿಸೈನ್‌ವುಳ್ಳ ಉತ್ತರ ದಿಕ್ಕಿನ ಮನೆ ಚಾಮುಂಡೇಶ್ವರಿ ರೈಲ್ವೆ ಲೇಔಟ್‌ನಲ್ಲಿ (KRS Road)ನಲ್ಲಿ ಮಾರಾಟಕ್ಕಿದೆ.
9845199932
9482746287
Near to city & RBI + Cauvery water facility Good Location

ನಿಮ್ಮ ಮನೆಯಲ್ಲಿ ನಲ್ಲಿ ಮತ್ತು ಸ್ಯಾನಿಟರಿ ಕೆಲಸ, ಟೈಲ್ಸ್ ಕೆಲಸ, ತರಾಸಿ ಸೋರಿಕೆ, ಬಣ್ಣದ ಕೆಲಸ, ಎಲೆಕ್ಟ್ರಿಕಲ್ ಕೆಲಸ, ಹಾಗೂ ಸಿವಿಲ್ ಆಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ... ಕರೆ ಮಾಡಿ,
9164573142
8151035074

ವಧು–ವರರಿಗೆ ಸಂಪರ್ಕಿಸಿ
ಒಕ್ಕಲಿಗ, ಕುರುಬ, ಲಿಂಗಾಯತ, ನಾಯಕ ಎಲ್ಲಾ ಜಾತಿಯ ವದು–ವರರು, ವಿಚ್ಛೇದಿತರು ವಿಧವಾ–ವಿಧವೆಯರು
9980273659
9731066259

MUDA SITE FOR SALE
ವಿಜಯನಗರ 4ನೇ ಹಂತ ಪಕ್ಕದ "ವ್ಯಾಸ್ತಿ ಲೇಔಟ್" ನಲ್ಲಿ 30'×50' West Facing ಸೈಟ್.
Mob: 9886048471

MUDA SITE FOR SALE
ವಿಜಯನಗರ 4ನೇ ಹಂತ ಪಕ್ಕದ "ಯುರೇಖ ಎನ್ಕ್ಲೇವ್" ನಲ್ಲಿ 30'×40' North Facing ಸೈಟ್.
Mob: 9886048471

ಹೊಸ ಮನೆ ಮಾರಾಟಕ್ಕಿದೆ
20x30 S/E Ground & First Floor
ವಿನಾಯಕ ಗಾರ್ಡನ್ ಸಿಟಿ ಗೋಲ್ಡ್ ನರಸೀಪುರ ರೋಡ್ ಆಲನಹಳ್ಳಿ ಸಿಗ್ನಲ್
8310972636
9886481265

Job Opening in Mysore for woman Employees only
Age group 30 to 45 years
Education degree / diploma
salary 15k to 20k
ESI and PF
8050292837

ಮನೆ ಬಾಡಿಗೆಗೆ ಇದೆ
HOUSE FOR RENT
2.5 BHK, 1ST FLOOR
D.NO. 144, 3RD MAIN, 'H' BLOCK, RAMAKRISHNANAGAR, MYSORE-22
9845336949

COMMERCIAL SPACE FOR RENT
1400 Sqft @ Kalidasa Road Opposite to Tanishque Jewellery
9538895037
9538884740

ಮುಡಾ ಅಪ್ರೂವ್ ಸೈಟ್ ಮಾರಾಟಕ್ಕಿದೆ
ಬ್ರಾಹ್ಮಿನ್ ಲೇಔಟ್ 'A' ಬ್ಲಾಕ್ 60 ಅಡಿ ರಸ್ತೆಗೆ ಒಂದೇ ಸೈಟ್‌ನಲ್ಲಿ 40x30, 30x20 ಹಾಗೂ 4 ಅಂಗಡಿ ಮಳಿಗೆಗೆ ಸ್ಥಳಾವಕಾಶವುಳ್ಳ ಸೈಟ್ ಮಾರಾಟಕ್ಕಿದೆ. ಒಟ್ಟು ವಿಸ್ತೀರ್ಣ 2900 ಸ್ಕ್ವೇರ್ ಫೀಟ್ ಚ.ಅಗೆ 1850/-
8618644886
9880280299

MUDA SITE FOR SALE
ಬೋಗಾದಿ ರೂಪನಗರ ಪಕ್ಕದ "ಪುಷ್ಪಾ ಲೇಔಟ್" ನಲ್ಲಿ 20'×30' East Facing ಸೈಟ್.
Mob: 9886048471

ಎಂ.ಎಸ್.ನಾರಾಯಣ ಸ್ವೀಟ್ಸ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಅನುಭವವುಳ್ಳ ಸೇಲ್ಸ್ ಮ್ಯಾನ್‌ಗಳು. ಅನುಭವುಳ್ಳ ಡ್ರೈವರ್‌ಗಳು ಸೂಪರ್‌ವೈಸರ್‌ಗಳು ಮತ್ತು ಕ್ಯಾಶಿಯರ್‌ಗಳು ಕ್ಲೀನಿಂಗ್ ಲೇಡಿಸ್‌ಗಳು ಬೇಕಾಗಿದ್ದಾರೆ. ವಿಳಾಸ: ಕುವೆಂಪುನಗರ ಉದಯರವಿ ರೋಡ್ ರಾಯಲ್ ಎನ್ಫೀಲ್ಡ್ ಶೋರೂಮ್ ಎದುರು ಈ ಕೂಡಲೇ ಕೆಳಕಂಡ ನಂಬರಿಗೆ ಕರೆ ಮಾಡಿ
7090700199,7090700166

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

SITE FOR SALE
Bank Loan Available
20x30, 30x40
Srirampura Ring Road, Mysore
8050345574

ಪ್ರಸಿದ್ಧ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ॥ ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ–ಪುರುಷ್ಯಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ, ನಿಮ್ಮ ಯಾವುದೇ ಗುಪ್ತ, ಸಮಸ್ಯೆಗಳಿಗೆ, ಅಷ್ಟಮಂಗಳ, ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ, ಪರಿಹಾರಕ್ಕಾಗಿ, ಚೋಟನೀಕರ, ಭಗವತಿ ತಾಯಿ, ರಾಜರಾಜೇಶ್ವರಿ, ಕುಟ್ಟಿಚೇತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಕಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಶೋರೂಮ್‌ಗಳಿಗೆ ಮತ್ತು ಕಂಪನಿ ಕೆಲಸಕ್ಕೆ, ಆಫೀಸ್ ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು, ಬೇಕಾಗಿದ್ದಾರೆ.ಮೊದಲು ಬಂದವರಿಗೆ ಮೊದಲ ಆದ್ಯತೆ. ಯಾವುದೇ ಎಜುಕೇಶನ್ ಇರಬಹುದು, AGE ಲಿಮಿಟ್ 18 TO 55, SALARY 18000 TO 38000 ಇರುತ್ತದೆ, ಹೆಚ್ಚಿನ ಮಾಹಿತಿಗೆ ಇಂದೆ ಸಂಪರ್ಕಿಸಿ, HR MADAM,
7899491102
8296845328

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ: 10,000
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ,
Field Executive ಬೇಕಾಗಿದ್ದಾರೆ
Collection Field (ಸಂಬಳ–13000), 2000/- (Petrol Charges) 15000
8150005111

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೋರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

WANTED
Semi qualified CA or Accountant with experience. Any Degree. Contact:
Ph: 0821-2461141
yogibharath19@gmail.com

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

28x40 S/W ಕಾರ್ನರ್ DTCP 'A' ಖಾತೆ (ರೇರಾ ಅಪ್ರೂಡ್) ಸೈಟು ಮಾರಾಟಕ್ಕಿದೆ 15 ಲಕ್ಷದ 50 ಸಾವಿರಗಳು GSS ಲೇಔಟ್ TVS ಫ್ಯಾಕ್ಟರಿ ಹತ್ತಿರ ಮೈಸೂರು
9972557534

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, 10th, PUC, ITI, Diploma, Any Degree Pass/Fail ಆದವರಿಗೆ Cashier, Billing, Telecalling, Receptionist, Data Entery, Helper, Quality ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 16000/- 42000/- (ESI+PF OT) ಸೇರಿ
9740468212
6364103418

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಸೋಲಾರ್ ವಾಟರ್ ಹೀಟರ್
Solar Water Heater
ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೋರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

SCVT English Medium School
Rajendranagara, Mysore-7
WANTED
Science Teacher - 01 (CBZ, B.Ed.)
Computer Teacher : 01 B.Sc., (PCM/CBZ)
Office Assistant: 01 (any Degree with computer knowledge).
Preference will be given to nearby candidate.
Call: 9964612301
scvt8055@gmail.com

ವಿಶ್ವಕರ್ಮ ಪತ್ತಿನ ಸಹಕಾರ ಸಂಘ(ನಿ)
ನಂ.144, 1ನೇ ಮಹಡಿ, ಕಾಳಮ್ಮ ದೇವಸ್ಥಾನ ರಸ್ತೆ, ಮೈಸೂರು
ವಾರ್ಷಿಕ ಮಹಾಸಭೆ
ದಿನಾಂಕ: 22–9–2024 ಭಾನುವಾರ ಬೆಳಿಗ್ಗೆ 10–00 ಗಂಟೆಗೆ ಸಂಘದ 20ನೇ ವಾರ್ಷಿಕ ಮಹಾಸಭೆಗೆ ಸದಸ್ಯರೆಲ್ಲರು ಆಗಮಿಸಬೇಕಾಗಿ ವಿನಂತಿ.
ಸ್ಥಳ: ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರಿಂಗ್ ಜೆಎಲ್‌ಬಿ ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರು
ಸಹಿ/– ಅಧ್ಯಕ್ಷರು
ಶ್ರೀಜಯರಾಮಚಾರ್, ಮೊ: 9448066080

SITE FOR SALE
Muda approved Sharada Nagar Railway Layout, Bogadi Near Hari Vidyalaya
30x40 West Facing
9886653258

ಮನೆ ಬಾಡಿಗೆಗೆ ಇದೆ
ಚಿಕ್ಕ ಸಂಸಾರಕ್ಕೆ ಮನೆ ಅಥವಾ ಕಚೇರಿಗೆ ಯೋಗ್ಯವಾಗಿದೆ. ಎರಡನೇ ಫ್ಲೋರ್, ಆರ್‌ಸಿಸಿ, ಒಂದು ರೂಮ್, ಹಾಲ್, ಅಡುಗೆ ಮನೆ. ಸಸ್ಯಾಹಾರಿಗಳಿಗೆ ಮಾತ್ರ ಗನ್ ಹೌಸ್ ಸರ್ಕಲ್ – ಜೆಎಸ್‌ಎಸ್ ಮಹಾ ವಿದ್ಯಾ ಪೀಠದ ಎದುರು, ಮೈಸೂರು.
9449886322

SITE FOR SALE
East facing corner site, 28.5 x 40, MUDA Khata, 36 Lakhs. Direct Owner.
Mob: 93421 23373

!!! FREE !!!
Commercial Van training.
Join our delivery team.
Mob: 8310381391
9716666067

ಯುವಕರು ಬೇಕಾಗಿದ್ದಾರೆ
ಮೈಸೂರು–ಕೊಡಗು–ಮಂಗಳೂರು ಮಾರ್ಗಗಳಲ್ಲಿ ದಿನನಿತ್ಯ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ಯುವಕರು ಬೇಕಾಗಿದ್ದಾರೆ. ಆರಂಭಿಕ ವೇತನ 13,000. ಸಂಪರ್ಕಿಸಿ:
Mob: 9740408488

SITE FOR SALE
30x50 S/F
20x50 W/F
RMPR Layout (Vinayaka Enclave)
Chamundeshwari Nagara.
Mob: 9620563026

ಸಿಪಾಯಿ ಪ್ರಾಪರ್ಟೀಸ್
1 ಕುಬೇರನಂದ ಸಾಗರ ಲೇಔಟ್, East Face 30x40 ಅಳತೆಯ ಸೈಟ್ ಮಾರಾಟಕ್ಕಿದೆ ಬೆಲೆ 25 ಲಕ್ಷ ನೆಗೋಷಿಯೇಬಲ್
2. ಇಲವಾಲ ಬಸ್ ನಿಲ್ದಾಣ ಹಿಂಭಾಗದಲ್ಲಿರುವ ಬಸವಾಸಾಗರ ಫೇಸ್ 2ನೇ ಹಂತದಲ್ಲಿ 30x40 ಅಳತೆಯ ನಾರ್ತ್ ಫೇಸ್ ಸೈಟ್ ಮಾರಾಟಕ್ಕಿದೆ ಬೆಲೆ 30 ಲಕ್ಷ ನೆಗೋಷಿಬಲ್ ಮತ್ತು 60 ಅಡಿ ರಸ್ತೆಯಲ್ಲಿ 40x60ಅಳತೆಯ ಸೈಟ್‌ಗಳು ಮಾರಾಟಕ್ಕಿವೆ ಬೆಲೆ 60 ಲಕ್ಷ ನೆಗೋಷಿಬಲ್
ನಂಜುಂಡಸ್ವಾಮಿ ಹೆಚ್.ಎಸ್, ಮಾಜಿ ಸೈನಿಕರು ಮೊ: 9483862050
ಶರತ್‌ಕುಮಾರ್ ಮೊ. 7829779070

ಮನೆ ಮಾರಾಟಕ್ಕಿದೆ
ಚಾಮುಂಡಿಪುರಂ, 2ನೇ ಕ್ರಾಸ್, 40x40, N/E ಕಾರ್ನರ್ G/F & F/F, 23 ಚದರ ಮನೆ, ಅತ್ಯಾಧುನಿಕ ಸೌಲಭ್ಯವುಳ್ಳ ಮನೆ ಬೆಲೆ 1 ಕೋಟಿ 90 ಲಕ್ಷ ಸಂಪರ್ಕಿಸಿ: (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9342119411

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

PLOT FOR SALE
30x40, 30x50, Odd & Corner site for sale in Sarkari Uthanahalli, near Shreshahill View.
9535718132, 6364204222

MUDA Approved Site for Sale
30x50, North facing Vijaya Nagar 4th Stage
Price: 68 Lakhs
Mob: 96206 14970

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

We are Hiring
CONSTRUCTIONS & DEVELOPERS COMPANY
* Driver
* Graphic Designer
* Accountant
* Associate Sales Executive
96328 06699

MUDA APPROVED
30x40 S/E ಕಾರ್ನರ್ ಸೈಟು @ Rs.27ಲಕ್ಷ
40x40 S/E ಕಾರ್ನರ್ ಸೈಟು @ Rs.42 ಲಕ್ಷ
LBS ನಗರದ ನಂತರ ಚಾಮುಂಡಿ ಬೆಟ್ಟದ ಹಿಂಭಾಗ
9538583377

MUDA APPROVED
ಟೆಲಿಕಾಂ ಲೇಔಟ್ 40x60 S/E ಕಾರ್ನರ್ ಸೈಟು @ Rs.60 ಲಕ್ಷ
ಆಚಾರ್ಯ ವಿದ್ಯಾಕುಲ ಶಾಲೆ ಹಿಂಭಾಗ ಹುಣಸೂರು ರೋಡ್, ಇಲವಾಲ
9538583377

2.5 BHK HOME INTERIORS @ ₹ 2.5 Lacs*
Home Space Mart
An ISO 9001-2015 Certified Company
TALK TO OUR DESIGN EXPERT
✆91089 23123

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, ಜೆಎಸ್‌ಎಸ್ ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತ ಮುತ್ತ ಇರುವ ಲೇಔಟ್‌ಗಳಲ್ಲಿ.
Mob: 9844436672

HOUSE FOR SALE
20x30 ground floor 2 bedroom, 1st floor 2 bedroom, 10x20 one hall (Roof top), 2 solar system, 2 hot water geyser tank. MUDA approved. Sathagalli, Rajkumar Road, behind Registrar Office, Mysuru.
9845116744, 9606354548

neem BOND PLATINUM®
PLYWOOD DOORS
10 YEARS WARRANTY
@ FACTORY DEPOT RATES
✆9731591267, 9901291267

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

MUDA APPROVED SITES FOR SALE
ಗದ್ದಿಗೆ ರಸ್ತೆಯಲ್ಲಿರುವ ಸೆಂಟ್ ಫ್ರಾನ್ಸಿಸ್ ಸ್ಕೂಲ್ ಹಿಂಭಾಗದಲ್ಲಿರುವಂತಹ "ಸುವರ್ಣನಗರ" ಬಡಾವಣೆಯಲ್ಲಿ 30x40 ಅಳತೆಯ ಸೌತ್ ಫೇಸ್ ಸೈಟ್ ಮಾರಾಟಕ್ಕಿದೆ. ಬೆಲೆ 30 ಲಕ್ಷ ಫೈನಲ್, ಸೈಟ್ ನಂ.333
7892846068

ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ಕೊಡುತ್ತೇವೆ. ಒಂದು ಗ್ರಾಂ ಚಿನ್ನಕ್ಕೆ – 7100 ರೂ. (24 CT)
9108146123

FOR SALE
1. Properties at Kuvempu Nagar Starting @ 45L
2. 20x30 Site @Vijaya Nagar 4th stg
3. 14x100 Old Hs @ Ramavilas Rd
4. Old Hs @ Krishnamurthy Puram
5.Properties For Sale at Vidyaranyapuram
6. 20x30 Site Near SBM Lyt, Bogadhi
7. Ready to Move Apartments @ Hebbal
8. 100x100 Farm House @ KRS Back Water Attach 20L
PRAKRUTHI PROPERTIES
95386 90359, 90359 90359

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್ & ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಹೊಸ ಮನೆ ಮಾರಾಟಕ್ಕಿದೆ
ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20*40 ಅಡಿ, ಪೂರ್ವ ದಿಕ್ಕು. 3 ಬಿಹೆಚ್‌ಕೆ, ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ
Call: 9380284276

ಡಿ.ಟಿ.ಸಿ.ಪಿ ಅನುಮೋದಿತ
ಸೈಟುಗಳು
"ಸಂಜಯ್ ನಗರ ಬಡಾವಣೆ"
5.50 ಲಕ್ಷ* ಪ್ರಾರಂಭಿಕ ಬೆಲೆ
ಕಡಿಮೆ ಬೆಲೆಯಲ್ಲಿ ಲಭ್ಯವಿರುತ್ತದೆ
ನಂಜನಗೂಡು–ಚಾಮರಾಜನಗರ ಹೆದ್ದಾರಿ, ಮಹದೇವನಗರ ಹತ್ತಿರ, ನಂಜನಗೂಡು
8792306996

ಪ್ರಮಾಣ ಪತ್ರ
ಮೈಸೂರು ಜಿಲ್ಲೆ ಹುಣಸೂರು ತಾ॥, ಬಿಳಿಕೆರೆ ಹೋ॥, ಹುಸೇನಪುರ ಅಂಚೆ ಮತ್ತು ಗ್ರಾಮದಲ್ಲಿ ವಾಸವಾಗಿರುವ ಲೇ.ಚೆನ್ನಚಾರಿರವರ ಮಗನಾದ ಶ್ರೀ ಸಿ.ನರಸಿಂಹಚಾರಿ ಆರ್. ನಾನು ನನ್ನ ಹೆಸರು ಸಿ.ನರಸಿಂಹಚಾರಿ ಎಂಬುದಾಗಿದ್ದು, ಆಧಾರ್ ಕಾರ್ಡ್, ರೇಷನ್ ಕಾರ್ಡ್ ಹಾಗೂ ಉಳಿದ ಎಲ್ಲಾ ದಾಖಲೆಗಳಲ್ಲಿ ನನ್ನ ಹೆಸರು ಸಿ.ನರಸಿಂಹಚಾರಿ ಎಂದು ಸರಿಯಾಗಿನಮೂದಾಗಿರುತ್ತದೆ. ಆದರೆ ಎಸ್.ಬಿ.ಐ ಬ್ಯಾಂಕ್ ಖಾತೆ ಸಂಖ್ಯೆ 64149951417ರ ದಾಖಲೆಯಲ್ಲಿ ನನ್ನ ಹೆಸರು ನಾಗರಾಜಚಾರಿ ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದ್ದರಿಂದ ನನ್ನ ಹೆಸರನ್ನು ಬ್ಯಾಂಕ್ ದಾಖಲೆಯಲ್ಲಿ ತಿದ್ದುಪಡಿ ಮಾಡಿಸಲು ನನ್ನ ಹೆಸರನ್ನು ಸಿ.ನರಸಿಂಹಚಾರಿ ಎಂದು ವೀಣಾ ಜಿ ನೋಟರಿಯಿಂದ ಮುಂದೆ ಪ್ರಾಮಾಣೀಕರಿಸುತ್ತೇನೆ.
ಸಹಿ/– ಸಿ.ನರಸಿಂಹಚಾರಿ

ಛತ್ರ ಖಾಲಿ ಇದೆ
ದಿನಾಂಕ: 24–11–2024ನೇ (ಭಾನುವಾರ) ದಂದು ಇಂದಿರಾ ವೆಂಕಟಲಿಂಗಯ್ಯ D.V ಕನ್ವೆನ್ಷನ್ ಹಾಲ್, ಹಾಲಿನ ಡೈರಿಯ ಮುಂಭಾಗ (Old Milk Diary) ಸಿದ್ಧಾರ್ಥನಗರ, ಮೈಸೂರು, ಶುಭ ಸಮಾರಂಭಗಳಿಗೆ ಲಭ್ಯವಿರುತ್ತದೆ.
9980853559

HOUSE FOR RENT
VEG ONLY
2BHK G/F
K.M. PURAM NEAR BALLAL CIRCLE
9448061075
9900409715

ಹೊಸ ಮನೆ ಮಾರಾಟಕ್ಕಿದೆ
ವಿಜಯನಗರ, 4ನೇ ಹಂತ, 2ನೇ ಘಟ್ಟ, NPS ಇಂಟರ್‌ನ್ಯಾಶನಲ್ ಸ್ಕೂಲ್ ಹತ್ತಿರ, ಅಳತೆ 30x40 MUDA allotted ಬೋರ್ ವೆಲ್ ಹಾಗೂ ಇತರೆ ಸೌಲಭ್ಯಗಳನ್ನು ಒಳಗೊಂಡಿರುತ್ತದೆ.
9342677390

ತಕ್ಷಣ ಬೇಕಾಗಿದ್ದಾರೆ
ಮೈಸೂರು ಸುತ್ತಮುತ್ತ ಭದ್ರತಾ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸಲು ಮೈಸೂರಿನ ಕೊಲಂಬಿಯಾ ಆಸ್ಪತ್ರೆಯಿಂದ ನಗುವಿನ ಹಳ್ಳಿ ಗೇಟ್ ಒಳಗೆ ESI & PF ಸೌಲಭ್ಯವಿದೆ.
8861871926

SOFA REPAIR
We undertake all kinds of Sofa cum Bed, Rexine, Leather, Cloth & Wooden, Sofa Set, Cushion Set, Cane Sofa Set, Cushion Bed & Cushion works, Wooden Polish & Repairs. Contact
8861359392

ಹೊಸ ಮನೆ ಮಾರಾಟಕ್ಕಿದೆ
ಮೈಸೂರು ನಗರದಲ್ಲಿನ ಅಶೋಕಪುರಂ 4ನೇ ಕ್ರಾಸ್‌ನಲ್ಲಿ 17x55ರಲ್ಲಿ ಕಟ್ಟಿರುವ 2BHK ಹೊಂದಿರುವ 2 ಮನೆ ಎಲ್ಲಾ ರೀತಿಯ ದಾಖಲಾತಿಗಳನ್ನು ಹಾಗೂ ಕಾರ್ಪೋರೇಷನ್ ಖಾತೆ ಹೊಂದಿರುವ ಮನೆ ಮಾರಾಟಕ್ಕಿದೆ.
9019484156
9113523954

MUDA APPROVED SITES FOR SALE
ಗದ್ದಿಗೆ ರಸ್ತೆಯಲ್ಲಿರುವ ಸೆಂಟ್ ಫ್ರಾನ್ಸಿಸ್ ಸ್ಕೂಲ್ ಹಿಂಭಾಗದಲ್ಲಿರುವಂತಹ ಸುವರ್ಣನಗರ ಬಡಾವಣೆಯ ಪಕ್ಕದಲ್ಲಿರುವಂತಹ "ಸಾನ್ವಿ" ಬಡಾವಣೆಯಲ್ಲಿ 30x40, 30x43 ಅಳತೆಯ ಸೈಟ್‌ಗಳು ಮಾರಾಟಕ್ಕಿವೆ. ಬೆಲೆ 23 ಲಕ್ಷ ನೆಗೋಷಿಯಬಲ್ ಸಂಪರ್ಕಿಸಿ
9483862050,7829779070
7892846068

ಸದ್ಗುರು ಮ್ಯಾರೇಜಸ್
ಸುಂದರ ಶ್ರೀಮಂತ ವಿದ್ಯಾವಂತ ವಧುವರರಿಗೆ ನೇರ ಸಂಪರ್ಕಿಸಿ ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ.
6361740552
ನಮ್ಮ ಸಂಸ್ಥೆಗೆ ಕೆಲಸ ಮಾಡಲು ಸಮಾಜಸೇವೆ ಮನೋಭಾವದ ವಿದ್ಯಾವಂತ ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ

WANTED
PART TIME LECTURERS
HISTORY-01
POLITICAL SCIENCE-01
ACCOUNTANCY-01
9535161811

ವಾರ್ಷಿಕ ಮಹಾಸಭೆ
ಫಾಲ್ಕನ್ ಟೈರ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 2023–2024ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿ.22–9–2024ರಂದು ಭಾನುವಾರ ಬೆ.10.30ರ ವೇಳೆಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ ಮುಡಾ ಗ್ರೌಂಡ್ ಆವರಣದ ಪಕ್ಕ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜ್ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು–570018 ಇಲ್ಲಿ ಏರ್ಪಡಿಸಲಾಗಿದೆ. ಆದ್ದರಿಂದ ಸಂಘದ ಸದಸ್ಯರೆಲ್ಲರೂ ಸಭೆಗೆ ಹಾಜರಾಗಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ. ವಿ.ಸೂ: ಸಂಘದ ಸದಸ್ಯರು ಕಡ್ಡಾಯವಾಗಿ ಗುರುತಿನ ಚೀಟಿ ತರತಕ್ಕದ್ದು.
ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಕಾರ್ಯದರ್ಶಿ

ಹೊಸ ಮನೆ ಮಾರಾಟಕ್ಕಿದೆ
30x40 5 BHK Duplex NF ಆರಾಧ್ಯ ಬಡಾವಣೆ ಮೂಡ 1.19 Cr. Bank Loan available. 20x30 2BHK 39 Lakh, Bank Loan Available, Mysore
9379056972

ತಕ್ಷಣ ಬೇಕಾಗಿದ್ದಾರೆ
ಬಿಳಿಕೆರೆ ಹತ್ತಿರ ಇರುವ GSR, H.P ಪೆಟ್ರೋಲ್ ಬಂಕ್‌ಗೆ ಮ್ಯಾನೇಜರ್ ಹೆಲ್ಪರ್ ಕ್ಯಾಶಿಯರ್ ಹುದ್ದೆಗಳಿಗೆ ಪುರುಷರು, ಮಹಿಳೆಯರು, ಹುಡುಗರು, ಹುಡುಗಿಯರು ಬೇಕಾಗಿದ್ದಾರೆ. ಸಂದರ್ಶನ ದಿನಾಂಕ: 15–09–2024 ಸಮಯ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3ರ ವರೆಗೆ ಸ್ಥಳ: GSR, H.P ಪೆಟ್ರೋಲ್ ಬಂಕ್ ಹುಲ್ಲೇನಹಳ್ಳಿ ಹೈವೆ ಬಿಳಿಕೆರೆ ಹತ್ತಿರ
9632393926

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ನಾಗಮಂಗಲ ಗಲಭೆ ಪೂರ್ವ ನಿಯೋಜಿತ

ಶ್ರೀಕಂಠೇಶ್ವರನ ದರ್ಶನ ಪಡೆದ ಕೇಂದ್ರ ಸಚಿವ ವಿ.ಸೋಮಣ್ಣ ಆರೋಪ



ಕೇಂದ್ರ ಸಚಿವ ವಿ.ಸೋಮಣ್ಣ ಶ್ರೀಕಂಠೇಶ್ವರನ ದರ್ಶನ ಪಡೆದರು.

ನಂಜನಗೂಡು, ಸೆ.13– ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿ ಗಣೇಶನ ಮೆರವಣಿಗೆ ವೇಳೆ ನಡೆದ ಗಲಭೆ ಪೂರ್ವ ನಿಯೋಜಿತ, ಪೊಲೀಸರ ವೈಫಲ್ಯ ಎಂದು ರಾಜ್ಯ ರೈಲ್ವೆ ಹಾಗೂ ಜಲಶಕ್ತಿ ಸಚಿವ ವಿ.ಸೋಮಣ್ಣ ಆರೋಪಿಸಿದರು.

ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಶುಕ್ರವಾರ ಭೇಟಿ ನೀಡಿ, ದೇವರ ದರ್ಶನ ಪಡೆದು ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ 2023ರಲ್ಲಿ ನಡೆದ ಗಲಭೆ ಪ್ರಕರಣಗಳಲ್ಲಿ ಸರ್ಕಾರ ಸರಿಯಾದ ಕ್ರಮ ವಹಿಸಿದ್ದರೆ, ಈ ರೀತಿಯ ಗಲಭೆ ನಡೆಯುತ್ತಿರಲಿಲ್ಲ. ಈ ಘಟನೆಯಲ್ಲಿ ಹತ್ತಾರು ಅಂಗಡಿಗಳಿಗೆ ಬೆಂಕಿ ಹಾಕಿರುವ ಸಮಾಜ ವಿರೋಧಿ ಶಕ್ತಿಗಳು ಅಟ್ಟಹಾಸ ಮೆರೆದಿವೆ. ಗಲಭೆಯಲ್ಲಿ ಪೆಟ್ರೋಲ್ ಬಾಂಬ್ ಬಳಕೆ, ಕಲ್ಲು ತೂರಾಟ ಗಮನಿಸಿದರೆ ಇಂದೊಂದು ಪೂರ್ವ ನಿಯೋಜಿತ ಕೃತ್ಯ. ಈ ಘಟನೆಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಭಾರತದ ಸಾರ್ವಭೌಮತ್ವ ಎತ್ತಿ ಹಿಡಿಯುವ ಸಲುವಾಗಿ ರಾಜ್ಯ ಸರ್ಕಾರ ಗಲಭೆಗೆ ಕಾರಣರಾದವರ ಮೇಲೆ ಕಠಿಣ ಕ್ರಮ ವಹಿಸಬೇಕು ಎಂದರು.

ನಂಜನಗೂಡಿನ ಆರ್‌ಪಿ ರಸ್ತೆಯಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಾಣ ಸೇರಿದಂತೆ ರೈಲ್ವೆ ಇಲಾಖೆಯಿಂದ ಆಗಬೇಕಿರುವ ಅಭಿವೃದ್ಧಿ ಕಾರ್ಯಗಳ ಪಟ್ಟಿಯನ್ನು ನೀಡಿದಲ್ಲಿ ಶಾಸಕ ದರ್ಶನ್ ಅವರಿಗೆ ಸಹಕಾರ ನೀಡಿ ಅಭಿವೃದ್ಧಿಪಡಿಸಲಾಗುವುದು ಎಂದರು.

ದೇವರ ದರ್ಶನ ಪಡೆದ ಸಚಿವ ವಿ.ಸೋಮಣ್ಣನವರಿಗೆ ದೇವಾಲಯದ ವತಿಯಿಂದ ದೇವರ ಶೇಷವಸ್ತ್ರ, ಪ್ರಸಾದ ನೀಡಲಾಯಿತು. ಈ ವೇಳೆ ಶಾಸಕರಾದ ಶ್ರೀವತ್ಸ, ಮಾಜಿ ಶಾಸಕ ಅಶ್ವಿನ್ ಕುಮಾರ್, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಬಿಜೆಪಿ ಮುಖಂಡ ಕುಂಬ್ರಹಳ್ಳಿ ಸುಬ್ಬಣ್ಣ, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಎಸ್.ಎಂ.ಕೆಂಪಣ್ಣ, ಮುಖಂಡರಾದ ಬದನವಾಳು ಮಂಜುನಾಥ್, ನಾಗೇಂದ್ರ, ಚಿಕ್ಕಮಾದಪ್ಪ, ಪುಟ್ಟಬುದ್ಧಿ, ಜೈಶಂಕರ್, ಸಂದೀಪ್, ಜಗದೀಶ್, ಮಧುರಾಜ್, ಉಮೇಶ್ ಮೋದಿ, ಶ್ರೀನಿವಾಸ ರೆಡ್ಡಿ, ನಗರಸಭಾ ಸದಸ್ಯರಾದ ಹೆಚ್.ಎಸ್.ಮಹದೇವಸ್ವಾಮಿ, ಮಹದೇವ ಪ್ರಸಾದ್, ವಾಟರ್ ಸಿದ್ದಪ್ಪ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಡಿವೈಎಸ್ಪಿ ರಘು, ದೇವಾಲಯದ ಇಓ ಜಗದೀಶ್ ಕುಮಾರ್ ಸೇರಿದಂತೆ ಇತರರಿದ್ದರು.

ಹನಗೋಡು ಪಿಡಿಓ ವರ್ಗಾವಣೆಗೆ ಒತ್ತಾಯಿಸಿ ಪ್ರತಿಭಟನೆ



ಪ್ರತಿಭಟನಾ ಸ್ಥಳಕ್ಕೆ ತಾಪಂ ಇಓ ಹೊಂಗಯ್ಯ ಭೇಟಿ ನೀಡಿ ಅಹವಾಲು ಸ್ವೀಕರಿಸಿದರು.

ಹನಗೋಡು, ಸೆ.13– ಹನಗೋಡು ಗ್ರಾಪಂ ಪಿಡಿಓ ಕಾರ್ಯ ವೈಖರಿ ಖಂಡಿಸಿ, ಅವರನ್ನು ಬೇರೆಡೆಗೆ ವರ್ಗಾವಣೆ ಮಾಡುವಂತೆ ಒತ್ತಾಯಿಸಿ ಗ್ರಾಪಂ ಸದಸ್ಯರು ಸಾರ್ವಜನಿಕರೊಂದಿಗೆ ಶುಕ್ರವಾರ ಗ್ರಾಪಂ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಿದರು.

ಗ್ರಾಪಂ ಅಧ್ಯಕ್ಷ ಚನ್ನಯ್ಯ ಮಾತನಾಡಿ, ಪಿಡಿಓ ಅನಿತಾ ಅವರು ಗ್ರಾಪಂಗೆ ಒಂದು ವರ್ಷವಾದರೂ ಇಲ್ಲಿವರೆಗೂ ಅಭಿವೃದ್ಧಿ ಕಾರ್ಯಗಳ ಬಗ್ಗೆ ಗಮನ ಹರಿಸಿಲ್ಲ. ಅಲ್ಲದೇ ಸಾರ್ವಜನಿಕರ ಸಮಸ್ಯೆಗಳಿಗೆ ಸಕಾಲಕ್ಕೆ ಸ್ಪಂದಿಸುತ್ತಿಲ್ಲ. ಅಧ್ಯಕ್ಷರು, ಸದಸ್ಯರೊಂದಿಗೆ ಅಗೌರವದಿಂದ ನಡೆದುಕೊಂಡು ಉಡಾಫೆಯಿಂದ ಮಾತನಾಡುತ್ತಾರೆ. ಸಾರ್ವಜನಿಕರು ನಿತ್ಯ ಕಚೇರಿಗೆ ಬಂದು ತಮ್ಮ ಕೆಲಸವಾಗದೇ ಹಿಡಿಶಾಪ ಹಾಕಿ ಹೋಗುತ್ತಿದ್ದಾರೆ. ಗ್ರಾಪಂಗೆ ಬರಬೇಕಾದ ಲಕ್ಷಾಂತರ ರೂ. ಕರ ಬಾಕಿ ಇದ್ದು, ಅದರ ವಸೂಲಿಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗಾಗಿ ಇಂತಹ ಬೇಜವಾಬ್ದಾರಿ ಅಧಿಕಾರಿಯನ್ನು ಕೂಡಲೇ ಬೇರೆಡೆಗೆ ವರ್ಗಾಯಿಸಬೇಕು. ಸ್ಥಳಕ್ಕೆ ಹಿರಿಯ ಅಧಿಕಾರಿಗಳು ಭೇಟಿ ನೀಡಿ ನಮ್ಮ ಬೇಡಿಕೆ ಈಡೇರಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ತಾಪಂ ಇಓ ಹೊಂಗಯ್ಯ, ಪ್ರತಿಭಟನಾಕಾರರ ಮನವೊಲಿಸಿ ಸಭೆ ನಡೆಸಿದರು. ಸಭೆಯಲ್ಲಿ ಪಿಡಿಓ ಕಾರ್ಯವೈಖರಿಗೆ ಅಸಮಾಧಾನ ವ್ಯಕ್ತಪಡಿಸಿದ ತಾಪಂ ಇಓ, ಅಧ್ಯಕ್ಷರು ಸೇರಿದಂತೆ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಭಿವೃದ್ಧಿ ಕಾರ್ಯ ಕೈಗೊಳ್ಳುವಂತೆ ಸೂಚಿಸಿದರು. ಅಲ್ಲದೇ ಪ್ರತಿಭಟನಾಕಾರರ ಮನವಿಯನ್ನು ಕೂಡಲೇ ಜಿಪಂ ಸಿಇಓಗೆ ತಲುಪಿಸುವುದಾಗಿ ಭರವಸೆ ನೀಡಿದ ಅವರು ಗ್ರಾಪಂನಲ್ಲಿ ಕೆಲಸ ಕಾರ್ಯ ನಡೆಯಲು ಅವಕಾಶ ಮಾಡಿಕೊಡಿ. ನಾನು ಕೂಡ ಹನಗೋಡು ಗ್ರಾಪಂ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತೇನೆ ಎಂದರು. ನಂತರ ಪ್ರತಿಭಟನಾಕಾರರು ಪ್ರತಿಭಟನೆ ಹಿಂಪಡೆದರು.

ಈ ವೇಳೆ ತಾಲೂಕು ಪಿಡಿಓ ಸಂಘದ ಅಧ್ಯಕ್ಷ ರಾಮಣ್ಣ, ಗ್ರಾಪಂ ಅಧ್ಯಕ್ಷ ಚೆನ್ನಯ್ಯ, ಉಪಾಧ್ಯಕ್ಷೆ ಜಯಲಕ್ಷ್ಮಿ, ಸದಸ್ಯರಾದ ಶಿವಣ್ಣ, ಸಂತೋಷ್, ರತ್ನ, ಛಾಯಾ, ಸಂಗೀತಾ, ಪವಿತ್ರ, ಬೋರೇಗೌಡ, ಈಶ್ವರ್, ಮಹದೇವನಾಯ್ಕ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು. ಗ್ರಾಮಾಂತರ ಠಾಣೆ ಪೊಲೀಸರು ಬಂದೋಬಸ್ತ್ ಕೈಗೊಂಡಿದ್ದರು.

ತಿ.ನರಸೀಪುರದಲ್ಲಿ ನಮ್ಮ ಕರ್ನಾಟಕ ಸೇನೆಗೆ ಚಾಲನೆ



ತಿ.ನರಸೀಪುರದಲ್ಲಿ ನಮ್ಮ ಕರ್ನಾಟಕ ಸೇನೆಗೆ ಚಾಲನೆ ನೀಡಲಾಯಿತು.

ತಿ.ನರಸೀಪುರ, ಸೆ.13– ಆಟೋ ಚಾಲಕರು ಸಂಘಟಿತರಾದರೆ ಮಾತ್ರ ಉತ್ತಮ ಜೀವನ ನಡೆಸಬಹುದು ಎಂದು ನಮ್ಮ ಕರ್ನಾಟಕ ಸೇನೆ ರಾಜ್ಯಾಧ್ಯಕ್ಷ ಬಸವರಾಜು ಪಡುಕೋಟೆ ತಿಳಿಸಿದರು.

ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಬಳಿ ಆಟೋ ಚಾಲಕರು ಆರಂಭಿಸಿರುವ ನಮ್ಮ ಕರ್ನಾಟಕ ಸೇನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಆಟೋ ಚಾಲಕರು ಪ್ರಯಾಣಿಕರನ್ನು ಸುರಕ್ಷಿತವಾಗಿ ಅವರ ಸ್ಥಳಕ್ಕೆ ತಲುಪಿಸುವ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸಿ ಎಂದರು.

ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್ ಮಾತನಾಡಿ, ಆಟೋ ಚಾಲಕರು ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಅಲ್ಲದೇ ಆಟೋವನ್ನು ಪರವಾನಗಿ ಇಟ್ಟುಕೊಂಡು ಚಾಲನೆ ಮಾಡುವಂತೆ ತಿಳಿಸಿದರು.

ಇದೇ ವೇಳೆ ಸಂಘಕ್ಕೆ ನೂತನ ಸದಸ್ಯರನ್ನು ಆಯ್ಕೆ ಮಾಡಿ ನೇಮಕಾತಿ ಪತ್ರ ವಿತರಿಸಲಾಯಿತು. ಈ ವೇಳೆ ಸಂಘದ ಗೌರವಾಧ್ಯಕ್ಷ ಅಂಬರೀಶ್, ತಾಲೂಕು ಅಧ್ಯಕ್ಷ ಎಂ.ಮಾದೇಶ್, ಉಪಾಧ್ಯಕ್ಷ ಗಣೇಶ್, ಪ್ರಧಾನ ಕಾರ್ಯದರ್ಶಿ ರಮೇಶ, ಸಂಚಾಲಕರು ರವಿ, ಪ್ರಚಾರ ಸಮಿತಿ ಅಧ್ಯಕ್ಷ ಬಸವರಾಜು, ಜಂಟಿ ಕಾರ್ಯದರ್ಶಿ ಸುಭಾಷ್, ನಿರ್ದೇಶಕರಾದ ಚೇತನ್, ಪ್ರದೀಪ್, ಮಹದೇವ ನಾಯಕ, ಕೃಷ್ಣ, ಸಂತೋಷ್, ರಘು, ಪ್ರದೀಪ್, ನಿಂಗರಾಜು, ಲೋಕಿ, ನಾಗೇಂದ್ರ, ವಿನೋದ, ಕಿರಣ, ರಾಮು, ಸೀನ ಹಾಗೂ ಜಿಲ್ಲಾಧ್ಯಕ್ಷ ಮುರುಗನ್ ಸೇರಿದಂತೆ ಇತರರಿದ್ದರು.

ಈ ಬಾರಿ ಅಂದಾಜು 9.8 ಕೋಟಿ ಕೆಜಿ ತಂಬಾಕು ಉತ್ಪಾದನೆ



ಹಿರೀಕ್ಯಾತನಹಳ್ಳಿ, ಸೆ.13– ಪ್ರಾಕೃತಿಕ ವಿಕೋಪದ ನಡುವೆಯೂ ರಾಜ್ಯದಲ್ಲಿ ತಂಬಾಕು ಉತ್ಪಾದನೆ 9.8 ಕೋಟಿ ಕೆಜಿಗೆ ಏರಿಕೆಯಾಗಬಹುದೆಂದು ಹರಾಜು ಮಂಡಳಿ ಅಂದಾಜಿಸಿದೆ ಎಂದು ತಂಬಾಕು ಮಂಡಳಿ ಪ್ರಾದೇಶಿಕ ವ್ಯವಸ್ಥಾಪಕ ಸುಬ್ಬರಾವ್ ತಿಳಿಸಿದ್ದಾರೆ.

ಕಳೆದ ಸಾಲಿನಲ್ಲಿ ರಾಜ್ಯದಲ್ಲಿ ಎಫ್‌ಸಿವಿ ತಂಬಾಕು 61 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿತ್ತು. ಈ ಸಾಲಿನಲ್ಲಿ 69 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದು, ಬೆಳೆ ಪ್ರದೇಶ ಶೇ.8.58 ರಷ್ಟು ಹೆಚ್ಚಾಗಿದೆ ಎಂದರು. ಕೇಂದ್ರ ಸರ್ಕಾರ ರಾಜ್ಯಕ್ಕೆ 10 ಕೋಟಿ ಕೆಜಿ ತಂಬಾಕು ಉತ್ಪಾದಿಸಲು ಅನುಮತಿ ನೀಡಿದೆ. ರಾಜ್ಯದ 10 ಮಾರುಕಟ್ಟೆ ವ್ಯಾಪ್ತಿಯಲ್ಲಿ ಬೆಳೆ ಸರ್ವೇ ನಡೆಸಿದ್ದು, ಹೆಚ್ಚು ಕಡಿಮೆ ಕೇಂದ್ರ ನೀಡಿದ ಗುರಿ ಸಮೀಪದಲ್ಲೇ ಉತ್ಪಾದನೆ ಇದೆ ಎಂದು ವರದಿಯಿಂದ ತಿಳಿದು ಬಂದಿದೆ ಎಂದರು.

ಕಾಳ ಸಂತೆ: ರೈತರು ಮಂಡಳಿ ನಿಯಮ ಉಲ್ಲಂಘಿಸಿ ಕಾಳಸಂತೆಯಲ್ಲಿ ತಂಬಾಕು ಮಾರಾಟ ಮಾಡಬಾರದು. ಒಂದು ವೇಳೆ ಮಾರಾಟ ಮಾಡಿ ಸಂಚಾರಿ ದಳಕ್ಕೆ ಸಿಕ್ಕಿ ಬಿದ್ದಲ್ಲಿ ನಿಯಮಾನುಸಾರ ದಂಡ ಹಾಗೂ ಮಂಡಳಿ ಕ್ರಮ ಜರುಗಿಸಲಿದೆ. ಮಧ್ಯವರ್ತಿಗಳ ಮಾತಿಗೆ ಮನಸೋತು ಮಾರಾಟ ಮಾಡದಂತೆ ಎಚ್ಚರಿಕೆ ವಹಿಸಬೇಕು. ಅಲ್ಲದೆ ಹುಡಿ ಸೊಪ್ಪು ಮಾರಾಟಕ್ಕೂ ಹರಾಜು ಮಾರುಕಟ್ಟೆಯಲ್ಲಿ ಅವಕಾಶ ಮಾಡಿ ಕೊಡಲಾಗಿದೆ. ರೈತರು ಹುಡಿ ಸೊಪ್ಪು ಮಾರಾಟ ಮಾಡಬಾರದು. ರೈತರಿಗೆ ಉತ್ತಮ ಮತ್ತು ಖಚಿತ ದರ ನೀಡುವ ವ್ಯವಸ್ಥೆ ಹೊಂದಿರುವುದರಿಂದ ಸಂತೆಕೋರರಿಗೆ ಅಕ್ರಮವಾಗಿ ಮಾರಾಟ ಮಾಡಿ ಪ್ರೋತ್ಸಾಹಿಸಬಾರದು ಎಂದು ಮನವಿ ಮಾಡಿದ್ದಾರೆ. ರೈತರಿಂದ ಕಾಳ ಸಂತೆಯಲ್ಲಿ ತಂಬಾಕು ಖರೀದಿಸಲು ಮಧ್ಯವರ್ತಿಗಳು ಬರುವ ಕುರಿತು ಮಂಡಳಿ ಜಾಗೃತ ದಳಕ್ಕೆ ಕರೆ ಮಾಡಿ ಮಾಹಿತಿ ನೀಡುವುದರಿಂದ ಕಾಳ ಸಂತೆ ನಿಯಂತ್ರಿಸಲು ಸಹಕಾರವಾಗಲಿದೆ. ರೈತರು ಜಾಗೃತಿದಳದ 9448491381, 9448403421 ಸಂಪರ್ಕಿಸಿ ದೂರು ನೀಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಚಿಲ್ಕುಂದ ಏತ ನೀರಾವರಿಯಿಂದ

ಹೆಚ್ಚುವರಿ 4 ಕೆರೆಗೆ ನೀರು ತುಂಬಿಸಲು ಚಿಂತನೆ

ಎಂಎಲ್‌ಸಿ ವಿಶ್ವನಾಥ್ ಹಬ್ಬನಕುಪ್ಪೆ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು.



ಹುಣಸೂರು, ಸೆ.13– ಬಹು ನಿರೀಕ್ಷಿತ ಚಿಲ್ಕುಂದ ಏತ ನೀರಾವರಿ ಯೋಜನೆ ಕಾಮಗಾರಿ 22 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡು 16 ಕೆರೆಗಳಿಗೆ ನೀರು ತುಂಬಿಸಿದ್ದು, ಹೆಚ್ಚುವರಿ 4 ಕೆರೆಗಳಿಗೆ ಯೋಜನೆ ವಿಸ್ತರಿಸುವ ಚಿಂತನೆ ಇದೆ. ಇದೇ ಕಾರಣಕ್ಕೆ ಹಬ್ಬನಕುಪ್ಪೆ ಗ್ರಾಮಕ್ಕೆ ತಜ್ಞರೊಂದಿಗೆ ಭೇಟಿ ನೀಡಿದ್ದೇವೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದರು.

ತಾಲೂಕಿನ ಹಬ್ಬನಕುಪ್ಪೆ ಗ್ರಾಮದ ಕೆರೆಗಳಿಗೆ ಭೇಟಿ ನೀಡಿ ಮಾತನಾಡಿದ ಅವರು, ನಾನು ಸಂಸದನಾಗಿದ್ದಾಗ ಚಿಲ್ಕುಂದ ಏತ ನೀರಾವರಿ ಯೋಜನೆಗೆ ಆರ್‌ಡಿಪಿಆರ್ ಇಲಾಖೆಯಿಂದ 7.5 ಕೋಟಿ ಅನುದಾನದಲ್ಲಿ ಚಾಲನೆ ನೀಡಲಾಗಿತ್ತು. ಅಂದಿನ ಶಾಸಕರು ಗುಣಮಟ್ಟದ ಕಾಮಗಾರಿ ನಡೆಸದ ಕಾರಣ ಯೋಜನೆ ಹಳ್ಳ ಹಿಡಿದಿತ್ತು. ರಾಜ್ಯದಲ್ಲಿ ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಸಿಎಂ ಆಗಿದ್ದ ಹೆಚ್.ಡಿ.ಕುಮಾರಸ್ವಾಮಿ ಅವರು 22 ಕೋಟಿ ಅನುದಾನ ಬಿಡುಗಡೆ ಮಾಡಿ 16 ಕೆರೆಗಳಿಗೆ ಲಕ್ಷ್ಮಣತೀರ್ಥ ನದಿಯಿಂದ ನೀರು ತುಂಬಿಸುವುದು ಮತ್ತು ಈ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಗೆ ಚಾಲನೆ ನೀಡಿದ್ದರು ಎಂದರು.

ಹಬ್ಬನಕುಪ್ಪೆ ಗ್ರಾಮ ವ್ಯಾಪ್ತಿಯ 2 ಮತ್ತು ಕೆ.ಬಿ.ಕೊಪ್ಪಲು ಗ್ರಾಮದ 2 ಕೆರೆ ಸೇರಿಸುವಂತೆ ಒತ್ತಾಯವಿತ್ತು. ಈ ಹಿನ್ನೆಲೆಯಲ್ಲಿ ಹೆಚ್ಚುವರಿ 2.5 ಕೋಟಿ ಅನುದಾನದಲ್ಲಿ ಯೋಜನೆ ಮುಂದುವರಿಸುವ ಉದ್ದೇಶದಿಂದ ನೀರಾವರಿ ಇಲಾಖೆ ತಜ್ಞರೊಂದಿಗೆ ಭೇಟಿ ನೀಡಿದ್ದೇವೆ ಎಂದರು. ಹಬ್ಬನಕುಪ್ಪೆ ಗ್ರಾಮಸ್ಥರು ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದರು. 2019ರ ಚುನಾವಣೆ ಸಂದರ್ಭ ಸ್ಥಳೀಯರ ಬೇಡಿಕೆ ಈಡೇರಿಸುವ ಭರವಸೆ ನೀಡಲಾಗಿತ್ತು. ಆ ಭರವಸೆಯನ್ನು ಹಾಲಿ ಶಾಸಕ ಜಿ.ಡಿ.ಹರೀಶ್ ಗೌಡರು ಈಡೇರಿಸಿದ್ದಾರೆ ಎಂದರು.

ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು, ಯೂರೋಪ್ ರಾಷ್ಟ್ರಗಳಲ್ಲಿ ಉಚಿತ ಯೋಜನೆ ಮಾದರಿ ರಾಜ್ಯದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನಗೊಳಿಸುವ ಪ್ರಯತ್ನ ನಡೆಸಿದ್ದಾರೆ. ಯೂರೋಪ್ ರಾಷ್ಟ್ರದ ಜನಸಂಖ್ಯೆ, ಬಡತನ ರೇಖೆಗೂ ಭಾರತದ ಆರ್ಥಿಕ ಸ್ಥಿತಿ ಮತ್ತು ಜನಸಂಖ್ಯೆಗೆ ಭಾರೀ ವ್ಯತ್ಯಾಸವಿದೆ. ಈಗಾಗಲೇ ಗ್ಯಾರಂಟಿ ಜಾರಿಗೊಳಿಸಿದ ಹಿಮಾಚಲ ಪ್ರದೇಶ ಸರ್ಕಾರ ಆರ್ಥಿಕ ದಿವಾಳಿಯಾಗಿದ್ದು, ಭವಿಷ್ಯದಲ್ಲಿ ರಾಜ್ಯವೂ ಇದೇ ಹಾದಿ ಹಿಡಿಯಲಿದೆ. ಕೃಷಿ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಗ್ಯಾರಂಟಿ ನೀಡಿದ್ದಾರೆ. ಸಾಮಾಜಿಕ ಬದಲಾವಣೆ ಕಾಣಬಹುದಿತ್ತು ಎಂದರು.

ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ



ಮೂಗೂರಲ್ಲಿ ಬಿಜೆಪಿ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಮುಖಂಡ ಡಾ.ರೇವಣ್ಣ ಚಾಲನೆ ನೀಡಿದರು.

ಮೂಗೂರು, ಸೆ.13– ಪ್ರಧಾನಿ ಮೋದಿ ಕೈ ಬಲಪಡಿಸಲು ಹಾಗೂ ವಿಕಸಿತ ಭಾರತ ನಿರ್ಮಾಣಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ನೋಂದಣಿ ಮಾಡುವ ಮೂಲಕ ಬಿಜೆಪಿ ಪಕ್ಷವನ್ನು ಬಲಪಡಿಸಬೇಕು ಎಂದು ಮುಖಂಡ ಡಾ.ರೇವಣ್ಣ ತಿಳಿಸಿದರು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಮೂಗೂರು ಬಿಜೆಪಿ ಶಕ್ತಿ ಕೇಂದ್ರದಲ್ಲಿ ಬಿಜೆಪಿ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮೋದಿಯವರು ಪಕ್ಷ ಸಂಘಟನೆಗೆ ಹಗಲಿರುಳು ಶ್ರಮಿಸುತ್ತಿದ್ದಾರೆ. ಅವರ ಕೈ ಬಲಪಡಿಸಲು ರಾಜ್ಯದಲ್ಲೂ ಪಕ್ಷವನ್ನು ತಳಮಟ್ಟದಿಂದ ಬಲಪಡಿಸಲು ಕಾರ್ಯಕರ್ತರು ಬೂತ್ ಮಟ್ಟದಿಂದಲೇ ಶ್ರಮಿಸಬೇಕು ಎಂದರು.

ಜಿಲ್ಲಾ ಕಾರ್ಯಕಾರಿಣಿ ಸಮಿತಿ ಮುಖಂಡ ಕರೋಹಟ್ಟಿ ಮಹದೇವಯ್ಯ ಮಾತನಾಡಿ, ಪಕ್ಷಕ್ಕೆ ಹೆಚ್ಚು ನೋಂದಣಿ ಮಾಡುವುದರಿಂದ ಕ್ಷೇತ್ರ ಹಾಗೂ ರಾಜ್ಯದಲ್ಲಿ ಪಕ್ಷ ಬಲಗೊಳ್ಳಲು ಸಾಧ್ಯ. ಆದ್ದರಿಂದ ಪ್ರತಿಯೊಬ್ಬ ಕಾರ್ಯಕರ್ತರು ವೈಯಕ್ತಿಕ ಭಿನ್ನಾಭಿಪ್ರಾಯ ಬದಿಗೊತ್ತಿ ಪ್ರತಿ ಬೂತ್‌ನಲ್ಲಿ 500 ಮಂದಿಯನ್ನು ಸದಸ್ಯರನ್ನಾಗಿ ಮಾಡಬೇಕು. ಪಕ್ಷದ ಹಿತದೃಷ್ಟಿಯಿಂದ ಮೂಗೂರು ಶಕ್ತಿ ಕೇಂದ್ರ ವ್ಯಾಪ್ತಿಯಲ್ಲಿ ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಕಾರ್ಯಕರ್ತರು ಮುಂದಾಗಬೇಕು ಎಂದು ಕರೆ ನೀಡಿದರು.

ಈ ಸಂದರ್ಭ ಜಿಲ್ಲಾ ಕಾರ್ಯಕಾರಿಣಿ ಸಮಿತಿ ಸದಸ್ಯ ಮೂಗೂರು ಎಂ.ಸಿದ್ದರಾಜು, ಗೌಡರ ಪ್ರಕಾಶ್, ಮೂಗೂರು ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ವಾಟಾಳುಪುರ ಸುರೇಶ್, ಡಾ.ಮಲ್ಲಿಕಾರ್ಜುನ, ಸುಜ್ಜಲೂರು ರೂಪೇಶ್, ಪ್ರಕಾಶ್, ಹರೀಶ್ ಗೌಡ, ಭಾಗ್ಯಮ್ಮ, ಮಾದಪ್ಪ, ಮಹದೇವಸ್ವಾಮಿ, ಪಾಪಣ್ಣ, ಚಿನ್ನಸ್ವಾಮಿ, ಪುಟ್ಟಮಾದಯ್ಯ ಇತರರಿದ್ದರು.

ಹೊಸಹುಂಡಿ ಪಿಎಸಿಎಸ್ ವಾರ್ಷಿಕ ಸಭೆ

ಮೈಸೂರು, ಸೆ.13– ಮೈಸೂರು ತಾಲೂಕು ಹೊಸ ಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಭೆಯನ್ನು ಸೆ.17(ಮಂಗಳ ವಾರ) ರಂದು ಬೆಳಗ್ಗೆ 10.30ಕ್ಕೆ ಸಂಘದ ಆವರಣದಲ್ಲಿ ಏರ್ಪಡಿಸಲಾಗಿದೆ.

ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಿ ಸಮಸ್ಯೆ ಬಗೆಹರಿಸಿ

ಹುಣಸೂರು ಉಪವಿಭಾಗದ ಡಿವೈಎಸ್ಪಿ ಗೋಪಾಲಕೃಷ್ಣ



ಡಿವೈಎಸ್ಪಿ ಗೋಪಾಲಕೃಷ್ಣ ಅಧ್ಯಕ್ಷತೆಯಲ್ಲಿ ಎಸ್‌ಸಿ, ಎಸ್‌ಟಿ ಕುಂದುಕೊರತೆ ಸಭೆ ನಡೆಯಿತು.

ಹೆಚ್.ಡಿ.ಕೋಟೆ, ಸೆ.13– ಒಂದು ಇಲಾಖೆಯಿಂದ ಯಾವುದೇ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ. ಎಲ್ಲಾ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಿದಾಗ ಮಾತ್ರ ಸಾರ್ವಜನಿಕರ ದೂರುಗಳಿಗೆ ಪರಿಹಾರ ಕಂಡು ಹಿಡಿಯಲು ಸಾಧ್ಯ ಎಂದು ಹುಣಸೂರು ಉಪವಿಭಾಗ ಡಿವೈಎಸ್ಪಿ ಗೋಪಾಲಕೃಷ್ಣ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಹೆಚ್.ಡಿ. ಕೋಟೆ ಪೊಲೀಸ್ ಠಾಣೆ ವತಿಯಿಂದ ನಡೆದ ಎಸ್‌ಸಿ–ಎಸ್‌ಟಿ ಕುಂದುಕೊರತೆ ಸಭೆಯಲ್ಲಿ ಸಮುದಾಯದ ಮುಖಂಡರಿಂದ ಸಮಸ್ಯೆ ಆಲಿಸಿ ಮಾತನಾಡಿದ ಅವರು, ಮರಣ ಹೊಂದಿದ ವ್ಯಕ್ತಿ ಮೃತ ದೇಹ ಇಟ್ಟುಕೊಂಡು ರಾಜಕೀಯ ಮಾಡ ಬೇಡಿ. ಇಂತಹ ಘಟನೆ ನಾಗರಿಕ ಸಮಾಜ ತಲೆತಗ್ಗಿಸುವ ವಿಚಾರ. ಈ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ಸಂದರ್ಭ ನಮ್ಮ ಇಲಾಖೆ ಗಮನಕ್ಕೆ ತನ್ನಿ. ನ್ಯಾಯ ಕೊಡಿಸಲು ಇಲಾಖೆ ಸದಾ ಸಿದ್ಧ ಎಂದರು.

ರಾಷ್ಟ್ರ ನಾಯಕರ ಸಮುದಾಯ ಭವನದ ಹೆಸರಿನಲ್ಲಿ ದೇವಸ್ಥಾನ ನಿರ್ಮಿಸುವುದು ಸರಿಯಲ್ಲ. ಈ ವಿಚಾರವಾಗಿ ಪರಿಶೀಲಿಸಿ ಕ್ರಮ ವಹಿಸಲಾಗುವುದು. ಹಾಡಿಗಳು ಮತ್ತು ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟದ ಬಗ್ಗೆ ದೂರುಗಳು ಕೇಳಿ ಬರುತ್ತಿದ್ದು, ಅದಕ್ಕೆ ಕಡಿವಾಣ ಹಾಕಿ, ಇದಕ್ಕೆ ಸಾರ್ವಜನಿಕರು ಸಹಕಾರ ನೀಡಬೇಕು ಎಂದರು.

ಆದಿವಾಸಿಗಳನ್ನು ಕಾಡಿನಿಂದ ಹೊರಗೆ ತಂದು ಸೌಲಭ್ಯ ಕಲ್ಪಿಸುತ್ತೇವೆಂದು ಹೇಳಿ ಅವರಿಗೆ ಸರಿಯಾದ ಸೌಲಭ್ಯ ನೀಡದೆ ಮತ್ತೆ ಕಾಡಿಗೆ ಅಟ್ಟುವ ಕೆಲಸ ಮಾಡಬೇಡಿ. ನಿಮ್ಮ ಜೊತೆ ಸದಾ ಪೊಲೀಸ್ ಇಲಾಖೆ ಇದ್ದು ನಿಮಗೆ ರಕ್ಷಣೆ ನೀಡುತ್ತವೆ ಎಂದರು.

ಮುಖಂಡ ಸಣ್ಣಕುಮಾರ್ ಮಾತನಾಡಿ, ತಾಲೂಕಿನ ನಂಜನಾಯಕನಪಾಳ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ 12 ಲಕ್ಷ ರೂ. ವೆಚ್ಚದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನ ಕಟ್ಟಲಾಗಿದೆ. ಆದರೆ ಇತ್ತೀಚೆಗೆ ದೇವಸ್ಥಾನವಾಗಿ ಪರಿವರ್ತನೆ ಮಾಡುತ್ತಿದ್ದು, ಈ ಸಂಬಂಧ ಇಲಾಖೆಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳಲು ಮುಂದಾಗಿಲ್ಲ ಎಂದು ದೂರಿದರು.

ಮುಖಂಡ ಚಾಕಹಳ್ಳಿ ಕೃಷ್ಣ ಮಾತನಾಡಿ, ತಾಲೂಕಿನಲ್ಲಿ ಕಳೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಳಪೆ ಫಲಿತಾಂಶ ಬಂದಿದೆ. ಸರ್ಕಾರಿ ಶಾಲೆಯಲ್ಲಿ ಬಹುತೇಕ ಎಸ್‌ಸಿ, ಎಸ್ಟಿ ಸಮುದಾಯದ ಮಕ್ಕಳು ಹೆಚ್ಚು ವಿದ್ಯಾಭ್ಯಾಸ ಮಾಡುತ್ತಿದ್ದು, ಇದರಿಂದ ಸಮುದಾಯದ ಶೈಕ್ಷಣಿಕ ಪ್ರಗತಿ ಕುಂಠಿತ ಆಗಿದೆ. ಈ ಬಗ್ಗೆ ಇಲಾಖೆ ಶಾಲೆಗಳಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದರು. ಬಿಇಓ ಕಾಂತರಾಜು ಮಾತನಾಡಿ, ಕಾರಣಗಳಿಂದ ಫಲಿತಾಂಶದಲ್ಲಿ ಏರು ಪೇರಾಗಿದೆ. ಮುಂದಿನ ದಿನಗಳಲ್ಲಿ ವಿಶೇಷ ತರಬೇತಿ ನೀಡಿ ಫಲಿತಾಂಶ ಉತ್ತಮ ಪಡಿಸಲು ತಂಡಗಳನ್ನು ರಚನೆ ಮಾಡಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸಭೆ ಗಮನಕ್ಕೆ ತಂದರು.

ಜಿಲ್ಲಾ ಎಸ್ಸಿ/ಎಸ್ಟಿ ಜಾಗೃತಿ ಸಮಿತಿ ಸದಸ್ಯ ವೇಣುಗೋಪಾಲ್ ಮಾತನಾಡಿ, ತಾಲೂಕಿನಲ್ಲಿ ಒಂದೇ ಕಡೆ ಕೆಲಸ ಮಾಡುತ್ತಾ ಅಕ್ರಮ ನಡೆಯಲು ಕಾರಣವಾ ಗಿರುವ ಕಂದಾಯ ಇಲಾಖೆ ಸಿಬ್ಬಂದಿಗಳನ್ನು ವರ್ಗಾವಣೆ ಮಾಡಬೇಕು ಎಂದರು.

ಪುರಸಭಾ ಸದಸ್ಯ ಎಚ್.ಸಿ ನರಸಿಂಹ ಮೂರ್ತಿ ಮಾತನಾಡಿದರು. ಸಭೆಯಲ್ಲಿ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಎಸ್‌ಐ ಪ್ರಕಾಶ್.ಬಿ, ಬಿಇಓ ಕಾಂತರಾಜು, ಅಬಕಾರಿ ಇನ್ಸ್‌ಪೆಕ್ಟರ್ ಶಿವರಾಜು, ಎಇಓ ರಘುನಾಥ್, ಬೋಗನಾಯಕ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಿಂದುಶ್ರೀ ಇದ್ದರು.

ಸಮಾಜ ಸೇವಕ ಎಸ್.ಶ್ರೀಕಾಂತ್‌ಗೆ ಸನ್ಮಾನ




ಮೈಸೂರು ತಾಲೂಕಿನ ಜಯಪುರದಲ್ಲಿ ವಿನಾಯಕ ಗೆಳೆಯರ ಬಳಗದಿಂದ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅನ್ನ ಸಂತರ್ಪಣೆಗೆ ವೈಯುಕ್ತಿಕ ಧನಸಹಾಯ ನೀಡಿದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಬಳಗದ ಸದಸ್ಯರು ಅಭಿನಂದಿಸಿದರು. ಗ್ರಾಪಂ ಸದಸ್ಯ ಎಂ.ನಾಗರಾಜು, ಮುಖಂಡ ಜವರನಾಯಕ ಮತ್ತು ಬಳಗದ ಸದಸ್ಯರು ಉಪಸ್ಥಿತರಿದ್ದರು.

ಮೈಮುಲ್‌ನಿಂದ ರೈತರಿಗೆ ಉಚಿತ ಪಶು ವೈದ್ಯಕೀಯ ಸೌಲಭ್ಯ

ದೊಡ್ಡಮುಲಗೂಡು ಡೈರಿ ವಾರ್ಷಿಕ ಮಹಾಸಭೆಯಲ್ಲಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು

ಗ್ರಾಮದಲ್ಲಿ ವ್ಯವಸಾಯ ನಂಬಿ ಜೀವನ ನಡೆಸುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಯಾವುದೇ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿಯಾಗಿರುವ ಉದಾಹರಣೆ ಇಲ್ಲ. ಆದರೆ ಹೈನುಗಾರಿಕೆಯಲ್ಲಿ ಬೆಂಬಲ ಬೆಲೆ ಸ್ಥಿರವಾಗಿರುತ್ತದೆ. ಹಾಲು ಉತ್ಪಾದಕರು ಎಷ್ಟೇ ಹಾಲನ್ನು ಉತ್ಪಾದಿಸಿದರೂ ಸಹಕಾರ ಸಂಘಗಳು ಪಡೆದು ಕೊಳ್ಳುತ್ತವೆ. ರೈತರಿಂದ ಪಡೆದ ಹಾಲನ್ನು ಶೇಖರಣೆ ಮಾಡಿ ಮಾರಾಟ ಮಾಡುವ ಮೂಲಕ ಸಮಯಕ್ಕೆ ಸರಿಯಾಗಿ ಬಟವಾಡೆ ಮಾಡುವ ಕೆಲಸವನ್ನು ಒಕ್ಕೂಟ ಮಾಡಿಕೊಂಡು ಬರುತ್ತಿದೆ. ಪ್ರತಿದಿನ ಒಕ್ಕೂಟಕ್ಕೆ 8.5 ಲಕ್ಷ ಲೀಟರ್ ಹಾಲು ಬರುತ್ತಿದ್ದು, ಈ ಪೈಕಿ 4.5 ಲಕ್ಷ ಲೀಟರ್ ಹಾಲನ್ನು ಮೊಸರು, ಮಜ್ಜಿಗೆ ಹಾಗೂ ಹಾಲಿನ ಉತ್ಪನ್ನಗಳನ್ನು ಮಾಡಿ ಮಾರಾಟ ಮಾಡಲಾಗುತ್ತಿದೆ. ಒಂದು ಲಕ್ಷ ಲೀಟರ್ ಹಾಲನ್ನು ಕೇರಳ, ಚೆನ್ನೈಗೆ ಮಾರಾಟ ಮಾಡಿದರೂ ಕೂಡ ಹೆಚ್ಚಿನ ಹಾಲು ಉಳಿಯುತ್ತಿದೆ. ಅದನ್ನು ಹಾಲಿನ ಪುಡಿ ಮಾಡುವ ಮೂಲಕ ಶೇಖರಣೆ ಮಾಡಿ ಉತ್ತಮ ಬೆಲೆ ಸಿಕ್ಕಾಗ ಮಾರಾಟ ಮಾಡಿ ರೈತರಿಗೆ ತೊಂದರೆಯಾಗದ ರೀತಿ ಹಣ ನೀಡುವ ಕೆಲಸವನ್ನು ಒಕ್ಕೂಟ ಮಾಡುತ್ತಿದೆ. - **ಚೆಲುವರಾಜು, ಮೈಮುಲ್ ಅಧ್ಯಕ್ಷ.**



ದೊಡ್ಡಮುಲಗೂಡು ಡೈರಿ ವಾರ್ಷಿಕ ಮಹಾಸಭೆಯನ್ನು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಉದ್ಘಾಟಿಸಿದರು.

ತಿ.ನರಸೀಪುರ, ಸೆ.13– ಹೈನುಗಾರಿಕೆ ಅಭಿವೃದ್ಧಿಗಾಗಿ ಮೈಮುಲ್ ರೈತರಿಗೆ ಪಶು ವೈದ್ಯಕೀಯ ಸೌಲಭ್ಯಗಳನ್ನು ಉಚಿತವಾಗಿ ನೀಡುತ್ತಿದೆ ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.

ತಾಲೂಕಿನ ದೊಡ್ಡಮುಲಗೂಡು ಡೈರಿ ಆವರಣದಲ್ಲಿ ಶುಕ್ರವಾರ ನಡೆದ 2023–2024ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮೈಮುಲ್ ವತಿಯಿಂದ ರಾಸುಗಳಿಗೆ ವಿಮೆ ಸೌಲಭ್ಯ ಕಲ್ಪಿಸಲಾಗಿದ್ದು, ವಿಮೆ ಒಟ್ಟು ಮೊತ್ತದಲ್ಲಿ ಒಕ್ಕೂಟವು ಶೇ.75 ರಷ್ಟು ನೀಡುತ್ತಿದ್ದು, ಉಳಿದ ಶೇ.25ರಷ್ಟನ್ನು ರೈತರಿಂದ ಪಡೆದು ಅನುಕೂಲ ಕಲ್ಪಿಸಿ ಕೊಡುತ್ತಿದೆ ಎಂದರು.

ಕಳೆದ 2 ವರ್ಷದಿಂದ ರೈತರಿಗೆ ಮ್ಯಾಟ್ ಮಿಲ್ಕಿಂಗ್ ಮಿಷನ್ ಹಾಗೂ ಚಾಪ್ ಕಟರ್‌ಗಳನ್ನು ನೀಡಿಲ್ಲ. ಇದೀಗ ರೈತರಿಂದ ಬೇಡಿಕೆ ಬಂದಿರುವ ಹಿನ್ನೆಲೆಯಲ್ಲಿ ಮುಂದಿನ ಎರಡ್ಮೂರು ತಿಂಗಳೊಳಗೆ ನೀಡಲಾಗುವುದು ಎಂದರು.

ಗ್ರಾಮದ ಹಾಲು ಉತ್ಪಾದಕರು ಸಂಘಕ್ಕೆ ಗುಣಮಟ್ಟದ ಹಾಲು ಪೂರೈಸುವ ಮೂಲಕ ಸಂಘ ಹಾಗೂ ಒಕ್ಕೂಟದ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್ ಮಾತನಾಡಿ, ಗ್ರಾಮದಲ್ಲಿ ರೈತರು ಉಪ ಕಸುಬನ್ನೇ ಮುಖ್ಯ ಕಸುಬನ್ನಾಗಿ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗುತ್ತಿರುವುದು ಉತ್ತಮ ಬೆಳವಣಿಗೆ. ಗ್ರಾಮದ ಸಹಕಾರ ಸಂಘವು ಉತ್ತಮ ಲಾಭಾಂಶದಲ್ಲಿ ನಡೆಯುತ್ತಿದೆ. ಅಲ್ಲದೇ ಜಿಲ್ಲೆಯಲ್ಲಿ 1200 ಸೊಸೈಟಿಗಳು ಕಾರ್ಯ ನಿರ್ವಹಿಸುತ್ತಿದ್ದು, ಬೆರಳೆಣಿಕೆ ಯಷ್ಟು ಡೈರಿಗಳು ಮಾತ್ರವೇ ನಷ್ಟ ಅನುಭವಿಸುತ್ತಿವೆ. ಉಳಿದೆಲ್ಲಾ ಸಹಕಾರ ಸಂಘಗಳು ಉತ್ತಮ ಲಾಭಾಂಶದೊಂದಿಗೆ ಲಾಭದಾಯಕವಾಗಿ ಮುನ್ನಡೆಯುತ್ತಿವೆ ಎಂದರು.

ಸಂಘದ ಸಿಇಓ ಡಿ.ಎಲ್.ಗುರು ಪ್ರಸಾದ್ ವಾರ್ಷಿಕ ವರದಿ ಮಂಡಿಸಿ ಷೇರುದಾರರ ಸಹಕಾರದೊಂದಿಗೆ ಪ್ರಸಕ್ತ ಸಾಲಿನಲ್ಲಿ ಸಂಘವು 7,22,718 ರೂ. ನಿವ್ವಳ ಲಾಭ ಗಳಿಸಿದೆ ಎಂದರು. ಇದೇ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಹಾಲು ಉತ್ಪಾದಕರಿಗೆ ಉಡುಗೊರೆ ಹಾಗೂ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ನಾಗರಾಜು ವಹಿಸಿದ್ದರು. ಸಂಘದ ಉಪಾಧ್ಯಕ್ಷ ಡಿ.ಎಂ.ಹರೀಶ್ ನಿರ್ದೇಶಕರಾದ ಮಲ್ಲರಾಜು, ಮಹೇಶ್, ಡಿ.ಎಸ್.ನವೀನ್ ಕುಮಾರ್, ಡಿ.ಸಿ. ಮಾದೇಗೌಡ, ಮಂಜು, ಜ್ಯೋತಿ, ಸೌಮ್ಯ, ಪುಟ್ಟಸಿದ್ದಮ್ಮ, ಗವಿಯಯ್ಯ, ಡಿ.ಸಿ.ಮಹದೇವ, ಸರ್ಕಾರಿ ನಾಮ ನಿರ್ದೇಶಿತ ನಿರ್ದೇಶಕ ಡಿ.ಕೆ.ಸತೀಶ್, ಮೈಮುಲ್ ವಿಸ್ತರಣಾಧಿಕಾರಿ ಆರ್. ಪ್ರಮೋದ್, ದಿವ್ಯಶ್ರೀ, ಡಾ.ದಿವಾಕರ್, ಪಶುವೈದ್ಯ ಡಾ.ಕಾರ್ತಿಕ್, ಮುಖಂಡ ಸ್ವಾಮಿಗೌಡ, ಹಾಲು ಪರೀಕ್ಷಕ ಜವನಯ್ಯ, ಗುಮಾಸ್ತ ಪಿ.ಮಹೇಶ್, ಸಹಾಯಕರಾದ ಡಿ.ಎಸ್.ಚಂದ್ರಶೇಖರ್, ಡಿ.ಆರ್. ಶಿವಪ್ರಸಾದ್ ಸೇರಿದಂತೆ ಷೇರುದಾರರು, ಗ್ರಾಮಸ್ಥರು ಹಾಜರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಮೈಸೂರು ಮಿತ್ರ

ಮುಡಾ ಸಾಮಾನ್ಯ ಸಭೆ ನಡೆಸದಿದ್ದರೆ ನ್ಯಾಯಾಲಯದ ಮೊರೆ

●ಸರ್ಕಾರಕ್ಕೆ ಕ್ರೆಡೈ ಅಧ್ಯಕ್ಷ ಡಿ.ಶ್ರೀಹರಿ ಎಚ್ಚರಿಕೆ ●ಸಭೆ ನಡೆಸದಿರುವುದರಿಂದ ಖಾಸಗಿ ಡೆವಲಪರ್ಸ್‌ಗಳಿಗೆ , ಸಾರ್ವಜನಿಕರಿಗೆ ತೊಂದರೆ ●ಮುಡಾ ಹಗರಣದಿಂದ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಹೊಡೆತ ●ಸಿಎಂ, ಉಸ್ತುವಾರಿ ಸಚಿವರು, ನಗರಾಭಿವೃದ್ಧಿ ಸಚಿವರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ ●ಸಭೆ ನಡೆಸದ ಕಾರಣ 15 ಸಾವಿರ ಕೋಟಿ ಸ್ಥಗಿತ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕ್ರೆಡೈನ ಅಧ್ಯಕ್ಷ ಡಿ.ಶ್ರೀಹರಿ ಮಾತನಾಡಿದರು.

ಮೈಸೂರು, ಸೆ.13(ಜಿಎ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಿಂದ ಸಾಮಾನ್ಯ ಸಭೆಗಳನ್ನು ನಡೆಸದಂತೆ ನಿರ್ಬಂಧ ಹೇರಿರುವುದರಿಂದ ಖಾಸಗಿ ಡೆವಲಪರ್ಸ್‌ಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗಿದ್ದು, ಆತಂಕದ ಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಕೂಡಲೇ ಸೂಕ್ತ ತೀರ್ಮಾನ ಕೈಗೊಳ್ಳಬೇಕು ಇಲ್ಲವಾದರೆ, ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ ಎಂದು(ಕಾನ್ಫೆಡರೇಷನ್ ಆಫ್ ರಿಯಲ್ ಎಸ್ಟೇಟ್ ಡೆವಲಪ್‌ಮೆಂಟ್ ಅಸೋಸಿಯೇಷನ್ ಆಫ್ ಇಂಡಿಯಾ) ಕ್ರೆಡೈನ ಅಧ್ಯಕ್ಷ ಡಿ.ಶ್ರೀಹರಿ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರಾಭಿವೃದ್ಧಿ ಇಲಾಖೆಯ ನಿಯಮದಂತೆ ಪ್ರತಿ ತಿಂಗಳು ಸಾಮಾನ್ಯ ಸಭೆ ನಡೆಸಬೇಕು. 50:50 ಅನುಪಾತದ ಹಗರಣವನ್ನು ಮುಂದಿಟ್ಟುಕೊಂಡು ಯಾವುದೇ ಸಭೆ ನಡೆಸುತ್ತಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ನಗರಾಭಿವೃದ್ಧಿ ಸಚಿವರಿಗೂ ಮನವಿ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಇದರಿಂದ ಮೈಸೂರಲ್ಲಿ ಅಂದಾಜು 15 ಸಾವಿರ ಕೋಟಿ ರೂ. ಹೋಲ್ಡ್ ಆಗಿದೆ. ಈಗಾಗಲೇ ಕೆಲ ಡೆವಲಪರ್ಸ್‌ಗಳು ನ್ಯಾಯಾಲಯದ ಮೊರೆ ಹೋಗಿದ್ದಾರೆ. ಮುಂದಿನ ದಿನಗಳಲ್ಲಿ ಸಂಸ್ಥೆ ವತಿಯಿಂದ ನಾವು ನ್ಯಾಯಾಲಯಕ್ಕೆ ಹೋಗುತ್ತೇವೆ ಎಂದರು.

ಈ ಹಗರಣದಿಂದ ಮೈಸೂರು ಮತ್ತು ರಿಯಲ್ ಎಸ್ಟೇಟ್ ಉದ್ಯಮ ಡ್ಯಾಮೇಜ್ ಆಗಿದೆ. ಮೈಸೂರಿನ ಅಭಿವೃದ್ಧಿಗೆ ಹೊಡೆತ ಬಿದ್ದಿದೆ. ಸರ್ಕಾರ ಮತ್ತು ಅಧಿಕಾರಿಗಳು ಸೇರಿ ಡ್ಯಾಮೇಜ್ ಸರಿಪಡಿಸಬೇಕು. ನಮ್ಮ ಸಂಸ್ಥೆಯಲ್ಲಿರುವವರು ಲೀಗಲ್ ಆಗಿದ್ದಾರೆ. 50:50 ಅನುಪಾತದಲ್ಲಿ ನಿವೇಶನ ಪಡೆದುಕೊಂಡಿಲ್ಲ ಎಂದು ಸ್ಪಷ್ಟ ಪಡಿಸಿ, ಮುಡಾ ಕೂಡಲೇ ಸಾಮಾನ್ಯ ಸಭೆ ನಡೆಸುವ ಮೂಲಕ ಈ ಡೆವಲಪರ್ಸ್‌ಗಳ ಬಡಾವಣೆಯ ನಿವೇಶನಗಳಿಗೆ ಕ್ಲಿಯರೆನ್ಸ್ ನೀಡಬೇಕು ಎಂದು ಆಗ್ರಹಿಸಿದರು.

ಬೃಹದಾಕಾರವಾಗಿ ಬೆಳೆಯುತ್ತಿರುವ ಮೈಸೂರು ರಿಯಲ್ ಎಸ್ಟೇಟ್ ಕಳೆದ ಎರಡು ದಶಕಗಳಲ್ಲಿ ವಾರ್ಷಿಕ ಶೇ.15 ರಿಂದ 20ರಷ್ಟು ಅಭಿವೃದ್ಧಿ ಕಂಡಿದೆ. ಈ ಪ್ರಕ್ರಿಯೆ ನಡೆದರೆ, ಮುಡಾಗೆ ಮತ್ತು ಕಂದಾಯ ಇಲಾಖೆಗೆ ಆದಾಯ ಹೆಚ್ಚಲಿದ್ದು, ಒಂದು ವರ್ಷದಲ್ಲಿ ಒಂದು ಸಬ್ ರಿಜಿಸ್ಟರ್ ಕಚೇರಿ ವ್ಯಾಪ್ತಿಗೆ 100 ಕೋಟಿ ಸಂಗ್ರಹವಾಗಲಿದೆ ಎಂದರು.

ಮುಡಾದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ತನಿಖೆ ಹಂತದಲ್ಲಿರುವ ನಿವೇಶನಗಳನ್ನು ಹೊರತು ಪಡಿಸಿ, ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸಿರುವ ಖಾಸಗಿ ಬಡಾವಣೆಗಳಲ್ಲಿ ಯಾವುದೇ ನ್ಯೂನತೆ ಇಲ್ಲದ ಕಾರಣ ಇವುಗಳಿಗೆ ಮುಡಾ ಸಭೆ ನಡೆಸಿ ಕ್ಲಿಯರೆನ್ಸ್ ನೀಡಬೇಕು. ಈಗಾಗಲೇ ಹಗರಣದ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆ ನಡೆಯದ ಕಾರಣ ಇವರೆಲ್ಲ ಸಮಸ್ಯೆಗೆ ಸಿಲುಕಿದ್ದಾರೆ. ಹೀಗಾಗಿ ಸರ್ಕಾರ ಹಾಗೂ ಮುಡಾ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕೆಂದು ಕೋರಿದರು.

ಮುಡಾದ ಸಾಮಾನ್ಯ ಸಭೆ ಕುರಿತು ಮುಡಾ ಅಧ್ಯಕ್ಷರೊಂದಿಗೆ ಚರ್ಚಿಸಿದಾಗ ಸದ್ಯದಲ್ಲಿಯೇ ನಡೆಸುತ್ತೇವೆಂದು ಭರವಸೆ ನೀಡಿದರು. ಆದರೆ, ನಗರಾಭಿವೃದ್ಧಿ ಸಚಿವರು ನೋಡೋಣ ಎಂದು ತಿಳಿಸಿದ್ದಾರೆ. ಇಲ್ಲಿ ಸಭೆ ನಡೆದು ಅದನ್ನು ಸರ್ಕಾರಕ್ಕೆ ಕಳುಹಿಸಿ ಆ ಮೂಲಕವೇ ಎಲ್ಲಾದಕ್ಕೂ ಅನುಮೋದನೆ ನೀಡಬೇಕಿದೆ ಈ ರೀತಿ ಮೈಸೂರಲ್ಲಿ ಎನ್‌ಓಸಿ ಪಡೆಯಲು 750 ಪ್ರಕರಣಗಳಿವೆ. ಮತ್ತೊಂದೆಡೆ ಹೊಸ ಯೋಜನೆಗಳಿಗೆ ಅನುಮೋದನೆ ನೀಡಬೇಕಿದೆ. ಎಲ್ಲರೂ ಸಾಲ ಮಾಡಿಕೊಂಡಿದ್ದಾರೆ. ಅದಕ್ಕೆ ಬಡ್ಡಿ ಕಟ್ಟಲು ಸಾಧ್ಯವಾಗುತ್ತಿಲ್ಲ. ಕಂಪ್ಲಿಷನ್ ಸರ್ಟಿಫಿಕೇಟ್ ನೀಡುತ್ತಿಲ್ಲ. ಇದರಿಂದ ಮುಂದೆ ಈ ಬಡ್ಡಿದಿಂದ ನಿವೇಶನದ ದರವೂ ಹೆಚ್ಚಲಿದೆ ಎಂದರು.

ಕಳೆದ 2023ರ ಸೆಪ್ಟೆಂಬರ್‌ನಲ್ಲಿ ಕಡೆಯ ಸಾಮಾನ್ಯ ಸಭೆ ನಡೆದಿದ್ದು, ಒಂದು ವರ್ಷದಿಂದ ಈ ಪ್ರಕ್ರಿಯೆಗಳು ನಡೆದಿಲ್ಲ. ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು, ನಗರಾಭಿವೃದ್ಧಿ ಸಚಿವರಿಗೆ ಮನವಿ ನೀಡಲಾಗಿದೆ. ನ್ಯಾಯಾಲಯಕ್ಕೆ ಈಗಾಗಲೇ ವೈಯಕ್ತಿಕವಾಗಿ ಕೆಲವು ಹೋಗಿದ್ದಾರೆ. ಮುಂದಿನ ದಿನಗಳಲ್ಲಿ ನಮ್ಮ ಸಮಸ್ಯೆ ಬಗೆಹರಿಯದಿದ್ದರೆ, ಕಾನೂನಾತ್ಮಕ ಹೋರಾಟ ಮಾಡಲಾಗುತ್ತದೆ. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಪದಾಧಿಕಾರಿಗಳಾದ ಕೆ.ಎನ್.ರವಿಶಂಕರ್, ಮುರಳೀಧರ್, ಹರೀಶ್ ಶೆಣೈ, ಮಧು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಕಾಲಾಪತ್ಥರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಡಬ್ಬಲ್ ಇಸ್ಮಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಭೀಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಎಆರ್‌ಎಂ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಕಳಿಂಗ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ವಿಕಾಸಪರ್ವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿ ಬಕಿಂಗ್ಹ್ಯಾಮ್ ಮರ್ಡರ್ಸ್ (ಹಿಂ): ಬೆ.10.45ಕ್ಕೆ, ಶಾಲಿವಾಹನ ಶಕೆ (ಕ): ಮ.1.05ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಸಂ.4ಕ್ಕೆ, ಎಆರ್‌ಎಂ (3ಡಿ) (ಮ): ರಾ.7.05ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ರಾ.9.55ಕ್ಕೆ.
ಸ್ಕ್ರೀನ್ 2	ಕಾಲಾಪತ್ಥರ್ (ಕ): ಬೆ.11.10ಕ್ಕೆ, ಸ್ತ್ರೀ 2 (ಹಿಂ): ಮ.1.35ಕ್ಕೆ, ಕಲ್ಜಿಗ (ಕ): ಸಂ.4.35ಕ್ಕೆ, ದಿ ಬಕಿಂಗ್ಹ್ಯಾಮ್ ಮರ್ಡರ್ಸ್ (ಹಿಂ): ರಾ.7.05ಕ್ಕೆ, ಕೊಂಡಲ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ರಾನಿ (ಕ): ಬೆ.10.45ಕ್ಕೆ, ಮ.1.45ಕ್ಕೆ, ಅನ್ನ (ಕ): ಸಂ.4.45ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ, ಕಿಷ್ಕಿಂಧಾ ಖಂಡಂ (ಮ): ರಾ.10ಕ್ಕೆ.
ಸ್ಕ್ರೀನ್ 4	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಬೆ.10.15ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ, ವಿಕಾಸಪರ್ವ (ಕ): ಮ.1.40ಕ್ಕೆ, ಉತ್ಸವಂ (ತೆ): ಸಂ.4ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಬೆ.10.25ಕ್ಕೆ, ರಾ.9.30ಕ್ಕೆ, ರಾನಿ (ಕ): ಮ.1.45ಕ್ಕೆ, ಕಾಲಾಪತ್ಥರ್ (ಕ): ಸಂ.4.35ಕ್ಕೆ, ಮಾತು ವದಲಾರ 2 (ತೆ): ಸಂ.6.50ಕ್ಕೆ.
ಸ್ಕ್ರೀನ್ 2	ಕಾಲಾಪತ್ಥರ್ (ಕ): ಬೆ.10.20ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.12.35ಕ್ಕೆ, ಸಂ.6.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.40ಕ್ಕೆ, ಎಆರ್‌ಎಂ (3ಡಿ) (ಮ): ರಾ.9.50ಕ್ಕೆ.
ಸ್ಕ್ರೀನ್ 3	ಇಬ್ಬನಿ ತಬ್ಬಿದ ಇಳೆಯಲಿ (ಕ): ಬೆ.10.45ಕ್ಕೆ, ಎಆರ್‌ಎಂ (3ಡಿ) (ಮ): ಮ.3.20ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.15ಕ್ಕೆ, ಕಳಿಂಗ (ತೆ): ರಾ.9.35ಕ್ಕೆ.
ಸ್ಕ್ರೀನ್ 4	ಶಾಲಿವಾಹನ ಶಕೆ (ಕ): ಬೆ.10.40ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.1.20ಕ್ಕೆ, ಕಲ್ಜಿಗ (ಕ): ಸಂ.4.25ಕ್ಕೆ, ರಾನಿ (ಕ): ಸಂ.6.40ಕ್ಕೆ, ಉತ್ಸವಂ (ತೆ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾನು ಶಾಸಕನಾಗಿದ್ದರೆ ಪ್ರತಿ ದಿನ ಜಗಳ, ಕಿತ್ತಾಟದಲ್ಲಿ ಕಾಲ ಕಳೆಯಬೇಕಿತ್ತು

ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದೆ ಒಳ್ಳೆಯದಾಯಿತು: ಸೋಮಣ್ಣ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಸೆ.13(ಬಿಎಲ್ ಯು)– ಮೈಸೂರಿನ ವರುಣ ಅಥವಾ ಚಾಮರಾಜ ನಗರದಲ್ಲಿ ನಾನು ಶಾಸಕನಾಗಿ ಆಯ್ಕೆಯಾಗಿದ್ದರೆ ಬಿಜೆಪಿ ಸಂಖ್ಯೆ 66 ಇರುವುದು 67 ಆಗಿರುತ್ತಿತ್ತು, ಆದರೆ ಪ್ರತಿದಿನ ಜಗಳ, ಕಿತ್ತಾಟದಲ್ಲಿ ಕಾಲ ಕಳೆಯಬೇಕಿತ್ತು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅಭಿಪ್ರಾಯಪಟ್ಟಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ನಾನು ಶಾಸಕನಾಗಿ ಗೆಲ್ಲದಿರುವುದು ಒಳ್ಳೆಯದಾಯಿತು ಎಂಬ ಧಾಟಿಯಲ್ಲಿ ಮಾತನಾಡಿದರು.

ನಾನು ಕೇಂದ್ರ ಮಂತ್ರಿಯಾಗಿ ನಾಳೆಗೆ ಮೂರು ತಿಂಗಳಾಗುತ್ತದೆ. ಅನಿವಾರ್ಯವಾಗಿ ಆಗುವ ಕೆಲವು ಕಹಿ ಘಟನೆಗಳಿಂದ ಮುಂದೆ ಒಳ್ಳೆಯದಾಗುತ್ತದೆ ಎಂಬುದಕ್ಕೆ ನಾನೇ ಒಳ್ಳೆಯ ನಿದರ್ಶನ ಎಂದು ವರುಣ ಹಾಗೂ ಚಾಮರಾಜ ನಗರ ವಿಧಾನಸಭೆಯ ಸೋಲಿನ ಕಹಿ ಘಟನೆಯನ್ನು ಮೆಲುಕು ಹಾಕಿದರು.

ನಾನು ತುಮಕೂರಿನಲ್ಲಿ ಸ್ಪರ್ಧೆ ಮಾಡಲು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಅವಕಾಶ ಮಾಡಿಕೊಟ್ಟರು. ಈಗ ನನಗೆ ದೊಡ್ಡ ಸ್ಥಾನ ದೊರೆತಿದೆ. ಈ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವೆ ಎಂದು ಭರವಸೆ ನೀಡಿದರು.

ಈ ತಿಂಗಳು ದೇಶದಲ್ಲಿ 13 ವಂದೇ ಭಾರತ್ ರೈಲು ಲೋಕಾರ್ಪಣೆಗೊಳ್ಳುತ್ತಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಿದೆ ಎಂದು ಸೋಮಣ್ಣ ತಿಳಿಸಿದರು.

ರೈಲ್ವೆ ಸಚಿವರಾದ ನಂತರ ಇದೇ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ ಸೋಮಣ್ಣ ಅವರನ್ನು ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಅಭಿ ನಂದಿಸಿದರು. ಸಂಸದ ಯದುವೀರ್, ಮಾಜಿ ಸಂಸದ ಪ್ರತಾಪ್ ಸಿಂಹ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಾಜಿ ಶಾಸಕರಾದ ಸಾ.ರಾ.ಮಹೇಶ್, ತೋಂಟದಾರ್ಯ ಸೇರಿದಂತೆ ಇತರರು ಸಭೆಯಲ್ಲಿ ಹಾಜರಿದ್ದರು.

ಮರೆವಿನ ಕಾಯಿಲೆ ಬಗ್ಗೆ ಜಾಗೃತಿಗಾಗಿ ಚಾ.ಬೆಟ್ಟಕ್ಕೆ ಚಾರಣ

ದೈಹಿಕ ಕಸರತ್ತಿನಿಂದ ಆರೋಗ್ಯ ಕಾಪಾಡಲು ಸಾಧ್ಯ

ಮೈಸೂರು, ಸೆ.13(ಜಿಎ)–ಆಲ್ಜೈಮರ್ಸ್ ರಿಲೇಟಡ್ ಡಿಸಾರ್ಡರ್ ಸೊಸೈಟಿ ಆಫ್ ಇಂಡಿಯಾವು (ಎಆರ್‌ಡಿಎಸ್‌ಐ) ಶಾರದಾವಿಲಾಸ ಫಾರ್ಮಸಿ ಕಾಲೇಜಿನ ಸಹಯೋಗದಲ್ಲಿ ನಮ್ಮ ನಡಿಗೆ ಆರೋಗ್ಯದೆಡೆಗೆ ಶೀರ್ಷಿಕೆಯಡಿ ಮರೆವಿನ ಕಾಯಿಲೆಯ ಬಗ್ಗೆ ಜಾಗೃತಿಗಾಗಿ ಗುರುವಾರ ಚಾಮುಂಡಿಬೆಟ್ಟಕ್ಕೆ ಏರ್ಪಡಿಸಲಾಗಿದ್ದ ಚಾರಣಕ್ಕೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಚಾಲನೆ ನೀಡಿದರು.



ಮರೆವಿನ ಕಾಯಿಲೆಯ ಜಾಗೃತಿಗಾಗಿ ಏರ್ಪಡಿಸಿದ್ದ ಚಾರಣಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಪ್ರತಿಯೊಬ್ಬರಿಗೂ ಆರೋಗ್ಯ ಮುಖ್ಯ. ಇದಕ್ಕಾಗಿ ಒಂದಲ್ಲ ಒಂದು ರೀತಿಯ ದೈಹಿಕ ಕಸರತ್ತು ಮಾಡಬೇಕಾಗುತ್ತದೆ. ವಯಸ್ಸಾದ ನಂತರ ಮರೆಗುಳಿತನ ಸಮಸ್ಯೆ ಕಾಡುತ್ತದೆ. ಈ ಬಗ್ಗೆ ಅರಿವು ಮೂಡಿಸುವುದು ಉತ್ತಮವಾದುದು ಎಂದರು.

ಮುಖ್ಯ ಅತಿಥಿಯಾಗಿದ್ದ ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷೆ ಪಲ್ಲವಿ ಅರುಣ್ ಮಾತನಾಡಿ, ಮರೆವಿನ ಕಾಯಿಲೆಯ ಗಂಭೀರತೆ ಅರಿತು ಈ ಬಗ್ಗೆ ಜಾಗೃತಿ ಮೂಡಿಸುತ್ತಿರುವುದು ಒಳ್ಳೆಯದು ಎಂದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕಿ ಡಾ.ಪಿ. ಸಂಧ್ಯಾ ಮಾತನಾಡಿ, ಯಾವುದೇ ರೋಗವಾದರೂ ಮುನ್ನೆಚ್ಚರಿಕೆ ಮುಖ್ಯವಾಗುತ್ತದೆ. ಮರೆಗುಳಿತನದಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಅರಿವಿದ್ದಲ್ಲಿ ಹೆಚ್ಚಿನ ಅನಾಹುತ ತಡೆಯಬಹುದು ಎಂದರು.

ಶಾರದಾವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಹನುಮಂತಾಚಾರ್ ಜೋಶಿ ಮಾತನಾಡಿ, ಮರೆಗುಳಿ ಕಾಯಿಲೆಯು ಬುದ್ಧಿಮಾಂದ್ಯತೆಯ ಅತ್ಯಂತ ಸಾಮಾನ್ಯ ಕಾರಣವಾಗಿದೆ. ಅಸಹಜ ಮೆದುಳಿನ ಅಂಗಾಂಶ ಬದಲಾವಣೆಗಳಿಂದ ಇದು ಉಂಟಾಗುತ್ತದೆ ಎಂದರು.

ಚಾರಣದಲ್ಲಿ ಶಾರದಾವಿಲಾಸ ಫಾರ್ಮಸಿ ಕಾಲೇಜು, ಎಟಿಎಂಇ ಮತ್ತಿತರ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಚಾಮುಂಡಿಬೆಟ್ಟದಲ್ಲಿ ಮರೆಗುಳಿತನದ ಬಗ್ಗೆ ಅರಿವು ಮೂಡಿಸಲಾಯಿತು. ಅಲ್ಲದೇ ಆಸಕ್ತರಿಗೆ ಆರೋಗ್ಯ, ನೆನಪಿನ ಶಕ್ತಿ ತಪಾಸಣೆ ಕೂಡ ಮಾಡಲಾಯಿತು.

ಎಆರ್‌ಡಿಎಸ್‌ಐ ಉಪಾಧ್ಯಕ್ಷ ಜಿ.ಎಸ್. ಗಣೇಶ್, ಕಾರ್ಯದರ್ಶಿ ಕೆ.ಆರ್. ಗಣೇಶ ರಾವ್ ಮತ್ತಿತರರು ಉಪಸ್ಥಿತರಿದ್ದರು.

ಕ್ಷೇತ್ರ ಶಿಕ್ಷಣಾಧಿಕಾರಿಗೆ ಅಭಿನಂದನೆ



ಮೈಸೂರು ತಾಲೂಕಿನ ಕೀಳನಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಶುಕ್ರವಾರ ಭೇಟಿ ನೀಡಿದ ನೂತನ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್ ಅವರನ್ನು ಎಸ್‌ಡಿಎಂಸಿ ವತಿಯಿಂದ ಅಭಿನಂದಿಸಲಾಯಿತು. ಗ್ರಾಮದ ಹಿರಿಯ ಮುಖಂಡ ಮಹದೇವಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಮಹೇಶ್, ಸದಸ್ಯ ನಿಂಗಪ್ಪ, ಡಯೆಟ್ ಉಪನ್ಯಾಸಕಿ ಜಯಂತಿ, ಶಾಲೆ ಮುಖ್ಯ ಶಿಕ್ಷಕ ಮಾಲಂಗಿ ಸುರೇಶ್, ಸಹ ಶಿಕ್ಷಕರಾದ ಮಂಜುಳಾ, ತಸ್ರೀನಾ ಬಾನು, ಶಿಕ್ಷಕರ ಸಂಘದ ಪದಾಧಿಕಾರಿಗಳಾದ ಮಮತಾ, ರೇಣುಕಾ, ಶ್ಯಾಮಲಾ, ರಾಧಾ ಇದ್ದರು.

ನವದೆಹಲಿಯ ಇನ್ಸ್ಪೈರ್ ಮಾನಕ್ ವಸ್ತುಪ್ರದರ್ಶನದಲ್ಲಿ ಭಾಗಿ



ಸೆ. 17 ರಿಂದ 19 ರವರೆಗೆ ನವದೆಹಲಿಯಲ್ಲಿ ಆಯೋಜಿಸಿರುವ ರಾಷ್ಟ್ರಮಟ್ಟದ ಇನ್ಸ್ಪೈರ್ ಮಾನಕ್ ವಸ್ತು ಪ್ರದರ್ಶನದಲ್ಲಿ ಭಾಗವಹಿಸಲು ಮೈಸೂರು ಜಿಲ್ಲೆಯಿಂದ ತೆರಳುತ್ತಿರುವ ಮೈಸೂರು ಉತ್ತರ ವಲಯದ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿ ಚಿ. ನಿಶಾಲ್ ಬೆಳ್ಳಾಲ್ ಅವರಿಗೆ ಮೈಸೂರು ಜಿಲ್ಲೆಯ ಇನ್ಸ್ಪೈರ್ ಮಾನಕ್ ನೋಡಲ್ ಅಧಿಕಾರಿ ಹಾಗೂ ಡಯಟ್ ಉಪನ್ಯಾಸಕರಾದ ಶ್ರೀಮತಿ ಎನ್. ಜಯಂತಿ ಶುಭ ಕೋರಿದರು. ರಾಮಕೃಷ್ಣ ವಿದ್ಯಾಶಾಲೆಯ ಪ್ರಾಂಶುಪಾಲ ಚಂದ್ರಶೇಖರ್, ಮಾರ್ಗದರ್ಶಿ ಶಿಕ್ಷಕ ಸಾಗರ್ ಉಪಸ್ಥಿತರಿದ್ದರು.

ಇಂದು ಗಾಲ್ಫ್ ಕ್ಲಬ್ ಹೌಸ್‌ನಲ್ಲಿ ಕಾರ್ಯಾಗಾರ

ಮೈಸೂರು, ಸೆ13(ಜಿಎ)–ನರೆಡ್ಕೊ ಮೈಸೂರು ಶಾಖೆ ವತಿಯಿಂದ ಸೆ.14 ರಂದು ಬೆಳಗ್ಗೆ 10.30ಕ್ಕೆ ರೇಸ್ ಕೋರ್ಸ್ ರಸ್ತೆಯ ಚಾಮ ರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್ ಹೌಸ್ ಸಭಾಂಗಣದಲ್ಲಿ 'ರೀಟೈನಿಂಗ್ ವಾಲ್ ಅಥವಾ ತಡೆಗೋಡೆ– ಲ್ಯಾಂಡ್ ಡೆವಲಪರ್ಸ್ ದೃಷ್ಟಿಕೋನ' ವಿಷಯ ಕುರಿತು ಒಂದು ದಿನದ ಕಾರ್ಯಾಗಾರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷಡಾ.ರಾಘವೇಂದ್ರ ಪ್ರಸಾದ್ ಈ ವಿಷಯ ತಿಳಿಸಿ, ಕಟ್ಟಡ ನಿರ್ಮಾಣದ ದಿಗ್ಗಜರಾದ ಉಮೇಶ್ ಬಿ.ರಾವ್, ಪ್ರೊ.ಮದೀರ ಆರ್.ಮಾಧವ್, ಎ.ಸಿ.ಶಿವ ಕುಮಾರ್ ಮಾಹಿತಿ ನೀಡಲಿದ್ದಾರೆ. ಕಾರ್ಯಾಗಾರವನ್ನು ನಗರದ ಬಿಲ್ಡರ್ಸ್, ಡೆವಲಪರ್‌ಗಳು, ಸಿವಿಲ್ ಎಂಜಿನಿಯರ್‌ಗಳು, ಸಿವಿಲ್ ಎಂಜಿನಿಯರಿಂಗ್ ಹಾಗೂ ಆರ್ಕಿಟೆಕ್ಟ್ ವಿದ್ಯಾರ್ಥಿಗಳ ಜ್ಞಾನ ವರ್ಧನೆಗೆ ಆಯೋ ಜಿಸಲಾಗಿದೆ ಕಟ್ಟಡ ನಿರ್ಮಾಣದ ಉದ್ಯಮದಲ್ಲಿ ನಿರ್ಮಾಣ ತಂತ್ರಜ್ಞಾನ ಇತ್ತೀಚಿನ ಬೆಳವಣಿಗೆಗೆ ಅಗತ್ಯವಾಗಿದೆ. ಹೀಗಾಗಿ ಈ ಕಾರ್ಯಾಗಾರ ಉಪಯುಕ್ತವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ವಿ.ಸಿ.ರವಿಕುಮಾರ್, ಸುಧೀಂದ್ರ ಆದಿಶೇಷನ್ ಗೌಡ, ಎಪಿ.ನಾಗೇಶ್ ಉಪಸ್ಥಿತರಿದ್ದರು.

ಮನೆ ಬೀಗ ಮುರಿದು ಬೆಳ್ಳಿ ಪದಾರ್ಥ ಕಳವು

ಮೈಸೂರು, ಸೆ.13– ಹಾಡಹಗಲೇ ಮನೆಯ ಬೀಗ ಮುರಿದು ಬೆಳ್ಳಿ ವಸ್ತುಗಳನ್ನು ದೋಚಿರುವ ಘಟನೆ ಮೈಸೂರಿನ ಜೆಎಸ್‌ಎಸ್ ಲೇಔಟ್‌ನಲ್ಲಿ ನಡೆದಿದೆ.

ಇಲ್ಲಿನ ಎರಡನೇ ಹಂತದ ನಿವಾಸಿ ಪ್ರಶಾಂತ್ ಮನೆಯ ಬೀಗ ಮುರಿದು ಒಳನುಗ್ಗಿರುವ ಕಳ್ಳರು, ಗೋಡೆ ಬೀರುವಿನ ಡ್ರಾಯರ್ ಮೀಟಿ ಪೂಜಾ ಸಾಮಾಗ್ರಿಗಳು ಸೇರಿದಂತೆ ಸುಮಾರು 1.20 ಲಕ್ಷ ರೂ. ಮೌಲ್ಯದ ಬೆಳ್ಳಿ ವಸ್ತುಗಳನ್ನು ಕಳವು ಮಾಡಲಾಗಿದೆ.

ಪ್ರಶಾಂತ್ ಅವರು ಸೆ.10ರಂದು ಬೆಳಗ್ಗೆ ಮನೆಗೆ ಲಾಕ್ ಮಾಡಿಕೊಂಡು, ಸಹಾಯಕ ಪ್ರಾಧ್ಯಾಪಕಿಯಾಗಿರುವ ತಮ್ಮ ಪತ್ನಿಯನ್ನು ಕಾಲೇಜಿಗೆ ಡ್ರಾಪ್ ಮಾಡಿ ಅವರು ಚಾಮ ರಾಜನಗರಕ್ಕೆ ತೆರಳಿದ್ದರು. ಪ್ರಶಾಂತ್ ಬರುವುದು ತಡವಾಗಿದ್ದರಿಂದ ಅವರ ಪತ್ನಿ ಜೆಎಸ್‌ಎಸ್ ಲೇಔಟ್‌ನಲ್ಲಿರುವ ಚಿಕ್ಕಪ್ಪನ ಮನೆಯಲ್ಲಿದ್ದರು. ಪ್ರಶಾಂತ್, ಚಿಕ್ಕಪ್ಪನ ಮನೆಯಲ್ಲಿದ್ದ ಪತ್ನಿಯನ್ನು ಕರೆದುಕೊಂಡು ತಮ್ಮ ಮನೆಗೆ ಬಂದಾಗ ಮುಂಬಾಗಿಲು ತೆರೆದಿತ್ತು ಅದರ ಲಾಕ್ ಒಡೆದಿದ್ದರಿಂದ ಗಾಬರಿಯಿಂದ ಒಳಹೋಗಿ ನೋಡಿದಾಗ ಬೆಡ್ ರೂಂನಲ್ಲಿ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಗೋಡೆಬೀರುವಿನ ಡ್ರಾಯರಲ್ಲಿದ್ದ ಬೆಳ್ಳಿ ವಸ್ತುಗಳನ್ನು ಕಳವು ಮಾಡಲಾಗಿತ್ತು ಈ ಸಂಬಂಧ ಪ್ರಶಾಂತ್ ದೂರಿನನ್ವಯ ಆಲನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅ.3ರಂದು ಪಿಎಸ್‌ಐ ನೇಮಕಾತಿ ಪರೀಕ್ಷೆ ಖಚಿತ

ಬೆಂಗಳೂರು, ಸೆ.13– ಪಿಎಸ್‌ಐ ಹುದ್ದೆಗಳ ನೇಮಕಾತಿಗಾಗಿನ ಪರೀಕ್ಷೆಯನ್ನು ಅಕ್ಟೋಬರ್ 3ರಂದು ನಡೆಸಲು ನಿರ್ಧರಿಸಲಾಗಿದೆ ಎಂದು ಗೃಹಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದ್ದಾರೆ. 402 ಪಿಎಸ್‌ಐ ಹುದ್ದೆಗಳಿಗೆ ಮೊದಲಿಗೆ ಸೆ.22ರಂದು ಪರೀಕ್ಷೆ ನಡೆಸಲು ನಿರ್ಧರಿಸಲಾಗಿತ್ತು ಪರೀಕ್ಷೆ ಮುಂದೂಡಬೇಕೆಂಬ ಒತ್ತಾಯ ಎದುರಾಗಿದ್ದರಿಂದಾಗಿ ಸೆ.28ರಂದು ನಡೆಸಲು ತೀರ್ಮಾನಿಸಲಾಗಿತ್ತು. ಆ ದಿನ ಯುಪಿಎಸ್‌ಸಿಯ ಇಂಗ್ಲಿಷ್ ಕಡ್ಡಾಯ ಪರೀಕ್ಷೆ ಇರುವುದರಿಂದ ಅಂತಿಮವಾಗಿ ಅ.3ಕ್ಕೆ ನಡೆಸಲು ತೀರ್ಮಾನಿಸಲಾಗಿದೆ. ಈ ಕುರಿತು ಕೆಇಎ ಅವರು ಅಧಿಕೃತವಾಗಿ ಪ್ರಕಟಣೆ ಹೊರಡಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಮೈಸೂರು ಹೆರಿಟೇಜ್ ಸಿಟಿ ಕಾಲೇಜ್‌ನಲ್ಲಿ ಓಣಂ ಸಂಭ್ರಮ

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ನಾನಾ ಸ್ಪರ್ಧೆಗಳ ಆಯೋಜನೆ




ಮೈಸೂರು, ಸೆ.13–ಮೈಸೂರು ಕುವೆಂಪು ನಗರದ ಹೆರಿಟೇಜ್ ಸಿಟಿ ಕಾಲೇಜು ಕ್ಯಾಂಪಸ್‌ನಲ್ಲಿ 'ಓಣವಿಲ್ –2024' (ಓಣಂ) ಸಂಭ್ರಮ ಆಚರಿಸಲಾಯಿತು. ವಿದ್ಯಾರ್ಥಿಗಳಿಗೆ ನಾನಾ ಸಾಂಸ್ಕೃತಿಕ ಕಾರ್ಯಕ್ರಮ, ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಉತ್ಸವಕ್ಕೆ ಮೈಸೂರು ಕೇರಳ ಸಮಾಜದ ಅಧ್ಯಕ್ಷರಾದ ಪಿ.ಎಸ್.ನಯ್ಯರ್ ಸಾಂಪ್ರದಾಯಿಕ ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಈ ಸಮಯದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಎ.ಬಿ. ಇಬ್ರಾಹಿಂ, ಪ್ರಿನ್ಸಿಪಾಲರು, ಅಧ್ಯಾಪಕ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಇದೇ ವೇಳೆ ವಿದ್ಯಾರ್ಥಿಗಳಿಗೆ ತಿರುವತಿರ ಡಾನ್ಸ್, ಗಾಯನ, ಮ್ಯೂಸಿಕಲ್ ಚೇರ್, ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮ, ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಸಾಂಪ್ರದಾಯಿಕ ಚಂಡೇಮೇಳ, ಹೂವಿನ ಹಾಸು ಸ್ಪರ್ಧೆ, ಪಡಂವಲ್ಲಿತಗ್ ಆಫ್ ವಾರ್ ಈ ದಿನದ ಪ್ರಮುಖ ಆಕರ್ಷಣೆ ಗಳಾಗಿದ್ದವು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಕಡೆಯಲ್ಲಿ ಬಹುಮಾನ ನೀಡಲಾಯಿತು.

ಸೆ.18 ಇನ್ನೋಸ್ಪಾರ್ಕ್ ಅಂತರ ಕಾಲೇಜು ಸ್ಪರ್ಧೆ, ವಿಚಾರಗೋಷ್ಠಿ



ಮೈಸೂರಿನ ಸೇಪಿಯೆಂಟ್ ಕಾಲೇಜಿನಲ್ಲಿ ಏರ್ಪಡಿಸಿರುವ ರಾಜ್ಯ ಮಟ್ಟದ ಇನ್ನೋಸ್ಪಾರ್ಕ್ ಅಂತರ ಕಾಲೇಜು ಸ್ಪರ್ಧೆಗಳ ಪೋಸ್ಟರ್ ಬಿಡುಗಡೆಗೊಳಿಸಿದರು.

ಮೈಸೂರು, ಸೆ.13(ಜಿಎ)–ಮೈಸೂರಿನ ಸೇಪಿಯೆಂಟ್ ಕಾಲೇಜು ಮತ್ತು ಅಲೈಯೆನ್ಸ್ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಸೆ.18ರಂದು ಕಾಲೇಜಿನ ಆವರಣದಲ್ಲಿ ಎಐ ಮತ್ತು ಆಟೋಮಿಷನ್ ಕುರಿತು ಒಂದು ದಿನದ ರಾಜ್ಯ ಮಟ್ಟದ ಇನ್ನೋಸ್ಪಾರ್ಕ್ ಅಂತರ ಕಾಲೇಜು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಪ್ರಾಂಶುಪಾಲರಾದ ಡಾ.ಕೆ.ಗಣೇಶ್ ತಿಳಿಸಿದರು.

ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಕಾಲೇಜಿನ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದಿನ ತಾಂತ್ರೀಕ ಯುಗದಲ್ಲಿ ಎಐ ಮತ್ತು ಆಟೋಮಿಷನ್‌ನಿಂದ ಉದ್ಯೋಗ ಸೃಷ್ಟಿಯಾಗುತ್ತಿಲ್ಲ ಎಂಬ ವದಂತಿಗಳು ಹಬ್ಬುತ್ತಿರುವುದರಿಂದ ಈ ಅಂತರ ಕಾಲೇಜು ಸ್ಪರ್ಧೆಗಳ ಜೊತೆ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರಗೋಷ್ಠಿಯನ್ನು ಏರ್ಪಡಿಸಲಾಗಿದೆ ಎಂದರು.

ವಿಚಾರಗೋಷ್ಠಿಯಲ್ಲಿ ಹಿರಿಯ ವಿಜ್ಞಾನಿ ಡಾ.ಧರ್ಮ ಪ್ರಸಾದ್, ಉದ್ಯಮಿ ಡಾ.ಚೈತ್ರ ನಾರಾಯಣ್, ಆರ್ಥಿಕ ತಜ್ಞ ಕಶ್ಯಪ್ ಎಸ್.ಪ್ರಸಾದ್, ಅಲೈಯೆನ್ಸ್ ವಿಶ್ವವಿದ್ಯಾನಿಲಯ ಸಹಾಯಕ ಪ್ರಾಧ್ಯಾಪಕ ಡಾ.ತಂಗಜಂ ರವಿಚಂದ್ರ ಸಿಂಗ್ ಭಾಗವಹಿಸಲಿದ್ದಾರೆ. ಈ ಗೋಷ್ಠಿಯಿಂದ ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕೆ ಸಾಕಷ್ಟು ಅನುಕೂಲಗಳಾಗಲಿದ್ದು, ಮೈಸೂರು, ಕೊಡಗು, ಮಂಗಳೂರು ಮತ್ತು ಹಾಸನ ಜಿಲ್ಲೆಗಳಿಂದ ಸುಮಾರು 40 ಕಾಲೇಜಿನಿಂದ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಡೀನ್ ಡಾ.ಸುಜಾತ ಬೋಪಣ್ಣ, ಸಹಾಯಕ ಪ್ರಾಧ್ಯಾಪಕ ಪಾರ್ಥಸಾರಥಿ, ಕಾರ್ಯಕ್ರಮದ ಸಂಯೋಜಕ ಡಾ.ಕೇತನ್ ಸುರೇಶ್ ಉಪಸ್ಥಿತರಿದ್ದರು.

ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಚಿಕ್ಕತಾಯಮ್ಮನವರು

ನಿಧನ: 14.09.2023

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದಿದೆ.
ನಮ್ಮೆಲ್ಲರ ಬಾಳಿಗೆ ಬೆಳಕು ನೀಡಿ ಕಾಪಾಡಿ ಹಗಲಿರುಳು
ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಪತಿ: ಬಸವೇಗೌಡರು, ಮಕ್ಕಳು,
ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
ಡಿ.ಸಾಲುಹುಂಡಿ, ಮೈಸೂರು ತಾ||

4ನೇ ವರ್ಷದ ಸವಿನೆನಪು



ಶ್ರೀಮತಿ **ಅಂಜನಮ್ಮ**
(ನಿವೃತ್ತ ನೌಕರರು, ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ)

ಮರೆಯಲಾಗದ ಮಧುರ ನೆನಪುಗಳೊಂದಿಗೆ ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ನಿಮ್ಮ ಮಗ
ಜೆ.ಮಹದೇವ್ ಪ್ರಸಾದ್
ಲೆಕ್ಕ ಪರಿಶೋಧಕರು ಮತ್ತು ಕುಟುಂಬ ವರ್ಗದವರು



ಹಸಿರು ನಮ್ಮ ಉಸಿರು

PUBLIC NOTICE

Notice is hereby issued to the general public that Smt. ANSI DEVIANCHI DEVI, W/o Sri Champalal, Residing at # 532, M-15 4th Cross, Doddavakkalageri, Mandi Mohalla, Mysuru has agreed to sell the schedule property to my client/s.

Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within TEN (10) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

Schedule

All that piece and parcel of property bearing no. 550, M16, measuring east to west 15'3" feet and north to south 38 feet, totally measuring 581 square feet, situated at 4th Cross, Doddavakkalageri, Mandi mohalla, mysuru comprising of building and bounded on:
East by: Conservancy galli. West by: Property belonging to Narasimhaiah. North by: Road. South by: Property belonging to Narasimhaiah.

Sd/- M. Sanjay Jain, Advocate
#L, 50/2A, 1st Floor, Ashoka Road, Mysuru-570 001. Email: msj186@yahoo.co.in.
Mob: 9341464636
Place: Mysuru
Date: 13/09/2024

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

Building construction including Interior works

Starts from
1999 Rs/sqft
Call 9988554496

FLAT FOR LEASE

3 BHK Flat is for LEASE @ Silver Springs, Hootagally. Total 1717 sq.ft. facing East with 3 balconies, utility area, covered car parking, corner flat in 8th Floor. Contact:
9071899999

Pay Just 3 Lakhs

& Own Your Dream Sites

- Balance through Bank Loan
- Location - Yelwala & TVS Factory Road
- 600 to 1200 Sqft Area
- Starts from 10 Lakhs

NIDHI ESTATES **78991 28100** **88610 66911**

ಜಮೀನು ಮಾರಾಟಕ್ಕಿದೆ

ಮೈಸೂರು ತಾ|| ಜಯಪುರ ಹೋ|| ದೂರ ಗ್ರಾಮದಲ್ಲಿ 19 ಗುಂಟೆ, 1 ಎಕರೆ, 4 ಗುಂಟೆ, ಮದ್ದೂರು 32 ಗುಂಟೆ ಮತ್ತು 25 ಗುಂಟೆ, ಮಾವಿನಹಳ್ಳಿ 3 ಎಕರೆ 7 ಗುಂಟೆ, 4 ಎಕರೆ, 10 ಗುಂಟೆ, ಹತ್‌ವಾಳು 1 ಎಕರೆ 28 ಗುಂಟೆ, ಕೊಳದಹುಂಡಿ 1 ಎಕರೆ 31 ಗುಂಟೆ ಅತಿ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ

9945661696, 9663793666

NAMMANE Constructions Pvt, Ltd

SITES FOR SALE
At Prime Locations in Mysore
20X30, 30X40, 30X50
Newly Built House For Sale At Prime Locations In Mysore
30X40, 40X60
CONSTRUCTIONS | INTERIORS
9986474401
9380468614

ಕೆ.ಪಿ.ಟಿ.ಸಿ.ಎಲ್. ವೇತನ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ.

(ನೋಂದಣಿ ಸಂಖ್ಯೆ :ಎ.ಆರ್.-41: ಎಂ.ಕೆ.ಟಿ: ಆರ್.ಜಿ.ಎನ್./15362/1988-89 ದಿ :16-06-1988)
ಎಂ.ಪಿ.ಎಲ್. ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
ಮೊ: 9901914004, 9113607224.

2023-2024 ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ

ಆಹ್ವಾನ ಪತ್ರಿಕೆ

ದಿನಾಂಕ : 15-09-2024ನೇ ಭಾನುವಾರ ಬೆಳಗ್ಗೆ 11-00 ಘಂಟೆಗೆ
ಸ್ಥಳ : ಹೋಟೆಲ್ ಗೋವರ್ಧನ್ ಸಭಾಂಗಣ, ಶ್ರೀಹರ್ಷ ರಸ್ತೆ, ಮೈಸೂರು
ತಮಗೆಲ್ಲರಿಗೂ ಆದರದ ಸ್ವಾಗತ

ದಿ. ಮೈಸೂರು ಸಿಟಿ ಶ್ರೀ ಶಿವಛತ್ರಪತಿ ಕೋ-ಆಪರೇಟಿವ್ ಸೊಸೈಟಿ (ಲಿ.)

ನಂ. 27/1, ಹೊಸನಂಬರ್ 1/ಎ, ಥಿಯೋಬಾಲ್ಡ್ ರಸ್ತೆ, ನಜರ್‌ಬಾದ್, ಮೈಸೂರು -10.
ಮೊ: 0821-2447192, 2957892, ರಿ.ನಂ.398/ARM 23-12-1930

ಸೊಸೈಟಿಯ 2023-24ನೇ ಸಾಲಿನ 94ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಸನ್ಮಾನ್ಯ ಸಹಕಾರಿ ಬಂಧುಗಳೇ,
ಸೊಸೈಟಿಯ 94ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ದಿನಾಂಕ 15-09-2024ನೇ ಭಾನುವಾರ ಬೆಳಗ್ಗೆ 10-00 ಗಂಟೆಗೆ, ಶ್ರೀ ಲೋಕಾಭಿರಾಮ ಸಮುದಾಯ ಭವನ, ಬೆಳ್ಳಕಟ್ಟೆಗೆ, ಮೇಗಲ್ ಮಿಷನ್, ಡಿ. ದೇವರಾಜ ಅರಸು ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು, ಇಲ್ಲಿ ಸೊಸೈಟಿಯ ಅಧ್ಯಕ್ಷರಾದ ಸನ್ಮಾನ್ಯ ಕೆ. ನಾಗೇಂದ್ರರಾವ್ ರವರ ಘನ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಸಭೆಗೆ ದಯಮಾಡಿ ಆಗಮಿಸಬೇಕಾಗಿ ಕೋರುತ್ತೇವೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/- (ಸುನೀತ) ಕಾರ್ಯದರ್ಶಿ

FOR ADVERTISEMENT

STAR OF MYSORE
Please Call : 0821-2496522 / 23
Email: ad@starofmysore.com

ಮೈಸೂರು ಮಿತ್ರ
Please Call: 0821-2496522 / 23
Email: ad@mysurumithra.com

ಶ್ರೀ ಛಾಯಾದೇವಿ ವಿದ್ಯಾನಿಕೇತನ ಟ್ರಸ್ಟ್ (ರಿ)

ಶ್ರೀ ಮಹಾವೀರ್ ಶಿಕ್ಷಣ ಮಹಾವಿದ್ಯಾಲಯ (ಬಿ.ಎಡ್.) ಮಂಜುನಾಥ ಬಡಾವಣೆ, ಹುಣಸೂರು.

ಪ್ರಾಂಶುಪಾಲರು ಮತ್ತು ಉಪನ್ಯಾಸಕರ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸಿ : 9113995407

ಕ್ರ ಸಂ	ಹುದ್ದೆ	ವಿದ್ಯಾರ್ಹತೆ
01	ಪ್ರಾಂಶುಪಾಲರು–01	ಎಂ.ಎ./ಎಂ.ಎಸ್ಸಿ, ಎಂ.ಎಡ್. ಶೇ.55 ಅಂಕಗಳು, ಜೊತೆಗೆ ಪಿ.ಹೆಚ್.ಡಿ ಮತ್ತು 10 ವರ್ಷಗಳ ಸೇವಾನುಭವ.
02	ಉಪನ್ಯಾಸಕರು–20	ಎಂ.ಎ./ಎಂ.ಎಸ್ಸಿ, ಎಂ.ಎಡ್, ಎಂ.ಫಿಲ್,SLET / NET ಸೇವಾನುಭವದವರಿಗೆ ಆದ್ಯತೆ ಇತಿಹಾಸ (2), ಭೂಗೋಳಶಾಸ್ತ್ರ (2), ಭೌತಶಾಸ್ತ್ರ–(2), ಗಣಿತ–(2), ಜೀವಶಾಸ್ತ್ರ–(2) ಮತ್ತು ರಸಾಯನ ಶಾಸ್ತ್ರ–(2), ಮನೋವಿಜ್ಞಾನ –(2), ವಾಣಿಜ್ಯಶಾಸ್ತ್ರ (2)
03	ದೈಹಿಕ ಶಿಕ್ಷಣ ನಿರ್ದೇಶಕರು–01	ಬಿ.ಪಿ.ಎಡ್,ಎಂ.ಪಿ.ಎಡ್. ಸೇವಾನುಭವದವರಿಗೆ ಆದ್ಯತೆ.
04	ಗ್ರಂಥಪಾಲಕರು–01	ಎಂ.ಎ./ಎಂ.ಎಲ್.ಐ.ಎಸ್ಸಿ, ಬಿ.ಇಡಿ. ಸೇವಾನುಭವದವರಿಗೆ ಆದ್ಯತೆ.

ವಿ.ಸೂ:- ಅರ್ಹ ಅಭ್ಯರ್ಥಿಗಳು ವಿದ್ಯಾರ್ಹತೆ, ಸೇವಾನುಭವಗಳನ್ನು ಒಳಗೊಂಡ ಮೂಲ ದಾಖಲಾತಿಗಳೊಂದಿಗೆ ಪ್ರಕಟಿಸಿದ 07 ದಿನದೊಳಗೆ ಕಾಲೇಜಿನ ಅಧ್ಯಕ್ಷರ ವಿಳಾಸಕ್ಕೆ scvt8055@gmail.com ಅರ್ಜಿಗಳನ್ನು ಸಲ್ಲಿಸತಕ್ಕದ್ದು.

PUBLIC NOTICE

Notice is hereby given to general public, that my client is planned to purchase below mentioned schedule property from 1).Smt.Nagamma W/o M.S.Chikkasiddappa @ Chikkasiddaiah & her son 2).Sri.C.Shantaraju, daughter in-law 3).Smt.Ashwini.C W/o C.Shantaraju, minor grandson 4). Master.Manam S/o C.Shantharaju, her elder daughter 5) Smt.C.Vasantha Kumari W/o S.Siddaraju and her younger daughter 6) Smt.C.Chandrakala W/o Seetharamu.C, All are residence of door no-1147, 2nd Cross, Kurubgeri, Laskar Mohalla, Mysuru City. Any person/s claiming any interest on the schedule property are hereby required to communicate the same to me with documentary evidence within thirty (30) days from today, or otherwise the sale will be completed without any such purported claim or interest, which shall be deemed & have waived for all intents and purposes.

SCHEDULE PROPERTY

All piece & parcel of the property bearing door No- 1147, New No-L-24, 2nd Cross, Kurubgeri, Laskar Mohalla, Mysuru City, measuring East to West 10 feet & North to South 10 feet, consisting 1.00 Sq. Feet AC Sheet commercial shop with rolling shutter, having separate water & electricity, bounded by:- East by : Property of Nanjundachar. West by: Property of D.Puttaswamy. North by: 15 Feet Govt.Road. South by: Property of Nagamma & Thimamma.

SD/-V.RAVI KUMAR,M.B.A., LL.M., Advocate, KAR-3176/2010 "SURYA LAW CHAMBER" Opp.Mandi Police Station. K.T.Street, Mysore-570021. Ph: 90081-62128. Email:-advocatevravikumar@gmail.com.
Place: Mysore, Date: 14.09.2024.

SITES FOR SALE

MANGO TREE LAYOUT
After - Yelwala Fully Developed & Ready for Construction
9880774395

WANTED

Accountant/Office Asst./ R&D Asst. & Sales Executive
Experienced candidates in relevant field.
Contact: **+91 84314 29709**
E-mail CV to :
office@solraynutras.com
SOLRAY NUTRAS PVT LTD., Nutritional Food Company, # H1,
Shree Hari Medical Complex, 1st Floor,
Vijayanagar 2nd Stage, Mysore-17



JOCKEY
FACTORY SECONDS UPTO 50% OFF*
*T & C apply
· 10 am to 8 pm · Open All Days · Master / Visa Card Accepted
ONLY LEISUREWEAR · ACTIVEWEAR · KIDSWEAR · THERMALS & SOCKS

Venues in Mysore & Hassan
Mysore: Sri Nanjaraja Bahaddur Choultry Vinoba Road, Near Metropole Circle
Hassan: Sri Sringeri Shankar Math, Shankar Math Road, K.R. Puram
Org. by: Surya Agency Pvt. Ltd.

ಕರ್ನಾಟಕ ರಾಜ್ಯ ಕಾಲೇಜು ಅಧ್ಯಾಪಕರ ಹಾಗೂ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ ನಿ.

#22, 2ನೇ ಮಹಡಿ, 1ನೇ ಕ್ರಾಸ್, ಬಸವೇಶ್ವರ ಮಾರ್ಗ (ಪಾರ್ಕ್ ಮುಂಭಾಗ)
ಗುರುಕುಲ ಲೇಔಟ್, ಜೆ.ಪಿ.ನಗರ, ಹೊರವರ್ತುಲ ರಸ್ತೆ, ಕುಪ್ಪಲೂರು, ಮೈಸೂರು - 570001
ನೋಂದಣಿ ಸಂಖ್ಯೆ: ಹೆಚ್.ಎಸ್.ಜಿ-2/236 ಹೆಚ್.ಹೆಚ್.ಎಸ್/38531/2009-10

ಸರ್ವಸದಸ್ಯರ ವಾರ್ಷಿಕ ಮಹಾಸಭೆ

ಮೇಲ್ಕಂಡ ನಮ್ಮ ಸಂಘದ 2023-24ನೇ ಸಾಲಿನ 15ನೇ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 14-09-2024ರ ಶನಿವಾರ ಬೆಳಗ್ಗೆ 11:00 ಗಂಟೆಗೆ ಅರಸು ಮಂಡಳಿ, # 1483/ಎಫ್-1, ಅಕ್ಕನ ಬಳಗ ಕ್ರಾಸ್, ತ್ಯಾಗರಾಜ ರಸ್ತೆ, ಮೈಸೂರು, ಇಲ್ಲಿ ಸಂಘದ ಅಧ್ಯಕ್ಷರಾದ ಡಾ.ಎಂ.ಎಸ್.ಮಹದೇವಸ್ವಾಮಿ ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಆದ್ದರಿಂದ ಎಲ್ಲಾ ಅರ್ಹ ಸದಸ್ಯರು ಮಹಾಸಭೆಗೆ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇವೆ

ಸಹಿ/- (ಶ್ರೀಮತಿ ಅರ್ಪಿತ ಹೆಚ್.ಎಸ್) ಪ್ರಭಾರ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ನಿವೇಶನಗಳು ಮಾರಾಟಕ್ಕಿವೆ

ಸೈನಿಕ ನಗರ ಬಡಾವಣೆ

ಡೆವಲಪರ್– ARAMANE NAGARA DEVELOPERS
ಇಲವಾಲದಿಂದ ಕೇವಲ 5 ಕಿ.ಮೀ., NH-275 ಗೆ ಹೊಂದಿಕೊಂಡಿದೆ.
ಪ್ರತಿ ಚದರ ಅಡಿಗೆ ಕೇವಲ **ರೂ.699/- & ರೂ.999/-**
ಉಚಿತ ನಿವೇಶನ ಭೇಟಿ ಲಭ್ಯವಿರುತ್ತದೆ.
ಆಸಕ್ತರು ಕರೆ ಮಾಡಿ : **95131 57993, 74062 84792**

ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ), ಮೈಸೂರು

ಸಹಕಾರ ಸಂಕೀರ್ಣ, ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು–570 004. ಫೋನ್: 0821–2447492

ಸರ್ವಸದಸ್ಯರ 35ನೇ ವಾರ್ಷಿಕ ಸಾಮಾನ್ಯ ಸಭೆ

ಸಂಘದ ಸರ್ವಸದಸ್ಯರ 35 ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: **15–09–2024** ನೇ ಭಾನುವಾರ ಬೆಳಿಗ್ಗೆ **10–00** ಗಂಟೆಗೆ, ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ಕಲಾಮಂದಿರ ಸಭಾಂಗಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಮಹೇಶ್ ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದ್ದು, ಈ ಸಂಬಂಧ ಎಲ್ಲಾ ಅರ್ಹ ಸದಸ್ಯರುಗಳಿಗೂ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಪ್ರಮಾಣ ಪತ್ರದ ಮೂಲಕ ರವಾನಿಸಲಾಗಿದೆ. ಸದರಿ ಆಹ್ವಾನ ಪತ್ರಿಕೆ ತಲುಪದೆ ಇರುವಂತಹ ಅರ್ಹ ಸದಸ್ಯರುಗಳು ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ಮಹಾಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ವಿಶೇಷ ಸೂಚನೆ: 1. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಸದಸ್ಯರುಗಳು ಸಂಘದ ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ತರಲು ಕೋರಿದೆ.

ಸಹಿ/– ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.) ಮೈಸೂರು

ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ನಿ. ಮೈಸೂರು

ಹಿರಿಯ ಸಹಕಾರಿಗಳ ಸನ್ಮಾನ ಸಮಾರಂಭ

ದಿನಾಂಕ : 15.09.2024 ಭಾನುವಾರ, ಬೆಳಗ್ಗೆ: 10.30 ಘಂಟೆಗೆ
ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು

ದಿವ್ಯಸಾನಿಧ್ಯ	:	ಪರಮಪೂಜ್ಯ ಡಾ. ಶರತ್ ಚಂದ್ರ ಸ್ವಾಮೀಜಿರವರು ಅಧ್ಯಕ್ಷರು, ಶ್ರೀ ಕುಂದೂರು ಮಠ, ಮೈಸೂರು
ಉದ್ಘಾಟನೆ	:	ಶ್ರೀ ಬಸವರಾಜ ಹೊರಟ್ಟಿರವರು, ಸಭಾಪತಿಗಳು, ವಿಧಾನಪರಿಷತ್, ಕರ್ನಾಟಕ ಸರ್ಕಾರ
ಅಧ್ಯಕ್ಷತೆ	:	ಶ್ರೀ ಸುನೀಲ್ ಬೋಸ್ ರವರು, ಸಂಸದರು, ಚಾಮರಾಜನಗರ ಲೋಕಸಭಾ ಕ್ಷೇತ್ರ
ಮುಖ್ಯ ಅತಿಥಿಗಳು	:	ಶ್ರೀ ಜಿ.ಡಿ. ಹರೀಶ್ ಗೌಡರವರು, ಶಾಸಕರು, ಹುಣಸೂರು ವಿಧಾನಸಭಾ ಕ್ಷೇತ್ರ

ಸಹಕಾರ ರತ್ನ ಸನ್ಮಾನಿತರು:
ಶ್ರೀ ನರಸಿಂಹಶೆಟ್ಟಿ ಕೆ.ವಿ. ಶ್ರೀ ಪುಟ್ಟಸ್ವಾಮಿ ಬಿ. ಶ್ರೀ ವಿಜಯ ಕುಮಾರ್ ಎಸ್.ಬಿ. ಶ್ರೀ ಸದಾನಂದ ಎಸ್. ಶ್ರೀ ಪುಟ್ಟಸ್ವಾಮಿ ಎಂ.ಕೆ.. ಶ್ರೀ ಸಿದ್ದರಾಜು., ಶ್ರೀ ನಾಗರಾಜನ್ ಪಿ.ಸಿ., ಶ್ರೀ ಅನಂತರಾಮಯ್ಯ ಕೆ.ಎಲ್. ಶ್ರೀ ನಾಗರಾಜು ಎನ್.. ಶ್ರೀ ರಾಮು ಡಿ., ಶ್ರೀ ಕೃಷ್ಣ ಜಿ.. ಶ್ರೀ ಚಂದ್ರ ಕೆ... ಶ್ರೀ ಚನ್ನಯ್ಯ.. ಶ್ರೀ ಮಹದೇವಪ್ಪ, ಶ್ರೀಮತಿ ಬಾಲಂಬ,, ಕು.ಕಾತ್ಯಾಯಿನಿ., ಶ್ರೀಮತಿ ಜಯಲಕ್ಷ್ಮಿ ಎನ್., ಶ್ರೀಮತಿ ಸೀತಾಲಕ್ಷ್ಮಿ ಕೆ.ಆರ್.. ಶ್ರೀಮತಿ ಸುಶೀಲಮ್ಮ,, ಶ್ರೀಮತಿ ಆಶಾಕುಮಾರಿ ಡಿ., ಶ್ರೀಮತಿ ಸುನಂದ ಕೆ.ಎಸ್.

99ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಸಮಾರಂಭ

ದಿನಾಂಕ : 15.09.2024, ಬೆಳಗ್ಗೆ: 11.30 ಗಂಟೆಗೆ

ಬ್ಯಾಂಕಿನ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಪ್ರತಿಧ್ವನಿ ಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿರುತ್ತೆ. ಈಗಾಗಲೇ ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಲಕ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದು ಸಭೆಗೆ ಸಕಾಲಕ್ಕೆ ಆಗಮಿಸಬೇಕಾಗಿ ಕೋರುತ್ತೇವೆ.

ಪ್ರತಿಧ್ವನಿ ಪ್ರಸಾದ್	ಡಿ. ಬಸವರಾಜು (ಬಸಪ್ಪ)	ಡಿ. ಅನಂತವೀರಪ್ಪ
ಅಧ್ಯಕ್ಷರು	ಉಪಾಧ್ಯಕ್ಷರು	ಪ್ರ. ವ್ಯವಸ್ಥಾಪಕರು

ನಿರ್ದೇಶಕರುಗಳಾದ: ನಂ.ಸಿದ್ದಪ್ಪ, ಎಂ.ಡಿ.ಪಾರ್ಥಸಾರಥಿ (ಪಾತಿ) ಹೆಚ್. ವಿ.ಭಾಸ್ಕರ್, ಎಂ.ಎಸ್. ಅರುಣ್ (ಅರುಣ್ ಸಿದ್ದಪ್ಪ), ಕೆ.ಜಿ.ಶಂಕರನಾರಾಯಣಶಾಸ್ತ್ರಿ, ಶ್ರೀಮತಿ ಹೆಚ್.ಎನ್.ಸರ್ವಮಂಗಳ, ಎಂ.ಎನ್. ನವೀನ್ ಕುಮಾರ್, ಹೆಚ್.ವಾಸು, ಬಿ. ನಾಗರಾಜು ವೃತ್ತಿಪರ ನಿರ್ದೇಶಕರು: ಎ. ಶ್ರೀನಿವಾಸಶೆಟ್ಟಿ, ವಿ.ಎಂ. ನಾಗೇಂದ್ರಪ್ರಸಾದ್,

ವಿ.ಸೂಚನೆ:1. ASG ಕಣ್ಣಿನ ಆಸ್ಪತ್ರೆ ಸಹಯೋಗ ಮತ್ತು ಬ್ಯಾಂಕಿನ ವತಿಯಿಂದ ಸದಸ್ಯರುಗಳಿಗೆ ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣೆ ಶಿಬಿರವಿರುತ್ತದೆ. ಸದಸ್ಯರುಗಳು ಸದುಪಯೋಗಪಡಿಸಿಕೊಳ್ಳಬೇಕಾಗಿ ಕೋರಲಾಗಿದೆ.

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ https://kppp.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2024-25/ IND0955	ಒಕ್ಕೂಟಕ್ಕೆ ಅಗತ್ಯವಿರುವ ಆಗ್ರೋ ಬೇಸ್ಡ್ ಬ್ರಿಕೆಟ್ಸ್ ಅನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	27.09.2024 ಸಂಜೆ 5.00 ಗಂಟೆಯವರೆಗೆ
2	KMF/2024-25/ SE2467	ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ 60 x 40 ಅಳತೆಯ ನಂದಿನಿ ಮಾರಾಟ ಮತ್ತು ಪ್ರಚಾರ ಮಳಿಗೆಯನ್ನು ಬಾಡಿಗೆ ಆಧಾರದಲ್ಲಿ ನಿರ್ಮಿಸುವ ಬಗ್ಗೆ.	19.09.2024 ಮಧ್ಯಾಹ್ನ 2.00 ಗಂಟೆಯವರೆಗೆ
3	KMF/2024-25/ IND0956	ಒಕ್ಕೂಟಕ್ಕೆ ಅಗತ್ಯವಿರುವ ಗೋಡಂಬಿಯನ್ನು ಅರ್ಧ ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸಲು ಹಾಗೂ ಕೆನೆ ಸಹಿತ/ ಕೆನೆ ರಹಿತ ಹಾಲಿನ ಪುಡಿ ಪ್ಯಾಕಿಂಗ್ ಯಂತ್ರದ ಪೂರೈಕೆ, ಅಳವಡಿ ಸೇವೆಯನ್ನು ಪಡೆಯಲು	21.09.2024 ಸಂಜೆ 5.00 ಗಂಟೆಯವರೆಗೆ
4	KMF/2024-25/ IND0957	ಒಕ್ಕೂಟಕ್ಕೆ ಅಗತ್ಯವಿರುವ ಸಿ.ಐ.ಪಿ ಕೆಮಿಕಲ್ (ಸ್ಟಾಟಿಕ್–100/ ಡಿವೋಸ್ಟಾರ್ ಕ್ವಾಟ್ರೋ) ಖರೀದಿಸುವ ಬಗ್ಗೆ.	21.09.2024 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು, (7411654265) ಸಂಪರ್ಕಿಸಬಹುದಾಗಿದೆ.
ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,



Garden VARELI
ಹಬ್ಬದ ಸಂಭ್ರಮಕ್ಕೆ ಕಳೆ ನೀಡಲು ಇಲ್ಲಿದೆ ಇನ್ನೂ ಒಂದು ಕಾರಣ !
ಪ್ರೇರಕ ಡಿಸೈನ್‌ಗಳು. ಮನಮೋಹಕ ಪ್ರಿಂಟ್‌ಗಳು !
40%ರ ತನಕ ಡಿಸ್ಕೌಂಟ್ ಸೆಕೆಂಡ್ ಸೇಲ್
ಮಾರಾಟ ಈಗ ಲೈವ್ ಆಗಿದೆ | ಸಮಯ- ಬೆಳಗ್ಗೆ ಗಂಟೆ 10.00 ರಿಂದ ರಾತ್ರಿ ಗಂಟೆ 8.00 (ರವಿವಾರವೂ ತೆರೆದಿರುತ್ತದೆ)
ಸೀರೆಗಳು ₹395 ರಿಂದ ಆರಂಭ | ಡ್ರೆಸ್ ಮೆಟೀರಿಯಲ್ ₹74/ಮೀ.ನಿಂದ ಆರಂಭ | ಸಲ್ವಾರ್ ಸೆಟ್ ಪೀಸ್‌ಗಳ ವಿಶೇಷ ಶ್ರೇಣಿ
ಹೋಟೆಲ್ ಅಭಿಷೇಕ್, 2930/A, (ಆನಂದ್ ವಿಹಾರ್ ಕಲ್ಯಾಣ ಭವನ ಕಾಂಪೌಂಡು), ಕಲ್ಯಾಣ್ ಜ್ಯುವೆಲರ್ಸ್ ಪಕ್ಕದಲ್ಲಿ, ಬಿ. ಎನ್. ರಸ್ತೆ, ಮೈಸೂರು- 570001.

FLAT FOR SALE

At TRENDZ APARTMENT,
Bogadi, Mysore
3BHK, East Face,
1534 Sqft, Premium Interior,
Ready to occupy
9901776177

ಪ್ರತಿಷ್ಠಿತ ರಿಯಲ್ ಎಸ್ಟೇಟ್ ಕಂಪನಿಗೆ ಭೂಮಿ ಬೇಕಾಗಿದೆ

ಮೈಸೂರು ಬೆಂಗಳೂರು ಹೆದ್ದಾರಿ ಹತ್ತಿರ
ಉತ್ತಮ ರಸ್ತೆ ಪ್ರವೇಶ ಮತ್ತು ಸ್ಪಷ್ಟ ದಾಖಲೆಗಳೊಂದಿಗೆ
8–12 ಎಕರೆ ಒಣ ಭೂಮಿ ಅಗತ್ಯವಿದೆ.
ಎಕರೆಗೆ 40 ಲಕ್ಷ ರೂ. ಮಣಿಪಾಲ್ ಆಸ್ಪತ್ರೆಯಿಂದ
20 ನಿಮಿಷಗಳ ಒಳಗೆ ಇರುವಂತೆ.
9731749500

NOT GETTING YOUR
STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

ESS & ESS INFRASTRUCTURE PVT. LTD.

ESS & ESS INFRASTRUCTURE PVT. LTD. 100 + Projects



RERA No. : PRM/KA/RERA/1268/378/PR/091123/006396

ಮೈಸೂರಿನಲ್ಲಿ MUDA ಅನುಮೋದಿತ ನಿವೇಶನವನ್ನು ಖರೀದಿಸಿ
APPROVED MUDA APPROVED · REGISTERED RERA REGISTERED
ಆಕರ್ಷಕ SPOT OFFER ನಿಮ್ಮದಾಗಿಸಿ
30 x 40 | 30 x 50
40x 60 & Bigger Dimensions
990 116 4444
www.essandess.in ಶೇ 80% ವರೆಗೆ Bank Loan ಲಭ್ಯವಿದೆ

PUBLIC NOTICE

It is hereby brought to the notice of the General Public that my client who is a Share Holder and the Director of M/s Magnum Metrolics (India) Pvt. Ltd. (Formerly known as Mysore Precision Engineers), having its registered office at C-122 &123, Yadavagiri Industrial Estate, Mysore has learnt that the company, through its Managing Director, Sri. M.V. Nandakumar is attempting to alienate the assets of the company covering land, buildings, machineries and etc, by either creating third party rights or leasing out the premises without the knowledge, consent and authority of the Board of Directors and Share Holders of the company. All these acts are detrimental to the interest of my client and other Share Holders and the interests of the company itself.

My client has also preferred a company petition bearing No. 88/2022 that is pending before the Hon'ble NCLT, Bengaluru Bench. The Hon'ble Tribunal on 05.12.2O22 was pleased to grant an order of interim stay, directing the company and its other directors to not alienate the assets of the company. This interim order subsists and is extended till the next date of hearing.

Hence the General Public are hereby cautioned not to deal/transact with the said aforesaid Managing Director of the company or any person acting under him or through him, in respect of the assets of the above mentioned private limited company in any way or in any manner what so ever. If anybody/entity deal/transact in respect of the scheduled assets of the company, they will be doing so on their own risk and cost and any such transaction will be subject to my client's right over the company.

Details of assets of M/s Magnum, Metrolics India Pvt. Ltd., KSIIDC allotted C-type sheds bearing shed No. C-122 and C-123 in KSIIDC, Yadavagiri Industrial Estate, Yadavagiri, Mysore-57.

All the plant and machineries, installed and operating situated in the 2 sheds.

Sd/- Mr. Shyam Harindra Advocate,
For Raghuram Cadambi,
No. 519-520, Prestige Centre Point, Level 5, No.7,
Cunningham Road, Bangalore-560 052